ಸಂಪುಟ: 13 Volume | ಸಂಚಿಕೆ: 357 Issue | ಪುಟಗಳು 08 Pages | ಮಂಗಳವಾರ 24 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಕರುಣೆ ಹೃದಯದ ಅಂತರಾಳದಿಂದ ಬರಬೇಕು. ಅದೇ ನಿಜವಾದ ಕರುಣೆ.

–ಮಹಾತ್ಮಾ ಗಾಂಧಿ


# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ತುಂಗಭದ್ರೇಯ ಹೂಳನ್ನು ತೆಗೆಯುವುದು ಎಂದು? 6 | ಬಿಜೆಪಿಗೆ ಐತಿಹಾಸಿಕ ಗೆಲುವು: ಜೋಶಿ 7 | ಕಾಂಗ್ರೆಸ್ ದ್ರೋಹದ ವಿವರ ಕೊಟ್ಟ ಗೌಡರು 8



ವಿಧಾನ ಸಭೆ ಅಧಿವೇಶನ ಸಂದರ್ಭದಲ್ಲಿ ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಮಾಜಿ ಸಚಿವ ಎಚ್. ಡಿ. ರೇವಣ್ಣ ಉಭಯ ಕುಶಲೋಪರಿ.

## ಯುದ್ಧದಿಂದ ಭಾರತಕ್ಕೆ ಹಿರಿಯ ಸವಾಲು

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಇರಾನ್–ಅಮೆರಿಕ ಮತ್ತು ಇಸ್ರೇಲ್ ನಡುವಿನ ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಭಾರತಕ್ಕೆ ಅಭೂತಪೂರ್ವ ಸವಾಲುಗಳು ಎದುರಾಗಿದ್ದು, ಅವುಗಳೆಲ್ಲವನ್ನೂ ಎದುರಿಸಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ಮೋದಿ ಘೋಷಿಸಿದ್ದಾರೆ.

ಇರಾನ್ ಯುದ್ಧ ಕುರಿತು ಇದೇ ಮೊದಲ ಬಾರಿಗೆ ಲೋಕಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷವನ್ನು "ಆತಂಕಕಾರಿ". ಭಾರತಕ್ಕೆ "ಅಭೂತಪೂರ್ವ" ಸವಾಲುಗಳನ್ನು ಸೃಷ್ಟಿಸಿದೆ. ಎಲ್ಲಾ ಕಡೆಯವರು ಶಾಂತಿಯನ್ನು ಪುನಃಸ್ಥಾಪಿಸಬೇಕು ಎಂದು ತಾಯಿಸಿದ್ದಾರೆ.



ಈ ಬಿಕ್ಕಟ್ಟು ಆರ್ಥಿಕ, ರಾಷ್ಟ್ರೀಯ ಭದ್ರತೆ ಮತ್ತು ಮಾನವೀಯ ಸವಾಲುಗಳನ್ನು ಒಡ್ಡಿದೆ. ಭಾರತವು ತನ್ನ ಎಲ್ಪಿಜಿಯ 60% ಅನ್ನು ಆಮದು ಮಾಡಿಕೊಳ್ಳುತ್ತದೆ. ದೇಶೀಯ ಪೂರೈಕೆಗೆ ಆದ್ಯತೆ ನೀಡಲು ಮತ್ತು ದೇಶಾದ್ಯಂತ ಸುಗಮ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು, ಸಾರ್ವಜನಿಕರಿಗೆ ತೊಂದರೆಗಳನ್ನು ಕಡಿಮೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ ಎಂದು ವಿವರಿಸಿದ್ದಾರೆ.

## ಪ್ರಗತಿ ಕಾರ್ಯಕ್ಕೆ ಅನುದಾನ ಅಸ್ತು

• ಮಲ್ಲಮ್ಮ ನುಡಿ ವಾರ್ತೆ ಹಳಿಯಾಳ

ಪಟ್ಟಣದಲ್ಲಿ ವಿ ಆರ್ ದೇಶಪಾಂಡೆ ರಸ್ತೆ ವಿ.ಡಿ.ಐ.ಟಿ ಕಾಲೇಜಿನಿಂದ ಧಾರವಾಡ ರಸ್ತೆ ಸಮಾವೇಶ ಕೇಂದ್ರದ ವರೆಗೆ ಹಾಗೂ ಬಸವೇಶ್ವರ ವೃತ್ತದಿಂದ ಚೆನ್ನಮ್ಮ ವೃತ್ತ ಅನೆಗುಂದಿ ಪ್ಲಾಟ್ ಕ್ರಾಸ್ ಬಸ್ ನಿಲ್ದಾಣ ರಸ್ತೆದವರಿಗೆ ನಗರ ಅಭಿವೃದ್ಧಿ ಇಲಾಖೆಯಿಂದ ಅಲಂಕಾರಿಕ ದೀಪಗಳ ಅಳವಡಿಕೆಗೆ 337 ಲಕ್ಷ ರೂಪಾಯಿ ಮಂಜೂರಿ ಮಾಡಲಾಗಿದೆ ಎಂದು ಶಾಸಕ ಆರ್ ವಿ ದೇಶಪಾಂಡೆ ಹೇಳಿದ್ದಾರೆ.

ತಮ್ಮ ಸ್ವಗೃಹದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಶಾಸಕ, ಹಳಿಯಾಳ ಪಟ್ಟಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಖೇಲೊ ಇಂಡಿಯಾ ಕ್ರೀಡಾಂಗಣ ಅಭಿವೃದ್ಧಿಗೆ ಹೆಚ್ಚುವರಿಯಾಗಿ ಯುವ



ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 248 ಲಕ್ಷ ಮಂಜೂರಿಯಾಗಿದ್ದು ಹಾಗೂ ಹಳಿಯಾಳ ಸರ್ಕಾರಿ ಉರ್ದು ಬಾಲಕಿಯ ಶಾಲೆಗೆ ಜಾಗವನ್ನು ಲೀಸ್ ಮೇಲೆ ಪಡೆಯಲು 43. 50 ಲಕ್ಷ ರೂಪಾಯಿ ಮಂಜೂರೆಯಾಗಿದೆ ಎಂದಿದ್ದಾರೆ.

## ಜಿಬಿಎ ಚುನಾವಣೆಗೆ ಬಿಜೆಪಿ ಸಿದ್ಧತೆ

**ಬೆಂಗಳೂರು:** ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಚುನಾವಣೆಗೆ ಬಿಜೆಪಿ ಸಿದ್ಧತೆ ನಡೆಸಿದ್ದು, ರಾಜ್ಯ ಮಟ್ಟದಲ್ಲಿ, ಪ್ರತಿ ನಿಗಮ ಮಟ್ಟದಲ್ಲಿ ಮತ್ತು ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ಉಸ್ತುವಾರಿಗಳನ್ನು ನೇಮಿಸಿದೆ. ಜಿಬಿಎ ರಾಜ್ಯ ತಂಡದಲ್ಲಿ ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ಮತ್ತು ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ, ಕೇಂದ್ರ ಸಚಿವರಾದ ವಿ. ಸೋಮಣ್ಣ ಶೋಭಾ ಕರಂದ್ಲಾಜೆ, ಮಾಜಿ ಸಚಿವ ಎಸ್. ಸುರೇಶ್ ಕುಮಾರ್, ಡಾ. ಸಿ.ಎನ್. ಅಶ್ವತ್ಥನಾರಾಯಣ್, ಸಂಸದ ಪಿ.ಸಿ. ಮೋಹನ್, ಡಾ. ಸಿ. ಎನ್. ಮಂಜುನಾಥ್, ತೇಜಸ್ವಿ ಸೂರ್ಯ, ಡಾ. ಕೆ. ಸುಧಾಕರ್, ಎನ್.ಎಸ್. ನಂದೀಶ್ ರೆಡ್ಡಿ ಇದ್ದಾರೆ

## ಡಿಕ್ಕಿ: ನಾಲ್ವರು ಸ್ಥಳದಲ್ಲೇ ಸಾವು

**ರಾಮನಗರ:** ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಡಿವೈಡರ್‌ಗೆ ಬಸ್ ಡಿಕ್ಕಿಯಾಗಿ ನಾಲ್ವರು ಪ್ರಯಾಣಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಿಕೆ ಟ್ರಾವೆಲ್ಸ್ ಕಂಪನಿಗೆ ಸೇರಿದ ಬಸ್ ಕೇರಳದಿಂದ ಬೆಂಗಳೂರು ಕಡೆಗೆ ತೆರಳುತ್ತಿತ್ತು. ಈ ವೇಳೆ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಸಂಕಲಗೆರೆ ಗ್ರಾಮದ ಪುಟ್ಟಪ್ಪನದೊಡ್ಡಿ ಬಳಿ ಬಸ್ ಡಿವೈಡರ್‌ಗೆ ಡಿಕ್ಕಿಯಾದಾಗ ಈ ದುರಂತ ಸಂಭವಿಸಿದೆ. ಪ್ರಯಾಣಿಕರಿಗೆ ಗಾಯಗಳಾಗಿವೆ. ಪ್ರಕರಣ ದಾಖಲಾಗಿದೆ.

## ನನಗೇನೂ ಆಗಿಲ್ಲ: ತಂಗಡಿಗಿ

**ತುಮಕೂರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರಿಗೆ ಏಕಾಏಕಿ ಎದೆ ನೋವು ಕಾಣಿಸಿಕೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂಬ ಮಾಹಿತಿ ಹೊರಬಿದ್ದಿತ್ತು. ಇದಕ್ಕೆ ಈಗ ಸ್ವತಃ ಸಚಿವರೇ ಪ್ರತಿಕ್ರಿಯೆ ನೀಡಿದ್ದಾರೆ. ತಾವು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದು ಆತಂಕಪಡುವ ಅಗತ್ಯವಿಲ್ಲ ಎಂದಿದ್ದಾರೆ. ನಾಲ್ಕು ದಿನಗಳ ಹಿಂದೆ ನನ್ನ ಕನಕಗಿರಿ ಮತಕ್ಷೇತ್ರಕ್ಕೆ ಹೋಗಿದ್ದೆ. ಕಾರ್ಯಕ್ರಮ ಮುಗಿಸಿಕೊಂಡು ಕೊಪ್ಪಳದಿಂದ ಬೆಂಗಳೂರಿಗೆ ಹೊರಟು ಬರುವಾಗ ಎದೆ ಚುಚ್ಚಿದ ಅನುಭವ ಆಯಿತು. ತುಮಕೂರಿನ ಸಿದ್ಧಗಂಗಾ ಆಸ್ಪತ್ರೆಯಲ್ಲಿ ಒಮ್ಮೆ ತಪಾಸಣೆ ಮಾಡಿಸುವಂತೆ ಸೂಚಿಸಿದರು ಎಂದಿದ್ದಾರೆ.



# ಕಮಲ ಕಳೆ ಕೈಯಲ್ಲಿ ಕಿಡಿ

## ರಂಗೇರ ತೊಡಗಿದ ಬೈ ಎಲೆಕ್ಷನ್ | ಅಭ್ಯರ್ಥಿಗಳಿಂದ ನಾಮಪತ್ರ | ಕಾಂಗ್ರೆಸ್‌ಗೆ ಬಂಡಾಯ ಬಿಸಿ


• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ಹಾಗೂ ದಾವಣಗೆರೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಕಣ ಕಾವೇರತೊಡಗಿದೆ. ಬಿಜೆಪಿ ಅಭ್ಯರ್ಥಿ ಗೆಲ್ಲುವ ಹುಮ್ಮಸ್ಸಿನಲ್ಲಿದ್ದರೆ, ಕಾಂಗ್ರೆಸ್ ಹುರಿಯಾಳು ಸಮರ್ಥ್‌ಗೆ ಬಂಡಾಯದ ಬಿಸಿ ತಾಕಿದೆ. ಬಾಗಲಕೋಟೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಉಮೇಶ್ ಮೇಟಿ ಹಾಗೂ ಬಿಜೆಪಿ ಅಭ್ಯರ್ಥಿಯಾಗಿ ವೀರಣ್ಣ ಚರಂತಿಮಠ ಅವರು ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ. ದಾವಣಗೆರೆ ಅಭ್ಯರ್ಥಿ ಸಮರ್ಥ್ ಕೂಡ ಸಿಎಂ, ಡಿಸಿಎಂ ಸಮ್ಮುಖ ನಾಮಪತ್ರ ಸಲ್ಲಿಸಿದ್ದಾರೆ.

**ಕಾಂಗ್ರೆಸ್ ಬಿಜೆಪಿ ಬೃಹತ್ ಸಮಾವೇಶ:** ನಾಮಪತ್ರ ಸಲ್ಲಿಕೆಯ ಪ್ರಕ್ರಿಯೆ ಮುಗಿದ ಬಳಿಕ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಬೃಹತ್ ಬಹಿರಂಗ ಸಭೆಗಳನ್ನು ನಡೆಸಿವೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಘಟಾನುಘಟಿ ನಾಯಕರು ಭಾಗವಹಿಸಿದ್ದಾರೆ.

**ಗಣ್ಯಾತಿ ಗಣ್ಯ ರಣ ಕಲಿಗಳು ಭಾಗಿ:** ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಂಸದರಾದ ಜಗದೀಶ್ ಶೆಟ್ಟರ್, ಪಿ.ಸಿ. ಗದ್ದಿಗೌಡರ, ಗೋವಿಂದ ಕಾರಜೋಳ, ಭಾಂಡಗೆ, ಪಿ.ಎಚ್. ಪೂಜಾರ್, ಮಾಜಿ ಸಚಿವ ಮುರುಗೇಶ್ ನಿರಾಣಿ ಉಪಸ್ಥಿತರಿದ್ದರು.





### ವೀರಣ್ಣಗೆ ಅದೃಷ್ಟ ಪರೀಕ್ಷೆ

ವೀರಣ್ಣ ಚರಂತಿಮಠ ಅವರು ಇದೇ ಕ್ಷೇತ್ರದಿಂದ 2004, 2008 ಹಾಗೂ 2018ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು. ಮತ್ತೊಮ್ಮೆ ತಮ್ಮ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ. ಬಿಜೆಪಿ ಅಭ್ಯರ್ಥಿಯ ನಾಮಪತ್ರ ಸಲ್ಲಿಕೆಯ ಬಳಿಕ ಪಕ್ಷದ ವತಿಯಿಂದ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಸಾವಿರಾರು ಕಾರ್ಯಕರ್ತರೊಂದಿಗೆ ನಡೆದ ಈ ಶಕ್ತಿ ಪ್ರದರ್ಶನದ ಬಳಿಕ ಬಹಿರಂಗ ಸಭೆಯಲ್ಲೂ ಜನಸ್ತೋಮ..!

ದಾವಣಗೆರೆಯಲ್ಲಿ ಮತದಾರರಿಗೆ ಹಣ ಹಂಚಿಕೆ ಮಾಡಿ ಆಮಿಷವೊಡ್ಡುವ ಪ್ರವೃತ್ತಿ ಜೋರಾಗಿದೆ. ಸೂಟ್‌ಕೇಸ್‌ನಲ್ಲಿ ಹಣ ತರುವುದಿಲ್ಲ, ಸಚಿವರೊಬ್ಬರು ಗೋಣಿಚೀಲದಲ್ಲಿ ಹಣ ತಂದು ಸುರುತ್ತಾರೆ. ಕ್ಷೇತ್ರದ ರಾಜಕೀಯದಲ್ಲಿ ಏನೆಲ್ಲಾ ನಡೆಯುತ್ತಿದೆ ಎಂದು ನನಗೆ ಗೊತ್ತಿದೆ. ರಾಜ್ಯದ ಜನತೆ ಕಾಂಗ್ರೆಸ್ ಆಡಳಿತದಿಂದ ಬೇಸತ್ತು ಹೋಗಿದ್ದಾರೆ.

–ಬಿವೈ ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

### ಬಂಡಾಯವೆದ್ದ ಪೈಲ್ವಾನ್..!

ಮುಸ್ಲಿಮ್ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ನೀಡಬೇಕೆಂದು ಪಟ್ಟು ಹಿಡಿದಿದ್ದ ಅಲ್ಪಸಂಖ್ಯಾತರು, ಇದೀಗ ಕಾಂಗ್ರೆಸ್ ಪಕ್ಷದ ವಿರುದ್ಧವೇ ಸಿಡಿದೆದ್ದಿದ್ದಾರೆ. ಟಿಕೆಟ್ ಕೈತಪ್ಪಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಸಾದಿಕ್ ಪೈಲ್ವಾನ್ ಸ್ವಪಕ್ಷದ ವಿರುದ್ಧವೇ ತೊಡೆತಟ್ಟಿದ್ದಾರೆ. ಬಾಲ್ಯದಿಂದಲೂ ನಾನೊಬ್ಬ ಪೈಲ್ವಾನ್. ಒಮ್ಮೆ ಅಖಾಡಕ್ಕಿಳಿದರೆ ಮತ್ತೆ ಹಿಂದೆ ಸರಿಯಲ್ಲ ಎಂದಿದ್ದಾರೆ.

### ಕೈ ಬಿಟ್ರು ಕಮಲ ಹಿಡಿದರು

ಸಮರ್ಥ್ ಶಾಮನೂರ್‌ಗೆ ಟಿಕೆಟ್ ನೀಡಿದ್ದರಿಂದ ಬಂಡಾಯವೆದ್ದಿರುವ ಕಾಂಗ್ರೆಸ್‌ನ 20ಕ್ಕೂ 20ಕ್ಕೂ ಹೆಚ್ಚು ಮುಸ್ಲಿಮ್ ಕಾರ್ಯಕರ್ತರು ಬಿಜೆಪಿ ಸೇರಿದ್ದಾರೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸ್ ಕರಿಯಪ್ಪ ಅವರಿಗೆ ಹೆಚ್ಚಿನ ಬೆಂಬಲ ನೀಡುತ್ತೇವೆ ಎಂದು 12ನೇ ವಾರ್ಡ್‌ನ ಯುವಕರು, 'ಕೈ' ಮುಖಂಡ ಶಫೀಕ್ ಪಂಡಿತ್ ಅವರ ನೇತೃತ್ವದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸ್ ಕರಿಯಪ್ಪ ಅವರಿಗೆ ಬಹಿರಂಗವಾಗಿ ಬೆಂಬಲ ಘೋಷಿಸಿದ್ದಾರೆ.

## ರಾಜ್ಯದಲ್ಲಿ ಎಲ್‌ಪಿಜಿ ಕೊರತೆ, ಮಿತಬಳಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದಲ್ಲಿ ಉಂಟಾದ ಎಲ್ಪಿಜಿ ಕೊರತೆ ಹಿನ್ನೆಲೆಯಲ್ಲಿ ವಾಣಿಜ್ಯ ಬಳಕೆದಾರರು ತಮ್ಮ ಸಾಮಾನ್ಯ ಬಳಕೆಯ ಕೇವಲ ಶೇ.20ರಷ್ಟು ಗ್ಯಾಸ್‌ನಲ್ಲೇ ಕಾರ್ಯಾಚರಣೆ ನಡೆಸಬೇಕು ಎಂದು ಸಚಿವ ಕೆ.ಎಚ್.ಮುನಿಯಪ್ಪ ಸೂಚನೆ ನೀಡಿದ್ದಾರೆ.




ವಿಧಾನ ಪರಿಷತ್ತಿನಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಿದ ಸಚಿವ, ಈಗ ಪ್ರತಿದಿನ 16,000 ವಾಣಿಜ್ಯ ಸಿಲಿಂಡರ್‌ಗಳನ್ನು ಮಾತ್ರ ಸರಬರಾಜು ಮಾಡಲಾಗುತ್ತಿದೆ. ಈ ಹಿಂದೆ ದಿನಕ್ಕೆ 45,000 ಸಿಲಿಂಡರ್ ಬಳಕೆಯಾಗುತ್ತಿತ್ತು. ಆದ್ದರಿಂದ ಲಭ್ಯವಿರುವ ಸೀಮಿತ ಸಂಪನ್ಮೂಲಗಳ ಆದ್ಯತೆಯ ಮೇರೆಗೆ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಈ ಹೊಸ ವ್ಯವಸ್ಥೆಯಡಿಯಲ್ಲಿ ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಕ್ಯಾಂಟೀನ್, ವಿಮಾನ ನಿಲ್ದಾಣ, ರೈಲು ನಿಲ್ದಾಣ ಹಾಗೂ ಬಸ್ ನಿಲ್ದಾಣಗಳಿಗೆ ಮೊದಲ ಆದ್ಯತೆ ನೀಡಲಾಗಿದೆ. ಶಿಕ್ಷಣ ಕ್ಷೇತ್ರಕ್ಕೆ 4,200 ಸಿಲಿಂಡರ್, ಸರ್ಕಾರಿ ವ್ಯವಸ್ಥೆಗೆ 1,200 ಸಿಲಿಂಡರ್ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

## ಬಿಜೆಪಿ ಸ್ಥಾನ ಗೌಡರಿಗೆ ಕೊಡಿ: ಎಚ್‌ಡಿಕೆ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಯುಗಾದಿ ಶುಭಾಶಯ ಕೋರುವ ನೆಪದಲ್ಲಿ ಕೇಂದ್ರದ ಭಾರಿ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಪುತ್ರ ನಿಖಿಲ್ ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ರಾಜ್ಯ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದ್ದಾರೆ. ರಾಜ್ಯಸಭೆಗೆ ಆಯ್ಕೆಯಾಗಿರುವ ನಾಲ್ವರು ಸದಸ್ಯರ ಅವಧಿ ಜೂನ್‌ನಲ್ಲಿ ಮುಗಿಯಲಿದೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಸದಸ್ಯತ್ವ ಮುಗಿಯಲಿದೆ. ಮೂರು ಸ್ಥಾನಗಳಲ್ಲಿ ಕಾಂಗ್ರೆಸ್ ನಿರಾಯಾಸವಾಗಿ ಗೆಲ್ಲಲಿದೆ. ಜೆಡಿಎಸ್ ನೆರವಿಲ್ಲದೆ ಇನ್ನೊಂದು ಸ್ಥಾನ ಗೆಲ್ಲುವಷ್ಟು ಮತಗಳನ್ನು ಬಿಜೆಪಿ ಹೊಂದಿದೆ. ಈ ಸ್ಥಾನವನ್ನು ದೇವೇಗೌಡರಿಗೆ ಬಿಟ್ಟುಕೊಡಬೇಕು ಎಂಬುದು ಜೆಡಿಎಸ್ ನಾಯಕರ ಅಪೇಕ್ಷೆ. ಆದರೆ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅವರನ್ನು ರಾಜ್ಯಸಭೆಗೆ ಕಳುಹಿಸಬೇಕು ಎಂಬುದು ಬಿ.ಎಸ್. ಯಡಿಯೂರಪ್ಪ ಕುಟುಂಬದ ಹಂಬಲ.





## ಮೌಢ್ಯ, ಕಂದಾಚಾರದ ವಿರುದ್ಧ ದನಿ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ದೇವರ ದಾಸಿಮಯ್ಯ ಅವರು ನೇಯ್ಗೆ ಕಾಯಕ ಮಾಡುವದರ ಜೊತೆಗೆ, ಮೌಢ್ಯತೆ, ಕಂದಾಚಾರ ವಿರುದ್ಧ ದನಿ ಎತ್ತಿದ್ದರು ಎಂದು ಶರಣರಾಗಿದ್ದಾರೆಂದು ಉಪನ್ಯಾಸಕ, ಶರಣ ಚಿಂತಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟಿದ್ದಾರೆ.

ನಗರದ ನ್ಯೂ ರಾಘವೇಂದ್ರ ಕಾಲೊನಿಯಲ್ಲಿನ ಮುತ್ತಾ ಟ್ಯುಟೋರಿಯಲ್ಸ್‌ನಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗ ವತಿಯಿಂದ ಹಮ್ಮಿಕೊಂಡಿದ್ದ ಶರಣ ದೇವರ ದಾಸಿಮಯ್ಯನವರ 1047ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ನಮನ ಸಲ್ಲಿಸಿದ ಬಳಿಕ ಮಾತನಾಡಿ, ಅಂಧ ಶ್ರದ್ಧೆ, ಜಾತೀಯತೆ, ಶೋಷಣೆ, ಅನ್ಯಾಯದಂತಹ ಪಿಡುಗುಗಳಿಂದ ತೂತು ಬಿದ್ದ ಸಮಾಜವನ್ನು ತಮ್ಮ ವಚನಗಳ ಮೂಲಕ ಚಿಕಿತ್ಸಕ ಕಾರ್ಯ ಮಾಡಿ, ಸಮ–ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ಶ್ರೇಷ್ಠ ಸಮಾಜ ಸುಧಾರಕ ಎಂದು ಬಣ್ಣಿಸಿದ್ದಾರೆ. ಸಂಸ್ಥೆಯ ಅಧ್ಯಕ್ಷ ಶಿವಕುಮಾರ ಮುತ್ತಾ, ಶಿಕ್ಷಕ ಆದರ್ಶ ವಡ್ಡನಕೇರಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಹಿಂದುಳಿದಿಲ್ಲ, ಧಾರ್ಮಿಕ ಶ್ರೀಮಂತಿಕೆ ಜಿಲ್ಲೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾಗಿರುವ ಬೀದರ್ ಜಿಲ್ಲೆ ಅಭಿವೃದ್ಧಿಯಲ್ಲಿ ಹಿಂದುಳಿದಿದ್ದು, ಈ ಹಣೆಪಟ್ಟಿ ಕಳಚಲು ಎಲ್ಲರೂ ಕೈಜೋಡಿಸಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ ಖಂಡ್ರೆ ಕೋರಿದ್ದಾರೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅವರು, ಬೀದರ್‌ನ ಫಾರ್ಮಸಿ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ನಮ್ಮ ಜಿಲ್ಲೆಯ ಸಮಸ್ತ ಜನರ, ಸಮುದಾಯದ ಜನರ ಅದರಲ್ಲೂ ಯುವ ಪೀಳಿಗೆಯ ತಿಳಿವಳಿಕೆ ಮಟ್ಟವನ್ನು ಹೆಚ್ಚಿಸಬೇಕು. ಅವರಲ್ಲಿ ಕೌಶಲ್ಯ ಮೂಡಿಸಿ, ನೈಪುಣ್ಯತೆಯನ್ನು ಹೆಚ್ಚಿಸಿ, ಅವರನ್ನು ಉದ್ಯೋಗಕ್ಕೆ ಅರ್ಹರನ್ನಾಗಿ ಮಾಡಬೇಕು ಮತ್ತು ಅವರ ಆದಾಯ ಹೆಚ್ಚಿಸಬೇಕು. ವೃತ್ತಿಗಳ ಸಂಖ್ಯೆ ಬೆಳೆಸಬೇಕು. ದುಡಿಯುವ ಕೈಗೆ ಉದ್ಯೋಗ ಕೊಟ್ಟಾಗ ಪ್ರಗತಿ ಆಗುತ್ತದೆ ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವುದಾಗಿ ಹೇಳಿದ ಅವರು, ಜಿಲ್ಲೆಯ ಮೂಲಭೂತ ಸೌಲಭ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ವಿವರಿಸಿದ್ದಾರೆ.



ಬೆಂಗಳೂರಿನಲ್ಲಿ 1000 ವಿದ್ಯಾರ್ಥಿನಿಯರ ಹಾಸ್ಟೆಲ್ ನಿರ್ಮಿಸುವ ಗುರಿ ಮಹಾಸಭಾಗಿದೆ. ಈ ನಿಟ್ಟಿನಲ್ಲಿ ಮಾಜಿ ಶಾಸಕ ಅಶೋಕ್ ಖೇಣಿ ಅವರು ಮಾಗಡಿ ರಸ್ತೆ ಬಳಿ 2 ಎಕರೆ ಜಮೀನು ನೀಡಲು ಒಪ್ಪಿದ್ದಾರೆ. ಅದನ್ನು ಪಡೆಯುವ ಪ್ರಯತ್ನ ಮಾಡಲಾಗುವುದು. ಹಾಸ್ಟೆಲ್ ನಿರ್ಮಿಸಲಾಗುವುದು. ಅದೇ ರೀತಿ ಪ್ರತಿ ಜಿಲ್ಲೆಯಲ್ಲೂ ವಿದ್ಯಾರ್ಥಿ ನಿಲಯ ನಿರ್ಮಿಸುವ ನಿಟ್ಟಿನಲ್ಲಿ ಚಿಂತಿಸಲಾಗುತ್ತಿದೆ.

–ಈಶ್ವರ ಬಿ ಖಂಡ್ರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ

### ಧರ್ಮಕ್ಕೆ ವರ್ತಮಾನದ ಜೀವಂತಿಕೆ ಬೇಕು

ನಾವು ಕೇವಲ ನಮ್ಮ ಹಿರಿಯ ಶ್ರೀಮಂತಿಕೆಯ ಬಗ್ಗೆ ಹೇಳಿದರೆ ಸಾಲದು, ನಮ್ಮ ಧರ್ಮ ಉಳಿಯಬೇಕು, ಬೆಳೆಯಬೇಕು ಎನ್ನುವುದಾದರೆ ಎಲ್ಲರೂ ವಿಘಟನೆ ಬಿಟ್ಟು, ಸಂಘಟನೆಯತ್ತ ಮುಖ ಮಾಡಬೇಕಾಗಿದೆ. ಒಂದು ಧರ್ಮಕ್ಕೆ ಒಂದು ಸಮಾಜಕ್ಕೆ ಐತಿಹಾಸಿಕ ಶ್ರೀಮಂತಿಕೆ ಮಾತ್ರ ಮುಖ್ಯವಲ್ಲ. ವರ್ತಮಾನದ ಜೀವಂತಿಕೆಯೂ ಅತ್ಯಂತ ಮುಖ್ಯ ಎಂದು ಖಂಡ್ರೆ ಪ್ರತಿಪಾದಿಸಿದ್ದಾರೆ.

### ಭವ್ಯ ಸಮಾಜ, ಕುಮಾರೇಶ್ವರರ ಕಲ್ಪನೆ

ಎಲ್ಲ ಸಮುದಾಯದವರನ್ನೂ ಜೊತೆಯಲ್ಲಿ ತೆಗೆದುಕೊಂಡು ಭವ್ಯ ದಿವ್ಯ ಸಮಾಜ ನಿರ್ಮಾಣ ಹಾನಗಲ್ ಕುಮಾರೇಶ್ವರರ ಕಲ್ಪನೆಯಾಗಿತ್ತು. ಇದರ ಫಲವಾಗಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜನ್ಮತಾಳಿತು. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿದ್ದರೂ, ನಮ್ಮ ಗುರುಪೀಠಾಧಿಪತಿಗಳಲ್ಲಿ ಯಾವುದೇ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇರಬಹುದು. ಅದೆಲ್ಲವನ್ನೂ ಬದಿಗಿಟ್ಟು, ಸಮಾಜದ ಒಳಿತಿಗಾಗಿ ಒಂದಾಗಿ ನಡೆಯುವ ಸಕಾಲ ಇದಾಗಿದೆ ಎಂದಿದ್ದಾರೆ ಸಚಿವ.

**ಕಾಂಗ್ರೆಸ್‌ಗೆ ರಾಜ್ಯದ ಅಭಿವೃದ್ಧಿಯ ಚಿಂತೆ ಇಲ್ಲ. ಬಾಗಲಕೋಟೆಯಲ್ಲಿ ಗೆಲುವು ಖಚಿತ: ಬಿ.ವೈ. ವಿಜಯೇಂದ್ರ**

# ಮಾ.28ಕ್ಕೆ ಅದ್ದೂರಿಯಾಗಿ ಶ್ರೀರಾಮನವಮಿ ಉತ್ಸವ



• **ಮಲ್ಲಮ್ಮ ನುಡಿ ವಾರ್ತೆ , ಭಾಲ್ಕಿ**

ಪಟ್ಟಣದಲ್ಲಿ ಇದೇ ಬರುವ ಮಾ.28ಕ್ಕೆ ವಿಶ್ವಹಿಂದು ಪರಿಷತ್ ಮತ್ತು ಬಜರಂಗದಳ ಸಂಘಟನೆಯ ಸಹಯೋಗದಲ್ಲಿ ಶ್ರೀರಾಮನವಮಿ ಉತ್ಸವ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಶ್ರೀರಾಮನವಮಿ ಉತ್ಸವ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಚೆನ್ನಬಸವಣ್ಣ ಬಳತೆ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಂದು ಮಧ್ಯಾಹ್ನ 2 ಗಂಟೆಗೆ ಹಳೇ ಪಟ್ಟಣದ ವಿಠ್ಠಲ ಮಂದಿರ ಆವರಣದಿಂದ ಬೃಹತ್ ಶೋಭಾಯಾತ್ರೆ ಮೆರವಣಿಗೆ ಪ್ರಮುಖ ಬೀದಿ, ವೃತ್ತಗಳ ಮೂಲಕ ಹೊರಟು ಮಹಾತ್ಮ ಗಾಂಧಿ ವೃತ್ತ ತಲುಪಲಿದೆ. ನಂತರ ಸಂಜೆ 7 ಗಂಟೆಗೆ ಮಹಾತ್ಮ ಗಾಂಧಿ ವೃತ್ತದಲ್ಲಿ ಸಾರ್ವಜನಿಕ ಸಮಾರಂಭ ಜರುಗಲಿದೆ. ಶ್ರೀರಾಮ, ಹನುಮಾನ ಮತ್ತು ನರಸಿಂಹ ದೇವರ ಭಾವಚಿತ್ರಗಳ ಮೆರವಣಿಗೆ ಅದ್ದೂರಿಯಾಗಿ ನಡೆಯಲಿದ್ದು, ಮೆರವಣಿಗೆಗೆ ವಿವಿಧ ಕಲಾ ತಂಡಗಳು ಮೆರಗು ನೀಡಲಿವೆ ಎಂದರು.

ಮೇಹಕರ್–ತಡೋಳಾ ಕಟ್ಟಿಮನಿ ಹಿರೇಮಠ ಸಂಸ್ಥಾನದ ರಾಜೇಶ್ವರ ಶಿವಾಚಾರ್ಯರು, ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಶಿವಣಿ–ಹಲಬರ್ಗಾ ಶ್ರೀಮಠದ ಹಾವಗಿಲಿಂಗೇಶ್ವರ ಶಿವಾಚಾರ್ಯರು ಮತ್ತು ಶ್ರೀರಾಮ ಚೈತನ್ಯ ಮಹಾರಾಜರ ದಿವ್ಯ ಸಾನ್ನಿಧ್ಯದಲ್ಲಿ ಸಾರ್ವಜನಿಕ ಸಮಾರಂಭ ನಡೆಯಲಿದ್ದು, ಸಾಮಾಜಿಕ ಕಾರ್ಯಕರ್ತೆ ಕಾಜಲ ಹಿಂದೂಸ್ತಾನಿ ಪ್ರಮುಖ ಭಾಷಣ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಅಧ್ಯಕ್ಷ ಶಿವು ಲೋಖಂಡೆ ಮಾತನಾಡಿ, ಪಟ್ಟಣದಲ್ಲಿ ಶ್ರೀರಾಮನವಮಿ ನಿಮಿತ್ತ ನಡೆಯಲಿರುವ ಬೃಹತ್ ಶೋಭಾಯಾತ್ರೆ ಮತ್ತು ಸಾರ್ವಜನಿಕ ಸಮಾರಂಭದಲ್ಲಿ ಪಟ್ಟಣ ಸೇರಿ ಗ್ರಾಮೀಣ ಭಾಗದಿಂದ ಸುಮಾರು 10 ಸಾವಿರಕ್ಕೂ ಅಧಿಕ ಜನ ನಿರೀಕ್ಷೆ ಇದೆ. ಶ್ರೀರಾಮನವಮಿ ಇದೊಂದು ಹಿಂದು ಸಮಾಜದ ಉತ್ಸವ. ಯಾವುದೇ ಜಾತಿಭೇದ ಮತ ಇಲ್ಲದೇ ಎಲ್ಲರನ್ನು ಒಗ್ಗೂಡಿಸಿ ಶ್ರೀರಾಮನವಮಿ ಆಚರಿಸಲಾಗುತ್ತಿದೆ ಎಂದರು.

ಸಮಾರಂಭಕ್ಕೂ ಮುನ್ನ ಮಾ.26ಕ್ಕೆ ಪಟ್ಟಣದಲ್ಲಿ ಬೈಕ್ ಮತ್ತು ಕಾರ್ ರ್‍ಯಾಲಿ ನಡೆಯಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀರಾಮನವಮಿ ಉತ್ಸವ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷ ಸೋಮನಾಥಪ್ಪ ಅಷ್ಟೂರೆ, ವಿಲಾಸ ಬಕ್ಕಾ, ಜಗದೀಶ ಖಂಡ್ರೆ, ಕಾರ್ಯದರ್ಶಿ ಪ್ರಕಾಶ ಮಾಶೆಟ್ಟೆ, ಪ್ರಮುಖರಾದ ಸಚಿನ ಜಾಧವ, ಗುಂಡೂರಾವ ಶೆಡೋಳೆ, ಜೈಕಿಶನ ಬಿಯಾನಿ, ಮಾತೃಶಕ್ತಿ ಸ್ವಾಗತ ಸಮಿತಿ ಅಧ್ಯಕ್ಷೆ ಸುನಿತಾ ಕುಡತೆ, ಕಾರ್ಯಾಧ್ಯಕ್ಷೆ ಶುಭಾಂಗಿ ಬಳತೆ, ಕವಿತಾ ಪಾಟೀಲ್, ಮೀನಾಕ್ಷಿ ಇದ್ದರು.

# ಬಜೆಟ್ ಪೂರ್ವಭಾವಿ ಸಭೆ ಮಾ.26ಕ್ಕೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ,**

ಭಾಲ್ಕಿ ಪುರಸಭೆಯಲ್ಲಿ 2026–27ನೇ ಸಾಲಿನ ವಾರ್ಷಿಕ ಬಜೆಟ್ ಮಂಡನೆ ಸಂಬಂಧ ಮೊದಲನೆ ಸುತ್ತಿನ ಪೂರ್ವಭಾವಿ ಸಾರ್ವಜನಿಕ ಸಭೆಯನ್ನು ದಿನಾಂಕ: 26–03–2026 ರಂದು ಮಧ್ಯಾಹ್ನ 3.30 ಗಂಟೆಗೆ ಪುರಸಭೆ ಸಭಾಂಗಣದಲ್ಲಿ ನಡೆಸಲಾಗುತ್ತಿದೆ.


ಸದರಿ ಬಜೆಟ್ ಪೂರ್ವಭಾವಿ ಸಭೆಗೆ ಭಾಲ್ಕಿ ಪಟ್ಟಣದ ನೋಂದಾಯಿತ ವಸತಿ ಕ್ಷೇಮಾಭಿವೃದ್ಧಿ ಸಂಘಗಳು, ನೊಂದಾಯಿತ ಸರ್ಕಾರೇತರ ಸಂಘ ಸಂಸ್ಥೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳು, ಇತರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಗಣ್ಯವಕ್ತಿಗಳು, ಸಾರ್ವಜನಿಕರು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬೇಕೆಂದು ಭಾಲ್ಕಿ ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆಸರು ನೋಂದಣಿಗೆ ಸೂಚನೆ

ಬೀದರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಬೀದರ ವತಿಯಿಂದ ಸರಕಾರಿ ಪ್ರಥಮ ದರ್ಜೆ ಕಾಲೇಜು ನೌಬಾದ, ಬೀದರನಲ್ಲಿ 2026ನೇ ಮಾರ್ಚ್.25 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆವರೆಗೆ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬೀದರ ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆಯ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಈ ಉದ್ಯೋಗ ಮೇಳದಲ್ಲಿ ಖಾಸಗಿ ಕಂಪನಿಗಳು ಭಾಗವಹಿಸುತ್ತಿವೆ. ಗ್ರಾಮೀಣ ಅಭ್ಯರ್ಥಿಗಳಿಗೆ ವಿಶೇಷ ಆದ್ಯತೆ ನೀಡಲಾಗುವುದು. ಭಾಗವಹಿಸುವ ಅಭ್ಯರ್ಥಿಗಳು ಮೊಬೈಲ್ ಸಂಖ್ಯೆ: 7892620675/9886367517/ 9901563260/ 9164741989/ 9591114834 ಗೆ ಕರೆ ಮಾಡಿ ಪೂರ್ವ ನೋಂದಣಿ ಮಾಡಿಕೊಳ್ಳಬೇಕೆಂದು ಅವರು ತಿಳಿಸಿದ್ದಾರೆ.

# ವ್ಯಕ್ತಿತ್ವಕ್ಕಿಂತ ಬಿಜೆಪಿ ಪಕ್ಷ ಮುಖ್ಯ ಪಕ್ಷಕ್ಕಿಂತ ದೇಶ ಮುಖ್ಯ: ವಿಜಯೇಂದ್ರ

• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**



ವ್ಯಕ್ತಿಕ್ಕಿಂತ ಪಕ್ಷ ಮುಖ್ಯ ಪಕ್ಷಕ್ಕಿಂತ ದೇಶ ಮುಖ್ಯ ಎಂಬ ತತ್ವಸಿದ್ಧಾಂತ ನಮ್ಮದಾಗಿದೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ನ್ಯಾಯ ಒದಗಿಸುವ ಉದ್ದೇಶ ನಮ್ಮದಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ನುಡಿದರು. ತಾಲ್ಲೂಕಿನ ಚಾಂಗಲೇರಾ ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದ ಬಿಜೆಪಿ ಪಕ್ಷದ ಪಂಡಿತ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಸಕ್ಷಮ ಕಾರ್ಯಕರ್ತ ಸಶಕ್ತ ಸಂಘಟನೆ ಬೀದರ ದಕ್ಷಿಣ ಮಂಡಲ ಮಟ್ಟದ ಪ್ರಶಿಕ್ಷಣ ಮಹಾಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬಿಜೆಪಿ ಪಕ್ಷವನ್ನು ಲಕ್ಷಾಂತರ ಕಾರ್ಯಕರ್ತರ ಪರಿಶ್ರಮದ ಫಲವಾಗಿ ಇಂದು ಅತಿದೊಡ್ಡ ಪಕ್ಷವಾಗಿದೆ. ಹೆಮ್ಮರವಾಗಿ ಬೆಳೆದಿದೆ. ರಾಷ್ಟ್ರಾಧ್ಯಕ್ಷ ನಿತಿನ ನಬಿನ ಅವರ ಆದೇಶದಂತೆ ಪ್ರಶಿಕ್ಷಣ ಅಭಿಯಾನ ಆರಂಭಿಸಲಾಗಿದೆ. ಪಕ್ಷದ ಮುಖಂಡರು, ಕಾರ್ಯಕರ್ತರು ನಮ್ಮ ಪಕ್ಷದ ಸಿದ್ಧಾಂತವನ್ನು ಧ್ಯೆಯವನ್ನು ಅರಿತುಕೊಳ್ಳಬೇಕಾಗಿದೆ. ಎಲ್ಲಾ ಸಮಾಜ ಎಲ್ಲಾ ವರ್ಗಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ನ್ಯಾಯ ಒದಗಿಸಿಕೊಡುವ ಉದ್ದೇಶವಾಗಿದೆ. ರಾಜ್ಯ ಕಾಂಗ್ರೇಸ ಸರಕಾರವೂ ರಾಜ್ಯದ ಜನರ ವಿಶ್ವಾಸ ಕಳೆದುಕೊಂಡಿದೆ.

ರೈತರ ವಿಶ್ವಾಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಳೆದುಕೊಂಡಿದ್ದಾರೆ. ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ವಿಶ್ವಾಸ ಕಳೆದುಕೊಂಡಿದೆ. ಆಡಳಿತ ಪಕ್ಷದ ಕಾಂಗ್ರೇಸ ಶಾಸಕರು ಮುಖ್ಯಮಂತ್ರಿ ವಿರುದ್ಧ ದಂಗೆ ಏಳುವ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಮುಖ್ಯಮಂತ್ರಿಗಳು ಕುರ್ಚಿ ಕಳೆದುಕೊಳ್ಳುವ ಭಯದಲ್ಲಿ ಅಧಿವೇಶನ ಪ್ರಾರಂಭವಾಗುವ ಸಂದರ್ಭದಲ್ಲಿ ಆಡಳಿತ ಪಕ್ಷದ ಶಾಸಕರನ್ನು ವಿದೇಶ ಪ್ರಯಾಣಕ್ಕೆ ಕಳುಹಿಸುವ ಹುನ್ನಾರ ಮಾಡಿದ್ದಾರೆ. ಸಿದ್ಧರಾಮಯ್ಯನವರು ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತಿರುವುದು ಸಾಧನೆಯಲ್ಲ. ನಾಡಿನ ರೈತನ ಬದುಕು ಹಸನ ಮಾಡಿದಿರಾ? ಉದ್ಯೋಗ ಕೊಡುವ ಕೆಲಸ ಮಾಡಿದಿರಾ? ಎಂದರು. ಈ ಹಿಂದೆ ರಾಜ್ಯದ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ ಯಡಿಯೂರಪ್ಪನವರ ಅವಧಿಯಲ್ಲಿ ಮಾಡಿದ ಜನಪರ ಯೋಜನೆಗಳನ್ನು ಎಲ್ಲರ ನೆನಪಿನಲ್ಲಿ ಇದೆ. ರೈತರ ಪಂಪ ಸೇಟಗಳಿಗೆ ಉಚಿತ ವಿದ್ಯುತ್ ನೀಡಿದ್ದಾರೆ. ಬಿಜೆಪಿ ರಾಜ್ಯದ ಜನರ ನಾಡಿ ಮೀಡಿತ ಅರಿತುಕೊಂಡಿದೆ. ಬೀದರ ದಕ್ಷಿಣ ಕ್ಷೇತ್ರದ ವೀರಭದ್ರೇಶ್ವರ ಸನ್ನಿಯಲ್ಲಿ ನಾನು ಪ್ರಮಾಣ ಮಾಡುತ್ತಿದ್ದು,

ರಾಜ್ಯದಲ್ಲಿ ಮತ್ತೆ ಭಾರತೀಯ ಜನತಾ ಪಕ್ಷದ ಗತ ವೈಭವ ತರುವೇವು. ಇಟ್ಟ ಗುರಿಯಿಂದ ಹಿಂದೆಸರಿಯುವುದಿಲ್ಲ. ಇಡಿ ರಾಜ್ಯದ ಜನರ ಆಪೇಕ್ಷೆ ಅರಿತುಕೊಂಡಿರುವೆ ಮುಂಬರುವ ದಿನಗಳಲ್ಲಿ ಮತದಾರ ಪಟ್ಟಿಯ ಪರೀಕ್ಷಣೆ ನಡೆಯಲಿದ್ದು, ನಮ್ಮ ಕಾರ್ಯಕರ್ತರು ಬೋಗಸ ಮತದಾರನ್ನು ಪತ್ತೆ ಹಚ್ಚುವ ಕೆಲಸ ಮಾಡಬೇಕು ಇದು ನಮ್ಮ ಆದ್ಯ ಕರ್ತವ್ಯವಾಗಿದೆ. ಯಡಿಯ್ಯೂರಪನ್ನವರಂತೆ ಕಾಲಿಗೆ ಚಕ್ರವನ್ನು ಕಟ್ಟಿಕೊಂಡು ರಾಜ್ಯದ ಮೂಲೆ ಮೂಲೆಗೂ ಸಂಚರಿಸಿ ಪಕ್ಷ ಸಂಘಟಿಸುವೆ. ಬೀದರ ಜಿಲ್ಲೆ ಬಿಜೆಪಿ ಪಕ್ಷಕ್ಕೆ ಶಕ್ತಿ ಕೊಟ್ಟಿದೆ. ನಮ್ಮ ಶಾಸಕರು ಯಾವತ್ತು ಮರೆಯಬಾರದು ಸದಾ ಎಚ್ಚರಿಕೆ ವಹಿಸಿ ತಾಪಂ, ಜಿಪಂ ಗ್ರಾಪಂ ಚುನಾವಣಾ ಬರಲಿದೆ. ನಮ್ಮ ಕಾರ್ಯಕರ್ತರ ಗೆಲುವಿಗೆ ಶ್ರಮಿಸಬೇಕು. ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ಕಾರ್ಯಕರ್ತರಿಗೆ ಅವಕಾಶ ನೀಡಬೇಕು. ನಿಷ್ಠಾವಂತ ಕಾರ್ಯಕರ್ತರಿಗೆ ಶಕ್ತಿ ತುಂಬಿ ಗೆಲುವು ಸಾಧಿಸೋಣ. ವೀರಭದ್ರೇಶ್ವರನ ಸನ್ನಿಯಲ್ಲಿ ನಾನು ಕೂಡಾ ಪಕ್ಷ ಸಂಘಟಿಸುವ ಪ್ರತಿಜ್ಞೆ ಮಾಡಿದೇನೆ. ತಮ್ಮೇಲ್ಲರ ಪ್ರೀತಿ ವಿಶ್ವಾಸ ಸದಾ ಹೀಗೆ ಇರಲಿ. ಯಾರೂ ಜಾತಿ ವಿಷಬೀಜ ಬಿತ್ತಬೇಡಿ ಜಾತಿ ಆಧಾರದ ಮೇಲೆ ಗುರುತಿಸಬೇಡಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದು–ಕೊಂಡು ಪಕ್ಷದ ಕಾರ್ಯಕರ್ತರ ಗೆಲುವಿಗೆ ಶ್ರಮಿಸೋಣ ಗೆಲುವಿನತ್ತ ಸಾಗೋಣ ಎಂದರು. ಬೀದರ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ, ಗುರುನಾಥ ರಾಜಗೀರಾ ಸೇರಿ ಗಣ್ಯರು ಮಾತನಾಡಿದರು. ಶಾಸಕರಾದ ಡಾ. ಸಿದ್ಧಲಿಂಗಪ್ಪ ಪಾಟೀಲ, ಶರಣು ಸಲಗರ, ಪ್ರಭು ಚವ್ಹಾಣ, ಬಸವರಾಜ ಮತ್ತಿಮೂಡ, ಎಂಎಲ್ಸಿಗಳಾದ ಮಾರುತಿರಾವ ಮೂಳೆ, ಶಶಿಲ ನಮೋಶಿ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಪ್ರಮುಖರಾದ ಬಸವರಾಜ ಆರ್ಯ ಸೇರಿದಂತೆ ಪಕ್ಷದ ವರಿಷ್ಠರು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಕಾರಂಜಾ ಸಂತ್ರಸ್ತರಿಗೆ ಕಾಲಮಿತಿಯಲ್ಲಿ ವಿಶೇಷ ಪ್ಯಾಕೇಜ್ ಘೋಷಣೆಗೆ ಒತ್ತಾಯ

• **ಮಲ್ಲಮ್ಮ ನುಡಿ ವಾರ್ತೆ,ಬೀದರ**




ಕಾರಂಜಾ ನೀರಾವರಿ ಯೋಜನೆಗಾಗಿ ಭೂಮಿ ನೀಡಿದ ರೈತ ಸಂತ್ರಸ್ತರಿಗೆ ಸಮರ್ಪಕ ಪರಿಹಾರ ನೀಡುವ ವಿಚಾರದಲ್ಲಿ ಸಚಿವರಾದ ಶಿವರಾಜ್ ತಂಗಡಗಿ ನೀಡಿದ ಹೇಳಿಕೆಯನ್ನು ಖಂಡಿಸಿ, ಕಾಲಮಿತಿಯಲ್ಲಿ ವಿಶೇಷ ಪ್ಯಾಕೇಜ್ ಘೋಷಿಸಲು ಒತ್ತಾಯಿಸಲಾಗಿದೆ.

ಬೀದರ ನಗರದ ಅಂಬೇಡ್ಕರ್ ವೃತ್ತದಲ್ಲಿ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ ಹಿರಿಯ ಹೋರಾಟಗಾರ ಡಾ.ಲಕ್ಷ್ಮಣ ದಸ್ತಿ ಮಾತನಾಡಿ, ವಿಧಾನಪರಿಷತ್ತಿನಲ್ಲಿ ಕಾರಂಜಾ ಸಂತ್ರಸ್ತರ ಪ್ರಶ್ನೆಗೆ ಸಂಬಂಧಿಸಿದಂತೆ ಡಿಕೆ ಶಿವಕುಮಾರ ಅವರ ಅನುಪಸ್ಥಿತಿಯಲ್ಲಿ ಅವರ ಪರವಾಗಿ ಉತ್ತರಿಸಿದ ಶಿವರಾಜ್ ತಂಗಡಗಿ ಅವರ ಉತ್ತರ ಬೇಜವಾಬ್ದಾರಿಯುತವಾಗಿದ್ದು, ಬೀದರ ಜಿಲ್ಲೆಯ ಜನತೆಗೆ ಅವಮಾನಕಾರಿಯಾಗಿದೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯರಾದ ಎಂ ಜಿ ಮೂಳೆ ಅವರು ಸದನದಲ್ಲಿ ಕಾರಂಜಾ ಸಂತ್ರಸ್ತರಿಗೆ ಮಾನವೀಯತೆ ಹಾಗೂ ವೈಜ್ಞಾನಿಕ ಆಧಾರದ ಮೇಲೆ ಪರಿಹಾರ ನೀಡುವ ಕುರಿತು ಪ್ರಶ್ನೆ ಕೇಳಿದ್ದರು.

## ತಂಗಡಗಿ ಹೇಳಿಕೆಗೆ ಖಂಡನೆ

ಕಾರಂಜಾ ಸಂತ್ರಸ್ತರ ಸಮಸ್ಯೆ ಕುರಿತು ದಶಕಗಳಿಂದ ಹೋರಾಟ ನಡೆಯುತ್ತಿದ್ದು, ಸರ್ಕಾರಕ್ಕೂ ಈ ವಿಷಯ ಮನದಟ್ಟಾಗಿದೆ. ನ್ಯಾಯಾಲಯದ ತೀರ್ಪುಗಳನ್ನು ಮಾನದಂಡವನ್ನಾಗಿ ಮಾಡಿಕೊಂಡು ವೈಜ್ಞಾನಿಕ ಹಾಗೂ ಮಾನವೀಯತೆ ಆಧಾರದ ಮೇಲೆ ಪರಿಹಾರ ನೀಡಬೇಕು ಎಂದು ಡಾ. ದಸ್ತಿ ಒತ್ತಾಯಿಸಿದರು. ಜೊತೆಗೆ, ಹೇಮಾವತಿ ಯೋಜನೆ ಸಂತ್ರಸ್ತರಿಗೆ ನೀಡಿದಂತೆ ಕಾರಂಜಾ ಸಂತ್ರಸ್ತರಿಗೂ ಪರಿಹಾರ ಜೊತೆಗೆ ಬದುಕಲು ಭೂಮಿಯನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ಚಂದ್ರಶೇಖರ್ ಪಾಟೀಲ್ ಹುಚ್ಚಕ್ಕನಹಳ್ಳಿ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರು ಈ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿ ಹಲವಾರು ಸಭೆಗಳಲ್ಲಿ ಭರವಸೆ ನೀಡಿದ್ದಾರೆ. ಮುಖ್ಯಮಂತ್ರಿ ಸಹ ಈ ಕುರಿತು ಸಭೆ ನಡೆಸಿ ಭರವಸೆ ನೀಡಿರುವುದಾಗಿ ಹೇಳಿದರು. ಜಿಲ್ಲೆಯ ಎಲ್ಲಾ ಶಾಸಕರು ಪಕ್ಷಾತೀತವಾಗಿ ಒಗ್ಗೂಡಿ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ವಿನಯ್ ಮಾಳ್ಗೆ ಮಾತನಾಡಿ, ಕಾರಂಜಾ ಸಂತ್ರಸ್ತರಿಗೆ ಪರಿಹಾರ ನೀಡುವ ವಿಚಾರದಲ್ಲಿ ಈಗಾಗಲೇ ಈಶ್ವರ ಖಂಡ್ರೆ ಅವರು ಒತ್ತಡ ತಂದಿದ್ದು, ಮುಖ್ಯಮಂತ್ರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ಮಹೇಶ್ ಗೋರನಾಳಕರ್ ಮಾತನಾಡಿ, ನೆನೆಗುದಿಗೆ ಬಿದ್ದಿರುವ ಸಂತ್ರಸ್ತರ ಬೇಡಿಕೆಗಳನ್ನು ಕಾಲಮಿತಿಯಲ್ಲಿ ಈಡೇರಿಸಲು ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ಹೇಳಿದರು.

ಈ ಪ್ರತಿಭಟನೆಯಲ್ಲಿ ಭಾಗವಹಿಸಿದವರು: ರಾಜಪ್ಪ ಕೋಸಂ, ರಾಜಪ್ಪ ಬುಸ್ಸಾ, ವೀರೇಂದ್ರ ಭತಮುರಗೆ, ರೇವಣಪ್ಪ ಕಾಂಜೋಳ, ಸಂಗಾರೆಡ್ಡಿ ಅವರಾದ, ಹರ್ಷವರ್ಧನ್ ರಾಥೋಡ್, ಶ್ರೀಧರ ಸೋಮನೋರ್, ಮಾದಪ್ಪಾ ಖೌದೇ , ಇಸೂಫ್ ರೇಕುಳಗಿ, ಮಹ್ಮದ್ ಸೋಲಾಪೂರೆ, ಲಕ್ಷ್ಮೀ ಖೌದೇ, ಸೇರಿದಂತೆ ನೂರಾರು ರೈತರು ಮತ್ತು ಸಂತ್ರಸ್ತರು ಹೋರಾಟದಲ್ಲಿ ಭಾಗವಹಿಸಿದ್ದರು.

# ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
ಪ್ರಧಾನ ಸಂಪಾದಕರು
ಮೋ: 9845028349

## ರಾಜ್ಯದಲ್ಲಿ ತುಂಬಿ ತುಳುಕುತ್ತಿರುವ ಭ್ರಷ್ಟಾಚಾರ ಕಡಿವಾಣ ಯಾವಾಗ?

ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ದಿನೇ ದಿನೇ ಹೆಚ್ಚುತ್ತಿರುವುದು ಜನರಲ್ಲಿ ಆತಂಕವನ್ನು ಉಂಟುಮಾಡುತ್ತಿದೆ. ಸರ್ಕಾರಿ ಕಚೇರಿಗಳಲ್ಲಿ ಸಾಮಾನ್ಯ ಜನರ ಕೆಲಸಗಳು ಸುಲಭವಾಗಿ ಆಗಬೇಕಾದರೆ ಲಂಚ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ದುಃಖಕರ ಸಂಗತಿ.

ಜನರಿಗೆ ಸೇವೆ ನೀಡಬೇಕಾದ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿಭಾಯಿಸಬೇಕಾದರೆ,

ಕೆಲವರು ಅಧಿಕಾರದ ದುರುಪಯೋಗ ಮಾಡಿಕೊಂಡು ಅನ್ಯಾಯವಾಗಿ ಹಣ ಸಂಪಾದಿಸುವುದು ಜನರ ವಿಶ್ವಾಸಕ್ಕೆ ಧಕ್ಕೆ ತರುತ್ತಿದೆ.

ಸರ್ಕಾರ ಜನರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರುತ್ತದೆ. ಆದರೆ ಆ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ತಲುಪುವ ಮುನ್ನವೇ

ಮಧ್ಯೆ ಭ್ರಷ್ಟಾಚಾರದ ನೆರಳು ಬೀಳುತ್ತಿರುವುದು ಕಂಡುಬರುತ್ತಿದೆ. ಇದರಿಂದ ಬಡವರು ಮತ್ತು ಮಧ್ಯಮ ವರ್ಗದ ಜನರು ಹೆಚ್ಚು ಸಂಕಷ್ಟ ಅನುಭವಿಸುವಂತಾಗಿದೆ.

ಅಧಿಕಾರಿಗಳು ಹಾಗೂ ಕೆಲ ರಾಜಕಾರಣಿಗಳ ನಿರ್ಲಕ್ಷ್ಯದಿಂದ ಆಡಳಿತ ವ್ಯವಸ್ಥೆಯ ಮೇಲಿನ ಜನರ ನಂಬಿಕೆ ಕುಸಿಯುತ್ತಿರುವುದು ನಿಜ.

ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಾದರೆ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ. ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ತನಿಖೆ ನಡೆಸಿ ಕಾನೂನು ಪ್ರಕಾರ ಕಠಿಣ ಶಿಕ್ಷೆ ವಿಧಿಸಬೇಕು.

ಜೊತೆಗೆ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವ ಕ್ರಮಗಳನ್ನು ಜಾರಿಗೆ ತರಬೇಕು.

ಇದಕ್ಕೆ ಜೊತೆಗೆ ಜನರೂ ಜಾಗೃತರಾಗಬೇಕು.

ಲಂಚ ನೀಡುವುದು ಹಾಗೂ ಸ್ವೀಕರಿಸುವುದು ಎರಡೂ ತಪ್ಪು ಎಂಬ ಅರಿವು ಸಮಾಜದಲ್ಲಿ ಮೂಡಬೇಕು.

ಅನ್ಯಾಯ ಕಂಡಲ್ಲಿ ಅದನ್ನು ಎದುರಿಸುವ ಧೈರ್ಯ ಜನರಲ್ಲಿ ಬೆಳೆಯಬೇಕು.

ಒಟ್ಟಿನಲ್ಲಿ, ರಾಜ್ಯದಲ್ಲಿ ತುಂಬಿ ತುಳುಕುತ್ತಿರುವ ಭ್ರಷ್ಟಾಚಾರಕ್ಕೆ ತಕ್ಷಣವೇ ಕಡಿವಾಣ ಹಾಕದಿದ್ದರೆ ಆಡಳಿತ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸ ಸಂಪೂರ್ಣವಾಗಿ ಕುಸಿಯುವ ಅಪಾಯವಿದೆ.

ಆದ್ದರಿಂದ ಪ್ರಾಮಾಣಿಕ ಆಡಳಿತ ಮತ್ತು ಪಾರದರ್ಶಕ ವ್ಯವಸ್ಥೆ ನಿರ್ಮಾಣ ಮಾಡುವುದು ಕಾಲದ ಅಗತ್ಯವಾಗಿದೆ.

# :CITATION:

**IN THE COURT OF THE PRL. CIVIL JUDGE AND JFC., AT HUMNABAD.**
**CRL. MISC. No.08/2026.**

**Petitioners :**

**1. Hannamma W/o late Chandrappa Langoti,**
Age : 73-year, Occu: House hold.

**2. Manjula Langoti W/o late Mallikarjun.**
Age: 49-year, Occu : House hold.

**3. Chandrakanth S/o late Mallikarjun.**
Age : 26-year, Occu: Agriculture.

All R/o H. No.67, Village Nimbura, Tq. Humnabad. Dist. Bidar.

**Respondent:**

The Registrar of Birth and Death through The Tahasildar Humnabad.

***Sub:- Petition U/Sec. 13(3) of Birth and Death Registration Act-1969***

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Husband of Petitioner No. 1, Father in law of Petitioner No.2 and Grand father of petitioner No.3 by namely LATE. CHANDRAPPA S/O TAMMANNA, who was died on 01.06.1985 at Village Nimbura. Tq. Humnabad. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 10.04.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 28-02-2026

**/ /By order of the court/ /**

**Chief Ministerial Officer, Prl. Civil Judge & JMFC Court,**
**chHumnabad.cor**
**Pri. Civil IFC Court**

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಬಳ್ಳಾರಿ,ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಇವರ ಸಂಯುಕ್ತಾಶ್ರಯದಲ್ಲಿ ಮಾ.24 ರಂದು ಬೆಳಿಗ್ಗೆ 10 ಗಂಟೆಗೆ ನಗರದ ವಾಲ್ಮೀಕಿ ಭವನದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಈ.ತುಕರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯಸಭೆ ಸದಸ್ಯ ಡಾ.ಸೈಯದ್ ನಾಸೀರ್ ಹುಸೇನ್, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರ ಮಹಾಮಂಡಳಿ ನಿಯಮಿತ(ಕಾವೇರಿ ಹ್ಯಾಂಡ್‌ಲೂಮ್ಸ್)ದ ಅಧ್ಯಕ್ಷರೂ ಆದ ಕಂಪ್ಲಿ ಶಾಸಕ ಜೆ.ಎನ್. ಗಣೇಶ್, ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ದಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್, ಸಿರುಗುಪ್ಪ ಶಾಸಕ ಬಿ.ಎಂ ನಾಗರಾಜ್, ಬಳ್ಳಾರಿ ನಗರ ಶಾಸಕ ನಾರಾ ಭರತ್

ರೆಡ್ಡಿ, ಸಂಡೂರು ಶಾಸಕಿ ಈ.ಅನ್ನಪೂರ್ಣ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ, ಬಳ್ಳಾರಿ ನಗರಾಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್‌ನ ಉಪಾಧ್ಯಕ್ಷ ಹೆಚ್.ಲಕ್ಷ್ಮಣ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಸೇರಿದಂತೆ ಇತರರು ಭಾಗವಹಿಸುವರು.

ಕಲಬುರಗಿಯ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಝುಹೀರಾ ನಸೀಮ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ವಿ. ತ್ರಿಲೋಕ ಚಂದ್ರ, ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್. ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್ ಮಂಜುನಾಥ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ.ಎಂ ಅವರು ತಿಳಿಸಿದ್ದಾರೆ.

# ಶ್ರೀ ದೇವರ ದಾಸಿಮಯ್ಯನವರ ಜಯಂತಿ



• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ಪಟ್ಟಣದ ಶ್ರೀ ಬನಶಂಕರಿ ದೇವಿಯ ದೇವಸ್ಥಾನದಲ್ಲಿ ಹಟಗಾರ ಸಮಾಜದ ವತಿಯಿಂದ ವಚನಕಾರ ಶ್ರೀದೇವರ ದಾಸಿಮಯ್ಯನವರ ಜಯಂತಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಹಟಗಾರ ಸಮಾಜದ ಅಧ್ಯಕ್ಷ ವೀರಣ್ಣ ಬಾಬುಳಗಿ, ಕಾರ್ಯಾಧ್ಯಕ್ಷ ಉದಯಕುಮಾರ್ ಬಬಡಿ, ವಿಜಯಕುಮಾರ ಬೊಮ್ಮಣ್ಣಿ, ಪರಮೇಶ ಬಬಡಿ, ಶಂಕರ ಹುಗ್ಗಿ, ಮನೋಹರರಾವ್ ಸಿರಮುಂಡಿ, ಸುನೀಲ ತೋಗಲೂರು, ಸಂತೋಷ ಗಂಜಿ, ನಾಗಣ್ಣ ಅಜ್ಜಾ, ಮಲ್ಲಿಕಾರ್ಜುನ ಗಂಜಿ, ಅಮರ ಗಂಜಿ, ಅಶೋಕ ಹುಗ್ಗಿ ಸೇರಿದಂತೆ ಸಮಾಜದ ಹಿರಿಯರು, ಮಹಿಳೆಯರು ಉಪಸ್ಥಿತರಿದ್ದರು.

# ಮಾ26ಕ್ಕೆ ಪೂರ್ವಭಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ದಿನಾಂಕ: 05–04–2026 ರಂದು "ಹಸಿರು ಕ್ರಾಂತಿಯ ಹರಿಕಾರ" ಡಾ॥ ಬಾಬು ಜಗಜೀವನರಾಂ ಅವರ 119ನೇ ಜಯಂತಿಯನ್ನು ಆಚರಿಸುವ ಕುರಿತು ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 26–03–2026 ರಂದು ಮದ್ಯಾಹ್ನ 12:30 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದೆ.

ಆದ್ದರಿಂದ ಸದರಿ ಪೂರ್ವಭಾವಿ ಸಭೆಗೆ ಪರಿಶಿಷ್ಟ ಜಾತಿ ಸಮಾಜದ ಮುಖಂಡರು,

ವಿವಿಧ ದಲಿತ ಸಂಘಟನೆಗಳ ಪದಾಧಿಕಾರಿಗಳು, ಸಂಘ–ಸಂಸ್ಥೆಗಳ ಮುಖಂಡರು, ಸದರಿ ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು

ಬೀದರ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಲ್‌ಪಿಜಿ ಸಿಲಿಂಡರ್ ಪೂರೈಸಲು ಜಿಲ್ಲಾಡಳಿತಕ್ಕೆ ಮನವಿ



ಬಳ್ಳಾರಿ,:ಹೋಟೆಲ್ ಉದ್ಯಮವು ಎದುರಿಸುತ್ತಿರುವ ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಗಂಭೀರ ಸಮಸ್ಯೆಯನ್ನು ಪರಿಹರಿಸಲು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲಾ ಹೋಟಲ್ ಮತ್ತು ಬೇಕರಿ ಮಾಲೀಕರ ಅಸೋಸಿಯೇಷನ್ ಜಿಲ್ಲಾಡಳಿತಕ್ಕೆ ಸೋಮವಾರ ಮನವಿ ಸಲ್ಲಿಸಿದೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ, ಕೆ.ಸಿ. ಸುರೇಶಬಾಬು ಅವರ ನೇತೃತ್ವದಲ್ಲಿ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷರಾದ ವಿಕ್ರಂಪೋಲ ಅವರ ತಂಡವು ಅಪರ ಜಿಲ್ಲಾಧಿಕಾರಿಗಳಾದ ಎನ್. ಮೊಹಮ್ಮದ್ ಜುಬೈರ್ ಅವರನ್ನು ಭೇಟಿ ಮಾಡಿ, ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಹೆಚ್ಚಿನ ಸಿಲೆಂಡರ್‌ಗಳನ್ನು ಪೂರೈಸಬೇಕು ಎಂದು ಅವರು ಮನವಿ ಮಾಡಿದರು.

ಮಧ್ಯಪ್ರಾಚ್ಯ ದೇಶಗಳಲ್ಲಿಯ ಯುದ್ಧದ ವಾತಾವರಣದ ಕಾರಣ ಎಲ್‌ಪಿಜಿ ಸಿಲೆಂಡರಗಳ ಪೂರೈಕೆಯಲ್ಲಿ ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಧಕ್ಕೆ ಆಗುತ್ತಿದೆ. ಅಲ್ಲದೇ, ಈ ಉದ್ಯಮದಲ್ಲಿಯ ಉದ್ಯೋಗಿಗಳ ಬದುಕಿಗೆ ಕುತ್ತು ಬೀಳುತ್ತಿದೆ. ಕಾರಣ ಸರ್ಕಾರ ಸಿಲೆಂಡರ್‌ಗಳ ಪೂರೈಕೆಯಲ್ಲಿ ವಿಶೇಷ ಆಸಕ್ತಿ ತೋರಿಸಬೇಕು ಎಂದು ಕೋರಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾದ, ಡಾ. ಮರ್ಚೆಡ್ ಮಲ್ಲಿಕಾರ್ಜುನಗೌಡ ಸೇರಿ ಹೋಟೆಲ್ ಮತ್ತು ಬೇಕರಿ ಅಸೋಸಿಯೇಷನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಪಾರಜಿಲ್ಲಾಧಿಕಾರಿ, ಮೊಹಮ್ಮದ್ ಜುಬೈರ್. ಎನ್ ಅವರು, ಸಮಸ್ಯೆ ಪರಿಹಾರಕ್ಕೆ ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದರು.

# ಗಣತಿದಾರರು ಮೇಲ್ವಿಚಾರಕರಿಗೆ ಸಮರ್ಥ ತರಬೇತಿ ನೀಡಿ

• ಮಲ್ಲಮ್ಮ ನುಡಿವಾರ್ತೆ,ಕೊಪ್ಪಳ



ಜನಗಣತಿ ಕಾರ್ಯಕ್ಕೆ ಗಣತಿ–ದಾರರು ಹಾಗೂ ಮೇಲ್ವಿಚಾರಕರ ಪಾತ್ರ ಮುಖ್ಯವಾಗಿದ್ದು, ಅವರಿಗೆ ಫೀಲ್ಡ್ ಟ್ರೇನರಗಳು ಸಮರ್ಥವಾದ ತರಬೇತಿ ನೀಡಿ, ಕೆಲಸ ಆರಂಭಿಸಬೇಕು ಎಂದು ಜಿಲ್ಲಾಧಿಕಾರಿ ಸುರೇಶ್ ಬಿ. ಇಟ್ನಾಳ ಹೇಳಿದರು.

ಅವರು ಇತ್ತೀಚೆಗೆ ಕೊಪ್ಪಳ ಜಿಲ್ಲಾ ಪಂಚಾಯತ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಭಾರತದ ಜನಗಣತಿ□2027 ಕಾರ್ಯದ ಅಂಗವಾಗಿ ಫೀಲ್ಡ್ ಟ್ರೇನರಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆವಹಿಸಿ ಮಾತನಾಡಿದರು.

ದೇಶದ ಅಭಿವೃದ್ಧಿ ಯೋಜನೆಗಳ ರೂಪಿಸುವಿಕೆಯಲ್ಲಿ ಜನಗಣತಿ ಅಂಕಿ–ಅಂಶಗಳು ಅಡಿಪಾಯವಾಗಿದ್ದು, ಈ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಅಧಿಕಾರಿಗಳು ರಾಷ್ಟ್ರ ನಿರ್ಮಾಣದ ಅಳಿಲು ಸೇವೆಯಲ್ಲಿ ಭಾಗಿಗಳಾಗುತ್ತಿದ್ದೇವೆ ಎಂಬ ಭಾವನೆಯೊಂದಿಗೆ ಪ್ರಾಮಾಣಿಕವಾಗಿ ಹಾಗೂ ಸಮರ್ಪಕವಾಗಿ ಕೆಲಸ ಮಾಡಬೇಕು. ಈ ಬಾರಿಯ ಜನಗಣತಿಯು ಹಳೆಯ ಮ್ಯಾನುಯಲ್ ಪದ್ಧತಿ ಕೈಬಿಟ್ಟು, ಸಂಪೂರ್ಣವಾಗಿ ಮೊಬೈಲ್ □□□ಪ್ ಮೂಲಕ ನಡೆಯಲಿದ್ದು, ಇದು ನಿಖರತೆ ಮತ್ತು ಪಾರದರ್ಶಕತೆ ಹೆಚ್ಚಿಸಲಿದೆ. ಪ್ರತಿ ವಾರ್ಡ್ ಅಥವಾ ಗ್ರಾಮ ಮಟ್ಟದಲ್ಲಿ 150 ರಿಂದ 200 ಕುಟುಂಬಗಳನ್ನು ಒಳಗೊಂಡ 'ಬ್ಲಾಕ್'ಗಳನ್ನು ಗುರುತಿಸಿ, ನಿಖರವಾದ ಬ್ಲಾಕ್ ನಕ್ಷೆ ಮತ್ತು ಪಟ್ಟಿಗಳನ್ನು ಸಿದ್ಧಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನಗಣತಿ ಕಾರ್ಯವು ಯಶಸ್ವಿಯಾಗಲು ಬ್ಲಾ□□ಗಳ ರಚನೆ ಅತ್ಯಂತ ಪ್ರಮುಖವಾಗಿದೆ. ಬ್ಲಾಕ್ ರಚನೆಯಲ್ಲಿ ಸಣ್ಣ ತಪ್ಪುಗಳಾದರೂ ಇಡೀ ಪ್ರಕ್ರಿಯೆ ಹಳಿ ತಪ್ಪುತ್ತದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಪ್ರತಿ ಬ್ಲಾ□□ಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕ್ಷೇತ್ರ ಮಟ್ಟದಲ್ಲಿ ಕೆಲಸ ಮಾಡುವ ವಾರ್ಡ್ ಬಿಲ್ ಕಲೆಕ್ಟರ್ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯ ನಿರ್ವಹಿಸಬೇಕು. ಗಣತಿದಾರರನ್ನು ನೇಮಿಸುವಾಗ ಅವರು ವಾಸಿಸುವ ಅಥವಾ ಕೆಲಸ ಮಾಡುವ ಬ್ಲಾ□□ಗಳಲ್ಲೇ ನಿಯೋಜಿಸಬೇಕು. ಒಂದು ವೇಳೆ ಅನಿವಾರ್ಯ ಸಂದರ್ಭಗಳಲ್ಲಿ ಸ್ಥಳೀಯರು ಲಭ್ಯವಿಲ್ಲದಿದ್ದರೆ, 200 ಮೀಟರ್ ವ್ಯಾಪ್ತಿಯಲ್ಲಿರುವ ಸರ್ಕಾರಿ ನೌಕರರನ್ನು ಮಾತ್ರ ಬಳಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜನಗಣತಿ ಕೇಂದ್ರ ಕಚೇರಿ ಬೆಂಗಳೂರಿನ ಮಾಸ್ಟರ್ ಟ್ರೈನರ್ ಫಣಿ ಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

*ಫೀಲ್ಡ್ ಟ್ರೇನರಗಳಿಗೆ ತರಬೇತಿ:* ಜನಗಣತಿ ಕೇಂದ್ರ ಕಚೇರಿ ಬೆಂಗಳೂರಿನ ಮಾಸ್ಟರ್ ಟ್ರೈನರ್ ಫಣಿ ಕುಮಾರ್ ಹಾಗೂ ಯಲಬುರ್ಗಾ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಶಿವಶಂಕರ ಕರಡಕಲ್ ಅವರು ತರಬೇತಿ ನೀಡಿದರು. ಕಾರ್ಯಾಗಾರದಲ್ಲಿ ಮಾಸ್ಟರ್ ಟ್ರೈನರಗಳು, ಫೀಲ್ಡ್ ಟ್ರೇನರಗಳು ಹಾಗೂ ಸಂಬಂಧಿಸಿದ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಸಮಗ್ರ ಕೃಷಿ ಜೊತೆಗೆ ತೋಟಗಾರಿಕೆ ಬೆಳೆ ಬೆಳೆದು ಅಧಿಕ ಲಾಭ ಪಡೆಯಿರಿ: ಬೆಲ್ದಾಳೆ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಸಮಗ್ರ ಕೃಷಿ ಜೊತೆಗೆ ತೋಟಗಾರಿ–ಕೆ, ತರಕಾರಿ ಹಾಗೂ ಪುಷ್ಪೋದ್ಯಮ ಬೆಳೆಗಳನ್ನು ಬೆಳೆದು ರೈತರು ವಿದೇಶಗಳಿಗೆ ರಫ್ತು ಮಾಡುವ ಮುಖಾಂತರ ಅಧಿಕ ಲಾಭವನ್ನು ಪಡೆಯಬೇಕೆಂದು ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಹೇಳಿದರು.

ಅವರು ರವಿವಾರ ಬೀದರನ ಚಟ್ನಳ್ಳಿ ಗ್ರಾಮದಲ್ಲಿ ತೋಟಗಾರಿಕೆ ಮಹಾವಿದ್ಯಾಲಯ ವತಿಯಿಂದ 84 ದಿನಗಳ ಕಾಲ ಹಮ್ಮಿಕೊಂಡ್ಡಿರುವ ತೆ–ೂಟಗಾರಿಕೆ ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆ ವಲಯವು ಹೆಚ್ಚಿನ ಪ್ರಾಮುಖ್ಯತೆ ಪಡೆದು–ಕೊಂಡಿದ್ದು, ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಕ್ಷೇತ್ರಗಳಲ್ಲಿ ಒಂದಾಗಿದೆ. ಸಮಗ್ರ ಕೃಷಿ ಜೊತೆಗೆ ತರಕಾರಿ ಹಾಗೂ ಪುಷ್ಪೋದ್ಯಮ ಬೆಳೆಗಳನ್ನು ಬೆಳೆದು ರೈತರು ವಿದೇಶಗಳಿಗೆ ರಫ್ತು ಮಾಡುವ ಮೂಲಕ ಅಧಿಕ ಲಾಭವನ್ನು ಕಂಡುಕೊಳ್ಳಬಹುದಾಗಿದೆ ಹಾಗೂ ಜೊತಜೊತೆಗೆ ಬೆಳೆದಿರುವ ಬೆಳೆಯನ್ನು ಹತ್ತಿರದ ಸೂಪರ್ ಮಾರ್ಕೆಟ್, ಡಿಜಿಟಲ್ ಮಾರ್ಟ ಕಡೆಗಳಲ್ಲಿ ಮಾರಟ ಮಾಡುವುದರಿಂದ ಉತ್ತಮ ಆದಾಯ ದೊರೆಯುತ್ತದೆ ಎಂದು ತಿಳಿಸಿದರು.

ರೈತರು ಮಾರುಕಟ್ಟೆ ಅನುಗುಣವಾಗಿ ತಮ್ಮ ಬೆಳೆಗಳನ್ನು ಶೀತಘಟಕಗಳಲ್ಲಿ ಸಂಗ್ರಹಿಸಿ ಇಟ್ಟು ಉತ್ತಮ ಆದಾಯ ವಪಡೆಯಬಹುದೆಂದು ತಿಳಿಸಿದರು. ಕೃಷಿಯಲ್ಲಿ ಕೃತಕಬುದ್ದಿಮತ್ತೆ ಉಪಯೋಗಿಸಿ ತಮ್ಮ ತಾಕುಗಳನ್ನು ಅಭಿವೃದ್ದಿಪಡಿಸಬಹುದೆಂದು ತಿಳಿಸಿದರು. ಚಟ್ನಳ್ಳಿ ಗ್ರಾಮದಲ್ಲಿ ಆನೇಕ ರೈತರು ಪ್ರಗತಿಪರ ರೈತರಾಗಿ ಹೊರಹುಮ್ಮಬೇಕೆಂದು ತಿಳಿಸಿದರು. ರೈತರು ಹಾಗೂ ವಿಧ್ಯಾರ್ಥಿಗಳು ಪರಸ್ಪರ ಸಂವಹನ ನಡೆಸುವುದರಿಂದ ಪ್ರಾಯೋಗಿಕ ಜ್ಞಾನ ದೊರಕುತ್ತದೆ ಎಂದರು.

ಬೀದರತೋಟಗಾರಿಕೆಮಹಾವಿದ್ಯಾಲಯದ ಡೀನ್ ಡಾ. ಎಸ.ವಿ.ಪಾಟೀಲ್ ಮಾತನಾಡಿ, ರೈತರು ಸಮಗ್ರ ಕೃಷಿ ಅಳವಡಿಸಿಕೊಂಡು ತೋಟಗಾರಿಕೆ ಬೆಳೆಗಳನ್ನು ಬೆಳೆಯಬೇಕು. ಕೋಳಾರ್ (ಕೆ) ನಲ್ಲಿರುವ ತೋಟಗಾರಿಕೆ ಫಾರ್ಮನಲ್ಲಿ ವಿವಿಧ ತಳಿಗಳ ಬಹುವಾರ್ಷಿಕ ಹಣ್ಣುಬೆಳೆಗಳನ್ನು ಬೆಳೆಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಸೌಲಭ್ಯ ಕಲ್ಪಿಸದಲ್ಲಿ ವಿಧ್ಯಾರ್ಥಿಗಳಿಗೆ ಕಲಿಕೆ ಹಾಗೂ ರೈತರಿಗೆ ಪ್ರಾಯೋಗಿಕವಾಗಿ ಉಪಯೋಗವಾಗುತ್ತದೆ. ರೈತರು ಕಾಲಕ್ಕನುಗುಣವಾಗಿ ಬೆಳೆಗಳಲ್ಲಿ ಮಾರ್ಪಡು ಹೊಂದಿದಾಗ ಮಾತ್ರ ಉತ್ತಮ ಅಭಿವೃದ್ಧಿ ಸಾದ್ಯ. ರೈತರು ತಪ್ಪದೆ ತಮ್ಮ ತಾಕುಗಳ ಮಣ್ಣು ಪರೀಕ್ಷೆ ಮಾಡಿಸಿ, ಅದಕ್ಕೆ ಅನುಗುಣವಾಗಿ ಬೆಳೆಗಳ ಸೂಕ್ತ ತಳಿಗಳನ್ನು ಬೆಳೆಯುವುದರಿಂದ ಅಧಿಕ ಇಳುವರಿ ಪಡೆಯಬಹುದೆಂದು ಹೇಳಿದರು.

ತೋಟಗಾರಿಕಾ ಮಹಾವಿದ್ಯಾಲಯ ವತಿಯಿಂದ ರೈತರಿಗೆ ನೆರವಾಗಲು ಚಟ್ನಳ್ಳಿ ಗ್ರಾಮದಲ್ಲಿ ರೈತ ಸಹಾಯ ಕೇಂದ್ರವನ್ನು ಉದ್ಘಾಟನೆಗೊಳಿಸಲಾಯಿತು. ಶಾಲೆಯ ಸುತ್ತಮುತ್ತ ಗಿಡ್ಡನ್ನು ನೆಡಲಾಯಿತು. ಹಾಗೂ ಪೌಷ್ಠಿಕ ಕೈತೋಟ ನಿರ್ಮಾಣ ಮಾಡಲಾಯಿತು.

ಈ ಸಂದರ್ಭದಲ್ಲಿ ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ಜಾನ್ವವಿ, ತೋಟಗಾರಿಕೆ ಕಾಲೇಜಿನ ವತಿಯಿಂದ ಸಂಯೋಜಕರಾದ ಡಾ. ಹರೀಶ, ಡಾ. ಫಾರೂಕ್, ಡಾ. ವಿಜಯ ಮಹಾಂತೇಶ್, ಡಾ. ವಿ.ಪಿ. ಸಿಂಗ್, ಅಂಜನೇಯ, ಡಾ. ಅನುರಾಧ ಸೇರಿದಂತೆ ಚಟ್ನಳ್ಳಿ ಗ್ರಾಮದ ಮಹಾದೇವಿ ಮಲ್ಲಪ್ಪ, ವಿಜಯಕುಮಾರ್ ಸ್ವಾಮಿ, ಫಾಳೆಪ್ಪ ಚಟ್ನಳ್ಳಿ, ರಾಜರೆಡ್ಡಿ ಒಂಕಾರ್ ಕೆ. ಹಾಗೂ ಪ್ರಗತಿಪರ ರೈತರಾದ ಶಂಕ್ರರಪ್ಪ ಬಿರಾದರ್ ಮುಂತಾದವರು ಪಾಲ್ಗೊಂಡಿದ್ದರು. ಅಂತಿಮ ವರ್ಷದ ವಿದ್ಯಾರ್ಥಿನಿಯಾದ ಅಂಬಿಕ ಕಾರ್ಯಕ್ರಮದ ನಿರೂಪಣೆ ಹಾಗೂ ಚಿತ್ರಾ ಕಾರ್ಯಕ್ರಮದ ವಂದನಾರ್ಪಣೆ ಮಾಡಿದರು

# ಸೌಹಾರ್ದತೆಯಿಂದ ರಂಜಾನ್ ಆಚರಣೆ



ಮಲ್ಲಮ್ಮ ನುಡಿವಾರ್ತೆ ಕುಕನೂರ :

ಪಟ್ಟಣದ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಅಂಗವಾಗಿ ಹಿಂದೂ ಹಾಗೂ ಮುಸ್ಲಿಂ ಸಮುದಾಯದವರು ಸೌಹಾರ್ದಯುತವಾಗಿ ಭಕ್ತಿಭಾವದಿಂದ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸಿದರು. ಹಬ್ಬದ ಹಿನ್ನೆಲೆಯಲ್ಲಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸಂತೋಷವನ್ನು ಹಂಚಿಕೊಂಡರು.

ಭಾವೈಕ್ಯತೆಯ ಪಟ್ಟಣ ಎಂದೇ ಹೆಸರುವಾಸಿಯಾಗಿರುವ ಕುಕನೂರು ಪಟ್ಟಣದ ಈದ್ಗಾ ಮೈದಾನ ಸೇರಿದಂತೆ ತಾಲೂಕಿನ ವಿವಿಧಡೆಗಳಲ್ಲಿ ಸಂಭ್ರಮದಿಂದ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯನ್ನು

ಆಯೋಜಿಸಲಾಯಿತು. ಈ ವೇಳೆಯಲ್ಲಿ ಕುಕನೂರು ಪಟ್ಟಣದ ಪ್ರಮುಖರಾದ ಕಳಕಪ್ಪ ಕಂಬಳಿ ಮಾತನಾಡುತ್ತಾ ತಾಲೂಕಿನ ಅತ್ಯಂತ ಹಿಂದೂ ಮುಸ್ಲಿಂ ಧರ್ಮಿಯರು ಸಹೋದರತ್ವ ಭಾವದಿಂದ ಮಾಡುತ್ತಿದ್ದು ಪುರಾತನ ಕಾಲದಿಂದ ಒಬ್ಬರನ್ನೊಬ್ಬರು ಅರಿತುಕೊಂಡು ಸೌಹಾರ್ದಯುತವಾಗಿ ಜೀವನ ಸಾಗಿಸುತ್ತಿರುವುದು ಮಾದರಿಯಾಗಿದೆ ಹಾಗೂ ಪ್ರತಿ ವರ್ಷ ಹಿಂದೂ ಮತ್ತು ಮುಸ್ಲಿಂ ಧರ್ಮದ ಹಬ್ಬಗಳನ್ನು ಒಟ್ಟಾಗಿ ಆಚರಿಸುತ್ತಾ ಭಾವೈಕ್ಯತೆ ಮರೆಯಲಾಗುವುದು. ಪವಿತ್ರ ರಂಜಾನ್ ತಿಂಗಳ ವನ್ನು ಅತ್ಯಂತ ಕಠಿಣ ಉಪವಾಸ ವ್ರತದೊಂದಿಗೆ ಯಶಸ್ವಿಯಾಗಿ ಆಚರಣೆ ಮಾಡಿದ ಸರ್ವ ಮುಸ್ಲಿಂ ಬಾಂಧವರಿಗೆ ಈದ್ ಉಲ್ ಫಿತರ್ ನ ಶುಭಾಶಯಗಳನ್ನು ತಿಳಿಸುವುದಾಗಿ ಹೇಳಿದರು.

ಈ ವೇಳೆಯಲ್ಲಿ ಹಿಂದೂ ಮುಸ್ಲಿಂ ಪ್ರಮುಖರು ಸೇರಿದಂತೆ ಸಾಮೂಹಿಕವಾಗಿ ಪ್ರಾರ್ಥನೆಯನ್ನು ಸಲ್ಲಿಸಲಾಯಿತು.

# ನೀತಿಯಲ್ಲಿ ಮಾರಕವಾದ ನಿಯಮಗಳನ್ನು ಕೈಬಿಡುವಂತೆ ಮುಖ್ಯಮಂತ್ರಿಯವರಿಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ , ದಾವಣಗೆರೆ




ಕರ್ನಾಟಕ ಜಾಹೀರಾತು ನೀತಿ–2026ರಲ್ಲಿ ಪತ್ರಿಕೆಗಳಿಗೆ ಮಾರಕವಾದ ನಿಯಮಗಳನ್ನು ಕೈಬಿಡುವಂತೆ ಕೋರಿ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ದಾವಣಗೆರೆ ಜಿಲ್ಲಾ ವರದಿಗಾರರ ಕೂಟದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸೋಮವಾರ ಮಧ್ಯಾಹ್ನ ನಗರದ ಎಂ.ಬಿ.ಎ ಗ್ರೌಂಡ್ ಹೆಲಿಪ್ಯಾಡ್ ನಲ್ಲಿ ಮನವಿ ಸಲ್ಲಿಸಲಾಯಿತು.

ರಾಜ್ಯದಲ್ಲಿ ಜಾರಿಗೆ ತರಲು ಹೊರಟಿರುವ ಕರ್ನಾಟಕ ಜಾಹೀರಾತು ನೀತಿ–2026 ಜಿಲ್ಲಾ ಮಟ್ಟದ ಮತ್ತು ಪ್ರಾದೇಶಿಕ ಮಟ್ಟದ ಪತ್ರಿಕೆಗಳಿಗೆ ಮಾರಕವಾಗಿದ್ದು, ಇದರಿಂದ ಶತಶತಮಾನಗಳಿಂದ ಸಮಾಜದ ಮತ್ತು ಸರ್ಕಾರದ ಕೊಂಡಿಯಾಗಿ ಸೇವೆ ಮಾಡುತ್ತಿರುವ ಪತ್ರಿಕೆಗಳು ಮುಚ್ಚುತ್ತವೆ. ಯಾವುದೇ ಕಾರಣ–ಕ್ಕೂ ಪತ್ರಿಕೆಗಳಿಗೆ ಮಾರಕವಾಗುವ ನಿಯಮಗಳನ್ನು ಅಳವಡಿಸದೇ ಪತ್ರಿಕೆಗಳ ಏಳಿಗೆಗೆ ಪೂರಕವಾದ ಅಂಶಗಳನ್ನು ಸೇರಿಸಿ ಕರ್ನಾಟಕ ಜಾಹೀರಾತು ನೀತಿಯನ್ನು ಜಾರಿಗೆ ತರಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ , ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಮನವರಿಕೆ ಮಾಡಿಕೊಡಲಾಯಿತು.

ಸಂಘಗಳ ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು ಜಾಹೀರಾತು ನೀತಿ ಪರಿಶೀಲಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷರಾದ ಎ.ಸಿ.ತಿಪ್ಪೇಸ್ವಾಮಿ, ಜಿಲ್ಲಾ ಘಟಕದ ಅಧ್ಯಕ್ಷರಾದ ಸುರೇಶ್ ಆರ್ ಕುಣೆಬೆಳಕೆರೆ, ಖಜಾಂಜಿ ಶಿವಮೂರ್ತಿ ಟಿ.ಜಿ , ರಾಜ್ಯ ಸಂಘದ ನಾಮನಿರ್ದೇಶನ ಸದಸ್ಯ ಕೆ.ಜೈಮುನಿ ಮತ್ತು

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕರಾದ ಇ.ಎಂ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಬದ್ರಿನಾಥ್, ಖಜಾಂಚಿ ಜೆ.ಎಸ್.ವೀರೇಶ್ ಹಾಗೂ ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷರಾದ ನಾಗರಾಜ ಬಡದಾಳ್, ಹಿರಿಯ ಪತ್ರಕರ್ತರಾದ ಕೆ.ಏಕಾಂತಮ್ಮ, ಬಿ.ಎನ್.ಮಲ್ಲೇಶ್, ಮಲ್ಲಿಕಾರ್ಜುನ ಕಬ್ಬೂರು, ಆರ್.ಎಸ್. ತಿಪ್ಪೇಸ್ವಾಮಿ, ನಿಂಗಪ್ಪ, ಪರಶುರಾಮ, ನಂದಕುಮಾರ್ ಮುಂತಾದವರು ಇದ್ದರು.

# ಅಂಗನವಾಡಿ ಕೇಂದ್ರಗಳ ಆಹಾರ ಪೂರೈಕೆಯಲ್ಲಿ ಭ್ರಷ್ಟಾಚಾರ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಸರ್ಕಾರದ ಆದೇಶ ಹಾಗೂ ಜಿಲ್ಲಾಧಿಕಾರಿಗಳು ಕಾಲಕಾಲಕ್ಕೆ ನಿಗದಿಪಡಿಸಿದ ಮೆನುವಿನಂತೆ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿರುತ್ತದೆ. ಸದರಿ ಆದೇಶದಲ್ಲಿ ನಿಗದಿಪಡಿಸಲಾಗಿರುವ ದರದಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಹಾರ ಸಾಮಗ್ರಿಗಳನ್ನು ಎಮ್.ಎಸ್.ಪಿ.ಸಿ.ಕೇಂದ್ರಗಳಿಂದ ಖರೀದಿಸುವಂತೆ ಸೂಚಿಸಲಾಗಿರುತ್ತದೆ. ಅಲ್ಲದೇ ಮುಖ್ಯ ಆಹಾರ ವಿಶ್ಲೇಷಕರು, ವಿಭಾಗೀಯ ಆಹಾರ ಪ್ರಯೋಗಾಲಯ, ಕಲಬುರಗಿ ವಿಭಾಗ ಅವರಿಂದ ಪ್ರತಿ ತಿಂಗಳು ವಿಶ್ಲೇಷಣೆ ಮಾಡಿಸಿ ಆಹಾರ ಸಾಮಗ್ರಿಗಳು ಉತ್ತಮ ಗುಣಮಟ್ಟ ಎಂದು ಖಾತ್ರಿಯಾದ ನಂತರವೇ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗಿರುತ್ತದೆ. ಹಾಗಾಗಿ ಅಂಗನವಾಡಿ ಕೇಂದ್ರಗಳಿಗೆ ಉತ್ತಮ ಗುಣಮಟ್ಟದ ಆಹಾರ ಸಾಮಗ್ರಿಗಳು ಸರಬರಾಜು ಆಗಿರುತ್ತದೆ. ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾದ ಆಹಾರ ಸಾಮಗ್ರಿಗಳನ್ನು ಸುಂದ್ರಮ್ಮ ಟ್ರೇಡಿಂಗ್ ಕಂಪನಿಯವರಿಂದ ಖರೀದಿಸುವಂತೆ ಶಾಸಕರಿಂದ ಯಾವುದೇ ನಿರ್ದೇಶನ ಈ ಕಚೇರಿಗೆ ಸ್ವೀಕೃತವಾಗಿರುವುದಿಲ್ಲ ಹಾಗೂ ಪ್ರಭು ಟ್ರೇರ್ಸ್ ಮತ್ತು ಸುಂದ್ರಮಮ್ಮ ಟ್ರೇಡಿಂಗ್ ಕಂಪನಿ ನಡುವಿನ ವ್ಯವಹಾರದ ಬಗ್ಗೆ ಕಚೇರಿಗೆ ಯಾವುದೇ ಸಂಬಂಧ ಇರುವುದಿಲ್ಲವೆಂದು ಸಂತಪೂರ (ಔರಾದ) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೆಟ್ಟದ(ಕಾಟಿ) ಮಹದೇಶ್ವರ ಪಾದಯಾತ್ರಿಗಳಿಗೆ ಅದ್ದೂರಿ ಸ್ವಾಗತ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪ್ರತಿವರ್ಷ ಯುಗಾದಿ ಹಬ್ಬದ ಅಂಗವಾಗಿ ಔರಾದ್‌ನಿಂದ ಕಮಲನಗರ ಮಾರ್ಗವಾಗಿ ಮಹದೇಶ್ವರ ಬೆಟ್ಟ–ಕ್ಕೆ ನಡೆದುಕೊಂಡು ಹೋಗುವ ಸಂಪ್ರದಾಯಿಕ ಪಾದಯಾತ್ರಿಗಳಿಗೆ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಅದ್ದೂರಿ ಸ್ವಾಗತ ಕೋರಿದರು.

ಬೀರು ಬೇಸಿಗೆಯಲ್ಲಿಯೂ ಬರಿಗಾಲಿನಲ್ಲಿ ನಡೆದು ಮಹದೇಶ್ವರ ಬೆಟ್ಟಕ್ಕೆ ತಲುಪುವ ಪಾದಯಾತ್ರಿಗಳಿಗೆ ಯಾವುದೇ ಕಷ್ಟವೇ ಇಲ್ಲ. ಯಾವುದೇ ಉಪಟಳವಿಲ್ಲದೆ ಶ್ರದ್ಧೆ, ಭಕ್ತಿಯಿಂದ ಹೆಜ್ಜೆ ಹಾಕುತ್ತ ಮಹಾದೇವನ ಭಜನೆ ಪದಗಳು ಹಾಡುತ್ತಾ ಕುಣಿಯುತ್ತ ದೇವ ಸ್ಮರಣೆಯಲ್ಲಿ ಹೆಜ್ಜೆ ಹಾಕುತ್ತಾರೆ.

ಹೀಗಾಗಿ ವರ್ಷದಿಂದ ವರ್ಷಕ್ಕೆ ಪಾದಯಾತ್ರಿಕರ ಸಂಖ್ಯೆಯು ಹೆಚ್ಚಾಗುತ್ತಲೇ ಇದೆ. ಪಾದಯಾತ್ರಿಗಳಿಗೆ ಪ್ರಸಾದ ವ್ಯವಸ್ಥೆ, ಜತೆಗೆ ಗ್ರಾಮಗಳಲ್ಲಿ ಮಜ್ಜಿಗೆ, ಪಾನಕ ವಿತರಣೆ ನಡೆಯುತ್ತಿವೆ ಎನ್ನುತ್ತಾರೆ, ಪೂಜಾರಿ ಸಂತೋಷ ಅವರು.

ಗ್ರಾಪಂ ಮಾಜಿ ಅಧ್ಯಕ್ಷೆ ರಂಜನಾ ಸೂರ್ಯಕಾಂತ ಶಿವಣಕರ್, ನಾಗಮ್ಮಾ ಮಾಹಜನ, ಲಕ್ಷ್ಮೀಬಾಯಿ ಮಾಹಜನ, ಯಶವಂತ ಬಿರಾದಾರ, ಮಡಿವಾಳಪ್ಪಮಹಾಜನ, ಸೂರ್ಯಪ್ಪ ಶಿವಣಕರ್, ನಾಗೇಶ ಟೊಣ್ಣೆ, ಶಶಿಕಾಂತ ಮಹಾಜನ, ಸಂಗಮೇಶ ಮಹಾಜನ, ರಾಜಕುಮಾರ ಮಹಾಜನ, ಮಹೇಶ ಇನಾಮತೆ, ಜಿತು ಸೇರಿದಂತೆ ಗ್ರಾಮದ ಪ್ರಮುಖರು ಇದ್ದರು.

# ಏ.10ರಿಂದ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣದಲ್ಲಿ ಏ.10 ರಿಂದ ಮೂರು ದಿವಸ ರಾಷ್ಟ್ರಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ತೋರಿರುವ ಹೆಚ್ಚಿನ ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಬೇಕು ಎಂದು ಅಮೃತ ಮಹೋತ್ಸವ ಸ್ವಾಗತ ಸಮಿತಿ ಅಧ್ಯಕ್ಷರು, ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಈಶ್ವರ ಖಂಡ್ರೆ ಹೇಳಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಅಮೃತ ಮಹೋತ್ಸವ ಸಮಿತಿ ಮತ್ತು ಹಿರೇಮಠ ಸಂಸ್ಥಾನದ ವತಿಯಿಂದ ಶನಿವಾರ ಆಯೋಜಿಸಿದ್ದ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿಯ ಕರಪತ್ರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಬಸವ ಜಯಂತಿ, ವಚನ ಜಾತ್ರೆ–2026, ಡಾ.ಚನ್ನಬಸವ ಪಟ್ಟದ್ದೇವರು 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಏ.10, 11 ಮತ್ತು 12 ರಂದು ವಾಲಿಬಾಲ್ ಪಂದ್ಯಾವಳಿ ಜರುಗಲಿವೆ ಎಂದರು.

ಇಂದಿನ ದಿನಗಳಲ್ಲಿ ಯುವಕರು ಮೊಬೈಲ್, ಫೇಸ್‌ಬುಕ್, ವಾಟ್ಸಾಪ್‌ನಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದಾರೆ. ಇದರಿಂದ ದೈಹಿಕ ಪರಿಶ್ರಮ ಕಡಿಮೆಯಾಗಿ ವಿವಿಧ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ.

ಇದರಿಂದ ಹೊರಬರಲು ಉತ್ತಮ ಆರೋಗ್ಯಶೈಲಿ ಮೈಗೂಡಿಸಿಕೊಳ್ಳಲು ಕ್ರೀಡೆಗಳು ಪೂರಕವಾಗಿವೆ. ಮೂರು ದಿವಸ ನಡೆಯಲಿರುವ ವಾಲಿಬಾಲ್ ಪಂದ್ಯಾವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಂಡಗಳು ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಸಾನ್ನಿಧ್ಯವಹಿಸಿದ್ದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಕ್ರೀಡೆ ಮಾನಸಿಕ, ದೈಹಿಕ ವೃದ್ಧಿಯೊಂದಿಗೆ, ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿವೆ ಎಂದು ತಿಳಿಸಿದರು.



> "ಕ್ರೀಡೆಗೆ ಉತ್ತೇಜನ ನೀಡುವ ಸದಾಶಯದೊಂದಿಗೆ ಇದೇ ಮೊದಲ ಬಾರಿಗೆ ಪಟ್ಟಣದಲ್ಲಿ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗುತ್ತಿದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ತಂಡಗಳು ಪಾಲ್ಗೊಂಡು ಸದುಪಯೋಗ ಪಡೆದು ಕೊಳ್ಳಬೇಕು.
>
> **ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

ನೇತೃತ್ವವಹಿಸಿದ್ದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಇಂದಿನ ಯುವಶಕ್ತಿ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕ್ರೀಡೆಗಳಲ್ಲಿ ಭಾಗವಹಿಸುವ ಹವ್ಯಾಸವನ್ನು ಬೆಳೆಸಿ ಕೊಳ್ಳಬೇಕು ಎಂದು ತಿಳಿಸಿದರು.

ವಾಲಿಬಾಲ್ ಪಂದ್ಯಾವಳಿಯ ಅಧ್ಯಕ್ಷ ವಿಲಾಸ ಬಕ್ಕಾ ಮಾತನಾಡಿ, ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಆಕರ್ಷಕ ನಗದು ಬಹುಮಾನಗಳನ್ನು ನಿಗದಿಪಡಿಸಲಾಗಿದ್ದು, ಪ್ರಥಮ ಬಹುಮಾನವಾಗಿ 75,075, ದ್ವಿತೀಯ ಬಹುಮಾನ 51,075, ತೃತೀಯ ಬಹುಮಾನ 31,075 ಮತ್ತು ನಾಲ್ಕನೇ ಬಹುಮಾನ 21,075 ರೂ ನೀಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ವಂಕೆ, ಡಿವೈಎಸ್ಪಿ ಶಿವಾನಂದ ಪವಾಡಶೆಟ್ಟಿ, ಚನ್ನಬಸವ ಪಟ್ಟದ್ದೇವರು ಬ್ಯಾಂಕ್‌ನ ವ್ಯವಸ್ಥಾಪಕ ಗಣಪತಿ ಬಾವುಗೆ, ಪತ್ರಕರ್ತ ಜಯರಾಜ ಪಾತ್ರೆ, ದೈಹಿಕ ಶಿಕ್ಷಕ ಚೆನ್ನವೀರ ಚಕ್ರಸಾಲಿ ಸೇರಿದಂತೆ ಹಲವರು ಇದ್ದರು.

# ಸಾಧನೆಯ ಶಿಖರದಲ್ಲಿ ಜ್ಞಾನವೃಕ್ಷ ತರಬೇತಿ ಸಂಸ್ಥೆ

ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಕೇವಲ 11 ವಿದ್ಯಾರ್ಥಿಗಳಿಂದ 2013ರಲ್ಲಿ ಆರಂಭವಾದ ಜ್ಞಾನವೃಕ್ಷ ತರಬೇತಿ ಸಂಸ್ಥೆ ಇಂದು ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡುತ್ತಾ ಗಮನ ಸೆಳೆದಿದೆ. ಕಳೆದ 13 ವರ್ಷಗಳಿಂದ ನಿರಂತರವಾಗಿ ತರಬೇತಿ ನೀಡುತ್ತಾ, ಸುಮಾರು 2000 ರಿಂದ 3000 ವಿದ್ಯಾರ್ಥಿಗಳು ತಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ಇಲ್ಲಿ ತರಬೇತಿ ಪಡೆದು ಹೊರಟಿದ್ದಾರೆ.

ಇತ್ತೀಚೆಗೆ ಸಂಸ್ಥೆ ಮತ್ತೊಂದು ಮಹತ್ವದ ಸಾಧನೆ ಮಾಡಿದ್ದು, ಪರೀಕ್ಷೆ ಬರೆದ ಒಟ್ಟು 39 ವಿದ್ಯಾರ್ಥಿಗಳಲ್ಲಿ 34 ಮಂದಿ ಉತ್ತೀರ್ಣರಾಗಿ ಸೈನಿಕ ಶಾಲೆಗೆ ಆಯ್ಕೆಯಾಗಿದ್ದಾರೆ. ಈ ಸಾಧನೆ ಸಂಸ್ಥೆಗೆ ಮಾತ್ರವಲ್ಲದೆ ಗುರುಮಠಕಲ್ ಪಟ್ಟಣಕ್ಕೂ ಹೆಮ್ಮೆಯ ವಿಷಯವಾಗಿದೆ.

ಈ ಸಂಸ್ಥೆಯಿಂದ ತರಬೇತಿ ಪಡೆದವರಲ್ಲಿ 150 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಕ್ಷೇತ್ರಕ್ಕೆ, ಸುಮಾರು 600 ರಿಂದ 700 ವಿದ್ಯಾರ್ಥಿಗಳು ಇಂಜಿನಿಯರಿಂಗ್ ಕ್ಷೇತ್ರಕ್ಕೆ ಪ್ರವೇಶ ಪಡೆದಿದ್ದಾರೆ. ಅಲ್ಲದೆ 20 ರಿಂದ 30 ವಿದ್ಯಾರ್ಥಿಗಳು ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್.ಡಿ.ಎ) ಭಾರತೀಯ ಸಶಸ್ತ್ರ ಪಡೆಗಳಿಗೆ ಆಯ್ಕೆಯಾಗಿರುವುದು ಸಂಸ್ಥೆಯ ವಿಶೇಷತೆ. ಇದರ ಜೊತೆಗೆ ಸುಮಾರು 30 ವಿದ್ಯಾರ್ಥಿಗಳು ವಿವಿಧ ಸರ್ಕಾರಿ ಇಲಾಖೆಯಲ್ಲಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶಿಕ್ಷಣದ ಜೊತೆಗೆ ಸಂಸ್ಕಾರ, ಶಿಸ್ತು ಮತ್ತು ಮೌಲ್ಯಗಳನ್ನು ನೀಡುವುದರಲ್ಲಿ ಜ್ಞಾನವೃಕ್ಷ ತರಬೇತಿ ಸಂಸ್ಥೆ ಪ್ರಮುಖ ಪಾತ್ರವಹಿಸುತ್ತಿದೆ. ಇಲ್ಲಿ ವಸತಿ ಸಹಿತ ಹಾಗೂ ವಸತಿ ರಹಿತ ತರಬೇತಿ ವ್ಯವಸ್ಥೆ ಕೂಡ ಲಭ್ಯವಿದೆ.

ಪ್ರಸ್ತುತ ವರ್ಷದಲ್ಲಿ ಸುಮಾರು 250 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದು, ಸಂಸ್ಥೆಯಲ್ಲಿ ಸುಸಜ್ಜಿತ ಕಟ್ಟಡ, 11 ವಿಶಾಲ ಕೊಠಡಿಗಳು ಮತ್ತು ವಿಶಾಲ ಮೈದಾನ ಸೇರಿದಂತೆ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಸುಮಾರು 10 ಜನ ಪರಿಣಿತ ಶಿಕ್ಷಕರು ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ ನೀಡುತ್ತಾ ತರಬೇತಿ ಕೇಂದ್ರವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ.

# ಕೊರಮ,ಕೊರಚ,ಭೋವಿ, ಬಂಜಾರ ಸಮಾಜದಿಂದ ಇಂದು ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ನಾಗಮೋಹನ್ ದಾಸ್ ವರದಿಯು ಅವೈಜ್ಞಾನಿಕವಾಗಿದೆ ಅದನ್ನು ವಿರೋಧಿಸಿ ಮಾ.24 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಕೊರಮ,ಕೊರಚ, ಬೋವಿ ಬಂಜಾರ ಸಮಾಜದ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು ಯಾದಗಿರಿ ಜಿಲ್ಲೆಯಿಂದ ಸುಮಾರು 30 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ ಎಂದು ಕೊರಮ ಸಮಾಜದ ಯುವ ಮುಖ ಸಾಬಣ್ಣ ಭಜಂತ್ರಿ ಚಟ್ನಳ್ಳಿ ತಿಳಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಕೊರಮ,ಕೊರಚ, ಬಂಜಾರ ಬೋವಿ ಸಮಾಜಗಳು ಸತತ ಹೋರಾಟದಿಂದ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಮೀಸಲಾತಿ ಜಾರಿಗೆ ಸಂಬಂಧ ಒಳ ಮೀಸಲಾತಿ ಜಾರಿಗೆ ಯಾವುದೇ ಪ್ರವರ್ಗ ಎ ಅತ್ಯಧಿಕ ಸರ್ಕಾರಿ ಹುದ್ದೆಗಳು ಸಿಕ್ಕಿದ್ದು ಪ್ರವರ್ಗ ಬಿ ಮತ್ತು ಸಿ ಗೆ ದೊಡ್ಡ ಅನ್ಯಾಯವಾಗಿದೆ ಸುಪ್ರೀಂ ಕೋರ್ಟ್ ಆದೇಶದಲ್ಲಿ ಸಾಮಾಜಿಕ ಶೈಕ್ಷಣಿಕ ಆರ್ಥಿಕವಾಗಿ ಕೆಳ ಸಮುದಾಯಗಳು ಮುಖ್ಯವಾಹಿನಿಗೆ ಬರಬೇಕು ದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ಸಮಪಾಲು ನೀಡಬೇಕಾಗಿದೆ ಸರ್ಕಾರಗಳು ಲೋಪ ದೋಷಗಳನ್ನು ಅನುಸರಿಸುತ್ತಿದೆ ನಾಗಮೋಹನ್ ದಾಸ್ ವರದಿ ಅಪೂರ್ಣವಾಗಿದೆ ಸಂಪೂರ್ಣವಾಗಿ ಪ್ರತಿ ಗ್ರಾಮ ಮನೆಗಳಿಗೆ ಭೇಟಿ ನೀಡಿ ಸರಿಯಾದ ವರದಿ ಪಡೆದುಕೊಂಡಿಲ್ಲ ವರದಿ ಅನುಮಾನದಿಂದ ಕೂಡಿದೆ ರಾಜಕೀಯ ಕಾಣದ ಕೈಗಳ ಒತ್ತಡದಿಂದ ಒಂದು ಸಮುದಾಯವನ್ನು ಮುಂದಿಡುವ ಕೆಲಸ ಇದಾಗಿದೆ ಎಂದು ಅವರು ಆರೋಪಿಸಿದ್ದಾರೆ. ಮಾ 27 ರಂದು ಒಳ ಮೀಸಲಾತಿ ಕುರಿತು ಸರ್ಕಾರ ವಿಶೇಷ ಸಚಿವ ಸಂಪುಟ ಅಧಿವೇಶನ ಕರೆದಿದ್ದು ಅಲೆಮಾರಿ ಸಮುದಾಯಗಳಿಗೆ ಸರಿಯಾದ ಅವಕಾಶ ನೀಡುವಂತೆ ಮಾರ್ಚ್ 24ರಂದು ಪ್ರತಿಭಟನೆ ಮೂಲಕ ಒತ್ತಾಯಿಸಲಾಗುವುದು ಆದ್ದರಿಂದ ಕೊರಮ,ಕೊರಚ ಬಂಜಾರ,ಭೋವಿ,ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಈ ಪ್ರತಿಭಟನೆಯನ್ನು ಯಶಸ್ವಿಗೊಳಿಸುವಂತೆ ಕೊರಮ ಸಮಾಜದ ಯುವ ಮುಖಂಡ ಸಾಬಣ್ಣ ಭಜಂತ್ರಿ ಚಟ್ನಳ್ಳಿ ಮನವಿ ಮಾಡಿಕೊಂಡಿದ್ದಾರೆ

# ದುರಗಪ್ಪ ನಾಯಕಗೆ ಕರ್ನಾಟಕ ಭೂಷಣ ಪ್ರಶಸ್ತಿ




• ಮಲ್ಲಮ್ಮ ನುಡಿ ವಾರ್ತೆ ಸುರಪುರ

ನಗರಸಭೆಯಲ್ಲಿ ದೀನ ದಯಾಳ್ ಆಜೀವಿಕ ಶಹರಿ ಯೋಜನೆಯಡಿ ಸಮುದಾಯ ಸಂಘಟಕರಾಗಿ ಕಾರ್ಯ ನಿರ್ವಹಿಸುತ್ತಿರುವ ದುರಗಪ್ಪ ನಾಯಕ ಇವರಿಗೆ ಸರ್ವೆಜನಾಃ ಆರ್ಟ ಮತ್ತು ಕಲ್ಚರಲ್ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನೀಡಲಾಗುವ ಕರ್ನಾಟಕ ಭೂಷಣ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ನಗರ ಬಡತನ ನಿರ್ಮೂಲನಾ ಯೋಜನೆಯಡಿ ಸುಮಾರು 15 ವರ್ಷಗಳಿಂದ ಸ್ವ-ಸಹಾಯ ಸಂಘಗಳ ಸಬಲೀಕರಣ, ಸ್ವ-ಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ, ನಿರುದ್ಯೋಗ ಯುವಕ ಯುವತಿಯರಿಗೆ ಕೌಶಲ್ಯ ತರಬೇತಿ, ಬೀದಿ ಬದಿ ವ್ಯಾಪಾರಿಗಳ ವ್ಯಾಪಾರ ವಿಸ್ತರಣೆಗಾಗಿ ಬ್ಯಾಂಕಿನೊಂದಿಗೆ ನೇರ ಸಂಪರ್ಕ ಹಾಗೂ ನಗರ ವಸತಿ ರಹಿತರಿಗೆ ಆಶ್ರಯ ಸೌಲಭ್ಯದಂತಹ ಹಲವಾರು ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಾ, ನಗರದ ಬಡ ಹಾಗೂ ಹಿಂದುಳಿದವರ ಅಭಿವೃದ್ಧಿಗಾಗಿ ಯೋಜನೆಯ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿರುವ ಸಮುದಾಯ ಸಂಘಟಕ ದುರಗಪ್ಪ ನಾಯಕ ಇವರಿಗೆ ಕರ್ನಾಟಕ ಭೂಷಣ ಪ್ರಶಸ್ತಿ ಬಂದಿರುವುದು ನಗರಸಭೆಗೆ ಕೀರ್ತಿ ತರುವಂತಹ ವಿಷಯವಾಗಿದೆ ಎಂದು ನಗರಸಭೆ ಕಚೇರಿ ವ್ಯವಸ್ಥಾಪಕ ಯಲ್ಲಪ್ಪ ನಾಯಕ ಪ್ರಕಟಣೆಯಲ್ಲಿ ತಿಳಿಸಿದರು.

ಸದರಿಯವರು ಪ್ರಶಸ್ತಿಗೆ ಆಯ್ಕೆಯಾಗಿರುವುದಕ್ಕೆ ಪುರಸಭೆ ಕಕ್ಕೇರಾದ ಸಮುದಾಯ ಸಂಘಟಕರಾದ ಶ್ರೀಮತಿ ತಿಪ್ಪಮ್ಮ ಬಿರಾದಾರ ಹಾಗೂ ಸುರಪುರ ನಗರಸಭೆ ಡೇ-ನಲ್ಮ್ ಶಾಖೆಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀದೇವಿ ಹಿರೇಮಠ ಹಾಗೂ ಕುಮಾರಿಗೀತಾ ಹರ್ಷ ವ್ಯಕ್ತಪಡಿಸಿದರು. ಜಿಲ್ಲಾ ಕೌಶಲ್ಯ ಮಿಷನ್ ಯಾದಗಿರಿ ಸಹಾಯಕ ನಿರ್ದೇಶಕರಾದ ಬಸಪ್ಪ ತಳವಡಿ, ಅಭಿಯಾನ ವ್ಯವಸ್ಥಾಪಕರಾದ ವಿಠೋಬ ಯಾದವ, ವಿಜಯಕುಮಾರ ಪಾಟೀಲ, ಸಹಾಯಕ ಸಾಂಖ್ಯಿಕ ಅಧಿಕಾರಿ ರಂಗಪ್ಪ ಮಾಲಿ ಪಾಟೀಲ್ ಮತ್ತು ಸಿಬ್ಬಂದಿಗಳು ಹಾಗೂ ಭಾರತಾಂಬೆ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಭೀಮಾಶಂಕರ ಮತ್ತು ನಗರ ವಸತಿ ಆಶ್ರಯ ಕೇಂದ್ರ ಯಾದಗಿರಿ ವ್ಯವಸ್ಥಾಪಕರಾದ ಬೀರಲಿಂಗಪ್ಪ ಕಿಲ್ಲನಕೇರಿ ಅಭಿನಂದನೆ ತಿಳಿಸಿದರು.

# ಕ್ರೀಡೆ ಸ್ನೇಹ ಸಂಬಂಧ ಬೆಸೆಯುವ ಹಬ್ಬ: ಯರಗೋಳ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕ್ರೀಡೆಯಿಂದ ಪರಸ್ಪರ ಒಬ್ಬರಿಗೊಬ್ಬರು ಪರಿಚಯವಾಗಿ ಅನ್ಯೋನ್ಯತೆ, ಪ್ರೀತಿ ವಿಶ್ವಾಸ, ಸ್ನೇಹ ಸೌಹಾರ್ದತೆಯ ಭಾವನೆಯ ಭ್ರಾತೃತ್ವ ಬೆಳೆಯುತ್ತದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಶರಣಪ್ಪ ಮಾನೇಗಾರ ಯರಗೋಳ ಅವರು ಅಭಿಪ್ರಾಯಪಟ್ಟರು. ಬಾಡಿಯಾಳ ಗ್ರಾಮದಲ್ಲಿ ಹಮ್ಮಿಕೊಂಡ ಬಾಡಿಯಾಳ ಪ್ರೀಮಿಯರ್ ಲೀಗ್ ಸೀಸನ್-04ನ್ನು ಉದ್ಘಾಟಿಸಿ ಅವರು ಮಾತನಾಡಿದರು. ಯುವಕರಲ್ಲಿನ ಕ್ರೀಡಾ ಉತ್ಸವ ಮತ್ತು ಮನೋಭಾವನೆಯನ್ನ ಅಭಿನಂದಿಸುತ್ತೇನೆ. ಎಲ್ಲರೂ ಕ್ರೀಡೆಯಲ್ಲಿ ಸೋಲು ಗೆಲುವು ಎರಡನ್ನು ಸಮಾನವಾಗಿ ಸ್ವೀಕರಿಸಬೇಕು. ಗೆಲುವು ಸೋಲಿಗಾಗಿ ಕ್ರೀಡೆಯನ್ನ ಆಡುತ್ತಿಲ್ಲ. ಇಲ್ಲಿ ಹಲವಾರು ಗ್ರಾಮಗಳಿಂದ ವಿವಿಧ ತಂಡಗಳು ಬಂದಿದ್ದೀರಿ ಜೀವನದ ಸವಾಲಾಗಿ ಸ್ವೀಕರಿಸುವ ಒಂದು ಭೂಮಿಕೆ ಈ ಕ್ರೀಡೆಯಾಗಿದೆ ಎಂದರು. ಯಾರೂ ಕೂಡ ಆಟದಲ್ಲಿ ಅನ್ಯತ ಮನಸ್ತಾಪ ಮಾಡಿಕೊಳ್ಳದೇ ಒಬ್ಬರಿಗೊಬ್ಬರು ಅಣ್ಣತಮ್ಮ ಸೋದರರಾಗಿ ಧನಾತ್ಮಕವಾಗಿ ಆಡಬೇಕು. ಅದೇ ರೀತಿ ನಿಮ್ಮ ಮುಖದ ಮೇಲೆ ನಿಮ್ಮ ಹುಮ್ಮಸ್ಸು ಆಟದ ಕೊನೆ ದಿವಸದ ತನಕ ಇರಬೇಕು. ಆಟ ಆಡುವಾಗ ಏಳೆಂಟು ತಂಡಗಳಿರುತ್ತವೆ ಆದರೆ ನೀವು ಕ್ರೀಡಾ ಮೈದಾನದಿಂದ ಹೋಗುವಾಗ ಒಂದೇ ತಂಡವಾಗಿ ಹೋಗಬೇಕು ಎಂದರು. ಕ್ರೀಡೆಯು ತಮ್ಮನ್ನು ಮತ್ತು ಇತರರನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಭಾವನಾತ್ಮಕವಾಗಿ ಪ್ರಬುದ್ಧ ವ್ಯಕ್ತಿಗಳನ್ನು ಸೃಷ್ಟಿಸಿ ಧೈರ್ಯ, ಆತ್ಮವಿಶ್ವಾಸ ಮತ್ತು ಚಿಂತನೆಯ ಸ್ಪಷ್ಟತೆಯನ್ನು ಬೆಳೆಸುತ್ತವೆ ಎಂದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಚಂದ್ರಶೇಖರ್ ವಾರದ್, ಪಿಎಲ್ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸುದರ್ಶನ್ ಪಾಟೀಲ್ ಜೈಗ್ರಾಮ್, ಹಣಮಂತ ಸೌರಾಷ್ಟಹಳ್ಳಿ, ಜಗದೀಶ್ ಸಜ್ಜನ್ ಸೌರಾಷ್ಟಹಳ್ಳಿ, ಮಲ್ಲಪ್ಪ ಕಡಿಪಾಂಟಗಿ ಮೈಲಾಪುರ್, ರಮೇಶ್ ಭೀಮನಹಳ್ಳಿ ಸೈದಾಪುರ ವಲಯ ಕೋಲಿ ಸಮಾಜ ಅಧ್ಯಕ್ಷರು ,ಬಸವಂತ್, ಮಂಜುನಾಥ ಮೇತ್ರಿ ಮಲ್ಹಾರ, ಪುಂಡಲೀಕ್ ಗೊಂದಡಗಿ, ಆಂಜನೇಯ ರಾಂಪುರ ಯುವ ಕಾಂಗ್ರೆಸ್ ಅಧ್ಯಕ್ಷರು ಸೈದಾಪುರ, ಮಲ್ಲಪ್ಪ ಸಾವೂರ್, ವೀರೇಶ್ ಸಜ್ಜನ್ ಕಡೇಚೂರು, ವಿಜಯ್ ಕಡೇಚೂರು, ಮಲ್ಲಯ್ಯ ಕೂಡಲೂರ್, ರಾಹುಲ್ ಗೋಡಿಕಾರ್, ಸೂಗಪ್ಪ ಬೋಯಿನ್, ದೇವಪ್ಪ ಮಕ್ತಾಲ್ ಬಸವರಾಜ್ ಕೊತ್ತಲಪಲ್ಲಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# 40 ಗಂಟೆಗಳ ಮಧ್ಯಸ್ಥಿಕೆ ತರಬೇತಿ ಶಿಬಿರ

ಬಳ್ಳಾರಿ:ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಮಧ್ಯಸ್ಥಿಕೆದಾರರಿಗೆ ಮಾ.25 ರಿಂದ 29 ರ ವರೆಗೆ 40 ಗಂಟೆಗಳ ಮಧ್ಯಸ್ಥಿಕೆ ತರಬೇತಿ ಶಿಬಿರ ಆಯೋಜಿಸಲಾಗಿದೆ.

ಮಾ.25 ರಂದು ಬೆಳಿಗ್ಗೆ 10 ಗಂಟೆಗೆ ನಗರದ ತಾಳೂರು ರಸ್ತೆಯ ಹೊಸ ನ್ಯಾಯಾಲಯ ಸಭಾಂಗಣದಲ್ಲಿ ಉದ್ಘಾಟನಾ ಕಾರ್ಯಕ್ರಮ ಜರುಗಲಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಅಧ್ಯಕ್ಷತೆ ವಹಿಸುವರು.

# ಪಶು ಮಾರುಕಟ್ಟೆ ಅವ್ಯವಸ್ಥೆ: ಆಕ್ರೋಶ



• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್

ಪಟ್ಟಣದ ಕೃಷಿ ಉತ್ಪನ್ನ ಉಪ ಮಾರುಕಟ್ಟೆಯಲ್ಲಿ ಪ್ರತಿ ಸೋಮವಾರ ನಡೆಯುವ ಪಶು ಮಾರುಕಟ್ಟೆಯ ಅವ್ಯವಸ್ಥೆ ವಿರುದ್ಧ ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಾರುಕಟ್ಟೆ ಪ್ರದೇಶದಲ್ಲಿ ಮುಖ್ಯವಾಗಿ ಸ್ಥಳದ ಕೊರತೆ ಕಂಡುಬಂದಿದ್ದು, ಜಾನುವಾರುಗಳನ್ನು ವಾಹನಗಳಿಂದ ಇಳಿಸಲು ಸೂಕ್ತ ವ್ಯವಸ್ಥೆ ಇಲ್ಲದಿರುವುದು ರೈತರಿಗೆ ದೊಡ್ಡ ಸಮಸ್ಯೆಯಾಗಿದೆ. ಜೊತೆಗೆ, ವಾಹನಗಳ ನಿಲುಗಡೆಗೆ ನಿರ್ದಿಷ್ಟ ಸ್ಥಳವನ್ನು ಗುರುತಿಸದ ಕಾರಣ ಅಸ್ತವ್ಯಸ್ತ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆ ವ್ಯಾಪಾರಿಗಳಿಗೆ ತೊಂದರೆ ಉಂಟಾಗಿದೆ.

ಇದಲ್ಲದೆ, ಮಾರುಕಟ್ಟೆ ಆವರಣದಲ್ಲಿ ಅಲೆಮಾರಿ ಸಮುದಾಯದವರು ವಾಸವಿರುವುದರಿಂದ ಸ್ವಚ್ಛತೆಯ ಕೊರತೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಇದರಿಂದ ಪಶು ಖರೀದಿ ಮತ್ತು ಮಾರಾಟಕ್ಕೆ ಬರುವ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಅಲ್ಲಲ್ಲಿ ಅಸಮಾಧಾನ ವ್ಯಕ್ತವಾಗಿದೆ.

ವಾಹನಗಳ ಅಸ್ತವ್ಯಸ್ತ ನಿಲುಗಡೆ ಮತ್ತು ಸರಿಯಾದ ನಿಯಂತ್ರಣದ ಕೊರತೆಯಿಂದ ಪ್ರತೀ ವಾರವೂ ಮಾರುಕಟ್ಟೆ ವ್ಯಾಪಾರಿಗಳು ಹಾಗೂ ರೈತರಿಗೆ ಈ ಸಮಸ್ಯೆಗಳು ತಲೆನೋವಾಗಿ ಪರಿಣಮಿಸಿವೆ.

ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಮಾರುಕಟ್ಟೆಯಲ್ಲಿ ಸ್ವಚ್ಛತೆ, ಶಿಸ್ತು ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

# ನಾಗಮೋಹನದಾಸ ಒಳಮೀಸಲಾತಿ ವರದಿ ತಿರಸ್ಕರಿಸಲು ಒತ್ತಾಯಿಸಿ ರ್‍ಯಾಲಿ



• ಮಲ್ಲಮ್ಮ ನುಡಿ ವಾರ್ತೆ ಮಸ್ಕಿ

ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಒತ್ತಾಯಿ ಮಾ.25 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಬೃಹತ್ ರ್‍ಯಾಲಿ ಸಮಾವೇಶಕ್ಕೆ ತಾಲೂಕಿನಿಂದ ಬಲಗೈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಛಲವಾದಿ ಮಹಾಸಭಾದ ತಾಲೂಕಾಧ್ಯಕ್ಷ ಮೌನೇಶ ದೊಡ್ಮನಿ ಅಮೀನಗಡ ಮನವಿ ಮಾಡಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ನ್ಯಾಯಮೂರ್ತಿ ನಾಗಮೋಹನ್‌ದಾಸ ಆಯೋಗದ ಅವೈಜ್ಞಾನಿಕ ವರದಿಯನ್ನು ಯಾವುದೇ ಕಾರಣ-ಕ್ಕೂ ಜಾರಿ ಮಾಡಬಾರದೆಂದು ರಾಜ್ಯ ಸರಕಾರಕ್ಕೆ ಒತ್ತಾಯಿಸಿದರು.

ಆದ್ದರಿಂದ ಮಾ.25 ರಂದು ಹಮ್ಮಿಕೊಂಡಿರುವ ಬಲಗೈ ಸಮುದಾಯದ ಬೃಹತ್ ರ್‍ಯಾಲಿ ಸಮಾವೇಶಕ್ಕೆ ತಾಲೂಕಿನ ಪ್ರತಿಯೊಂದು ಹಳ್ಳಿಗೆ ತೆರಳಿ ಜಾಗೃತಿ ಮೂಡಿಸಿದ್ದೇವೆ. ಮಾ.24 ರಂದು ಬೆಂಗಳೂರಿಗೆ ತೆರಳಲು ತಾಲೂಕಿನಿಂದ ಸುಮಾರು 500ಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ. ಮಸ್ಕಿ ಸಾರಿಗೆ ಇಲಾಖೆ ಘಟಕದಿಂದ ಈಗಾಗಲೇ 2 ಬಸ್‌ಗಳ ವ್ಯವಸ್ಥೆ ಮಾಡಲಾಗಿದ್ದು,

ಈ ರ್‍ಯಾಲಿ ಸಮಾವೇಶಕ್ಕೆ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ನಾಗಮೋಹನ್‌ದಾಸರ ವರದಿಯನ್ನು ತಿರಸ್ಕರಿಸಲು ಒತ್ತಾಯಿಸಿ ರ್‍ಯಾಲಿ ಸಮಾವೇಶಯನ್ನು ಯಶ್ವಸಿಗೊಳಿಸಬೇಕೆಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಛಲವಾದಿ ಮಹಾಸಭಾದ ಗೌರವಾಧ್ಯಕ್ಷ ಮಲ್ಲಪ್ಪ ಗೋನಾಳ, ಪ್ರಧಾನ ಕಾರ್ಯದರ್ಶಿ ಹುಲಗಪ್ಪ ಹಸಮಕಲ್, ಶಿವರಡ್ಡಿ ಕಟ್ಟಿಮನಿ, ನೀಲಕಂಠಪ್ಪ ರಂಗಾಪೂರ ಇದ್ದರು.

# ತುರ್ತಾಗಿ ದುರಸ್ತಿ ಮಾಡಿ ಪೋಲಾಗದಂತೆ ನೋಡಿಕೊಳ್ಳಿ: ಮುದ್ನಾಳ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ತಾಲೂಕಿನ ಸೈದಾಪೂರ ಸಮೀಪ ಈ ಭಾಗದ ಹಲವು ಹಳ್ಳಿಗಳ ರೈತರ ಜೀವನಾಡಿಯಾದ ಹಿರೇನೂರ ಕಂದಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ಗೇಟ್ ತುಕ್ಕು ಹಿಡಿದು ಅಪಾರ ಪ್ರಮಾಣದ ನೀರು ದಿನ ನಿತ್ಯ ಸೋರಿಕೆಯಾಗಿ ತೆಲಂಗಾಣ ರಾಜ್ಯದ ಪಾಲಾಗುತ್ತಿದೆ ತುಕ್ಕು ಹಿಡಿದು ಗೇಟ್ ದುರಸ್ತಿಗೊಳಿಸಿ ಹಿರೇನೂರ ಕಂದಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ಸೋರಿಕೆಯಾಗುವು ನೀರುನ್ನು ತಡೆದು ಈ ಭಾಗದ ಬಡ ರೈತರಿಗೆ ಅನುಕೂಲ ಮಾಡಿಕೊಡುವಂತೆ ಅಖಿಲ ಭಾರತೀಯ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ್ ಮುದ್ನಾಳ್ ಆಗ್ರಹಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಸೈದಾಪೂರ ಸಮೀಪವಿರುವ ಹಿರೇನೂರ ಕಂದಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ಬೇಟಿ ನೀಡಿ ಪರಿಶಿಲಿಸಿದ ನಂತರ ಅಲ್ಲೆ ಇದ್ದ ಮೀನುಗಾರ ತರಮಕೋಲ ಬೆಂಡಿನ ಸಹಾಯದಿಂದ ನಿರಂತರ ಸೋರಿಕೆಯಾಗುವ ಸ್ಥಳವನ್ನು ವಿಡಿಯೋ ಚಿತ್ರಿಕರಣ ಮತ್ತು ಭಾವ ಚಿತ್ರವನ್ನು ಸೆರೆಹಿಡಿದ ನಂತರ ಅಕ್ಕ ಪಕ್ಕದಲ್ಲಿರುವ ರೈತರನ್ನು ಕರೆಸಿ ಸುಧೀರ್ಗವಾಗಿ ಚರ್ಚಿಸಿದ ನಂತರ ಸ್ಥಳದಲ್ಲೇ ಧಿಡೀರ ಪ್ರತಿಭಟನೆ ನಡೆಸಿ ಮಾತನಾಡಿದ ಅವರು ಪ್ರವಾಹ ಸಂಧರ್ಬದಲ್ಲಿ ಎಲ್ಲಾ ಗೇಟಗಳನ್ನು ಮೆಲೇತ್ತಬೇಕಾಗಿತ್ತು ಆದರೆ ಸಂಬಂಧಪಟ್ಟ ಅಧಿಕಾರಿಗಳ ದಿವ್ಯ ನಿರ್ಲಕ್ಷದಿಂದ ಎಲ್ಲಾ ಗೇಟ್‌ಗಳು ತುಕ್ಕು ಹಿಡಿದು ಕ್ರೈನ್ ಬಳಿಸದರೂ ಕೂಡ ಮೇಲೆ ಬರಲಾರದ ಸ್ಥತಿ ನಿರ್ಮಾಣವಾಗಿದೆ



ಈ ಬ್ರಿಜ್ ಕಂ ಬ್ಯಾರೇಜ್ ನಿರ್ವಹಣೆ ಕೊರತೆಯಿಂದ ಅವಸಾನದ ಹಾದಿ ಹಿಡಿದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಭೀಮಾ ನದಿಗೆ ಅಡ್ಡಲಾಗಿ ಕಟ್ಟಿರುವ ಹಿರೇನೂರ ಕಂದಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ಈ ಭಾಗದ ಕಡು ಬಡವರ ರೈತರ ಜೀವನಾಡಿಯಾಗಿದೆ. ಜೊತೆಗೆ ಬೇಸಿಗೆಯಲ್ಲಿ ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಆಗಬಾರದೆಂದು ಸಾರ್ವಜನಿಕ ತೆರಗೆ ಹಣದಲ್ಲಿ ಕೋಟಿಗಟ್ಟಲೇ ಖರ್ಚು ಮಾಡಿ ಕಟ್ಟಿರುವ ಬ್ರಿಜ್ ಕಂ ಬ್ಯಾರೇಜ್‌ನ ನಿರ್ವಹಣೆ ಮಾಡುವಲ್ಲಿ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು, ಜಿಲ್ಲಾಡಳಿತದ ದಿವ್ಯ ನಿರ್ಲಕ್ಷ್ಯದಿಂದ ಅವಸಾನದ ಹಾದಿ ಹಿಡಿದಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಕಲ್ಲಪ್ಪ, ಶಾಂತಪ್ಪ, ಮಾಣಿಕರಡ್ಡಿ ಪಾಟೀಲ್, ಹಣಮಂತ, ಸುನೀಲ್ ಶೆಟ್ಟಿ, ಬನ್ನಪ್ಪ, ನಬಿಸಾಬ್, ಭೀಮರಾಯ, ಪವನ, ಶರಣಪ್ಪ ನಿಂಗಪ್ಪ, ಬೂದೆಪ್ಪ, ಸುರೇಶ, ರವಿ, ತಾಯಪ್ಪ, ಭರತ ಪೀರ್ ಮಹ್ಮದ್ , ದೇವಪ್ಪ, ಶಿವಾನಂದಶರಣಪ್ಪ, ಚಂದ್ರು, ಶಾಂತಪ್ಪ, ಹಸೇನ, ಗಂಗು, ಅನೀಲ್, ಭೀಮಣ್ಣ, ಮೆಹಬೂಬಸಾಬ್, ಸಾಬಣ್ಣ, ಮರಿಲಿಂಗಪ್ಪ, ಮಲ್ಲಪ್ಪ, ಪ್ರಭು, ಮರೆಪ್ಪ, ಭೀಮಾಶಂಕರ, ರೆಡ್ಡೆಪ್ಪ, ಸತೀಶ, ಮೋನಪ್ಪ, ಭಾಗಪ್ಪ, ಸಿದ್ದಪ್ಪ, ಬನ್ನಪ್ಪ, ಮಲ್ಲಪ್ಪ, ಮರಗಪ್ಪ, ದೇವಪ್ಪ, ಬನ್ನಪ್ಪ, ಕುಮಾರ, ನರಸಪ್ಪ,ಬಸಪ್ಪ, ಮಹಾದೇವಪ್ಪ, ಹಣಮಂತ, ಜಗದೀಶ, ಬನ್ನಪ್ಪ, ಸುರೇಶ, ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.



“ ಮಾಜಿ ಸಿಎಂ ಎಸ್. ಎಂ ಕೃಷ್ಣಾ ಅವಧಿಯಲ್ಲಿ ನಿರ್ಮಿಸಿರುವ ಹಿರೇನೂರ ಕಂದಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ಈ ಭಾಗದ ರೈತರ ಜೀವನಾಡುಯಾಗಿದೆ. ಇದೇ ಹಿರೇನೂರ ಕಂದಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ನೀರು ಆಶ್ರಯಸಿಕೊಂಡು ಈ ಭಾಗದ ಜನ ಜೀವನ ಸಾಗಿಸುತ್ತಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಗೇಟ್ ತುಕ್ಕು ಹಿಡಿದು ಅಪಾರ ಪ್ರಮಾಣದ ನೀರು ಸೋರಿಕೆ ಆಗ್ತಿವೆ. ಕೂಡಲೇ ತುಕ್ಕ ಹಿಡಿದ ಗೇಟ್‌ಗಳನ್ನು ತೆರವು ಗೊಳಿಸಿ ಹೊಸ ತಂತ್ರಜ್ಞಾನದ (ಹೈಡ್ರಾಲಿಕ್ ಗೇಟ್) ಅಳವಡಿಸಿ ಈ ಭಾಗದ ರೈತರಿಗೆ ಅನುಕೂಲವಾಗುವಂತೆ ನೋಡಿಕೊಳ್ಳಬೇಕು

**ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ**

# ದೇವರಾಜ್: ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನ




• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ರಂಗಭೂಮಿಯ ಸಂಗೀತ ನಿರ್ದೇಶಕರಾಗಿ ಹಲವು ದಶಕಗಳ ಕಾಲ ಸೇವೆ ಸಲ್ಲಿಸಿದ ಸಮೀಪದ ಗಿಣಿಗೇರಾ ಗ್ರಾಮದ ಹೆಚ್. ದೇವರಾಜ್ ಅವರಿಗೆ 2025-26ನೇ ಸಾಲಿನ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ವಿಜಯನಗರ ಜಿಲ್ಲೆಯ ಹೂವಿನಹಡಗಲಿಯ ರಂಗಭಾರತಿ ರಂಗಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹೆಚ್.ದೇವರಾಜ್ ಸೇರಿದಂತೆ ರಂಗಪೂಮಿಯ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಅನೇಕ ಸಾಧಕರನ್ನು ಈ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಸದಸ್ಯ ಚಾಂದ್ ಪಾಷಾ ಕಿಲ್ಲೇದಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಸೇರಿದಂತೆ ಅನೇಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ




• ಮಲ್ಲಮ್ಮ ನುಡಿ ವಾರ್ತೆ ಬೀದರ

ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಗೌರವಿಸುವ ಹಾಗೂ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣದ ಬಗ್ಗೆ ಜಾಗೃತಿ ಮೂಡಿಸಲು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ದಿನವು ವಿಶೇಷದಿನವಾಗಿದ್ದು, ಅಂತರಾಷ್ಟ್ರೀಯ ಮಹಿಳಾ ದಿನ ಅಂಗವಾಗಿ ಬೀದರ ಜಿಲ್ಲಾ ಪೊಲೀಸ್ ವತಿಯಿಂದ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಬೀದರ ಹೊರವಲಯದ ಇನ್ನೈರ ರೇಸಾರ್ಟನಲ್ಲಿ ರವಿವಾರ ವಿಜೃಂಭಣೆಯಿಂದ ಆಚರಿಸಲಾಯಿತು,

ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಗೀತಾ ಖಂಡ್ರೆ ಅವರು ಉದ್ಘಾಟಿಸಿದರು,

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪ್ರಸಿದ್ಧ ನಟಿಯಾದ ಭವ್ಯಾ ಪಾಟೀಲ್ ರವರು ಹಾಗೂ ಶೈನಿ ಪ್ರದೀಪ್ ಗುಂಟಿ, ಅಕ್ಕಪಡೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಜ್ಯ ಮಟ್ಟದ ಯೋಜನಾ ಸಲಹೆಗಾರರು, ಹಾಗೂ ಕುಮಾರಿ ಗಗನಾ ನಟಿ ಕಾಮಿಡಿ ಖಿಲಾಡಿಗಳು, ಹಾಗೂ ಕುಮಾರಿ ಶಿವಾನಿ ಶಿವದಾಸ ಸ್ವಾಮಿ ಝೀ ಟಿವಿ ಚಾನೆಲನ ಸ.ರಿ.ಗ.ಮ.ಪ ವಿಜೇತೆ, ಕುಮಾರು ಪಲ್ಲವಿ ಪಂಚಾಳ ನಟಿ ಕಾಮಿಡಿ ಖಿಲಾಡಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಚಂದ್ರಕಾಂತ ಪೂಜಾರಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಪಾಲ್ಗೊಂಡಿದ್ದು,

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ಯ ಬೀದರ್ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಬೀದರ, ಹುಮನಾಬಾದ ಹಾಗೂ ಭಾಲ್ಕಿ ಉಪ ವಿಭಾಗದ ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿಯವರ ನೃತ್ಯ ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದ್ದು ,

## ಎತ್ತಿನ ಬೂದಿಹಾಳ್ ಶಾಲೆಯಲ್ಲಿ ಭಗತ್ ಸಿಂಗ್ ಹುತಾತ್ಮ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇಂದು ಎಐಡಿಎಸ್‌ಒ ವತಿಯಿಂದ ಬಳ್ಳಾರಿ ತಾಲೂಕಿನ ಎತ್ತಿನ ಬೂದಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಗತ್ ಸಿಂಗ್ ರವರ 95ನೇ ಹುತಾತ್ಮ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು, ಈ ಕಾರ್ಯಕ್ರಮದಲ್ಲಿ ಎಐಕೆಕೆಎಂಎಸ್ ಜಿಲ್ಲಾಧ್ಯಕ್ಷರಾದ ಗೋವಿಂದ್ ಮಾತನಾಡುತ್ತ ಕೇವಲ 23 ವರ್ಷದಲ್ಲಿ ನಗುನಗುತ ಗಲ್ಲಿಗೇರಿದ ಧೀರ ಹುತಾತ್ಮ ಭಗತ್ ಸಿಂಗ್ ರವರು, ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಮಹನ್ ನಾಯಕ ಇಂದಿನ ಸಮಸ್ಯೆಗಳಿದ್ದ ಹೋರಾಟ ಮಾಡೋದಕ್ಕೆ ಭಗತ್ ಸಿಂಗ್ ಅವರು ವಿಚಾರಗಳು ನಮಗೆ ಸ್ಪೂರ್ತಿದಾಯಕವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ನಟರಾಜ್, ಮಲ್ಲ ರೆಡ್ಡಿ,ಸೌಮ್ಯ,ಜಯಸುದ ಹಾಗೂ ಊರಿಗೆ ರೈತರ ಹುಲುಗಪ್ಪ,ಮಾಲಿಂಗಪ್ಪ, ಹನುಮಂತ,ರಾಮದಾಸ್,ಶ್ರೀರಾಮುಲು,ಹೊನ್ನೂರಪ್ಪ ಇನ್ನಿತರರು ಭಾಗವಹಿಸಿದ್ದರು.

## ಕಾರ್ಪೊರೇಟ್ ಮಿತ್ರ ಕಮಿಟಿ ಸದಸ್ಯರಾಗಿ ಪನ್ನರಾಜ್ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ಖ್ಯಾತ ಲೆಕ್ಕಪರಿಶೋಧಕ ಸಿರಿಗೇರಿ ಪನ್ನರಾಜ್ ಅವರನ್ನು ಭಾರತೀಯ ಚಾರ್ಟರ್ಡ್ ಅಕೌಂಟಂಟ್ಸ್ ಸಂಸ್ಥೆಯ ಕಾರ್ಪೊರೇಟ್ ಮಿತ್ರ ಕಮಿಟಿಗೆ 2026-27 ನೇ ಸಾಲಿಗೆ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ .

ಸೂಕ್ಮ,ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಕ್ಷೇತ್ರದಲ್ಲಿನ ಕಾರ್ಯಕ್ಷಮತೆಯನ್ನು ಪರಿಗಣಿಸಿ ಈ ನೇಮಕ ಮಾಡಲಾಗಿದೆ.

2030 ರ ವೇಳೆಗೆ ಸೂಕ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಕ್ಷೇತ್ರದಲ್ಲಿ ಬಳ್ಳಾರಿ ಜಿಲ್ಲೆಯನ್ನು ಒಂದು ಪ್ರಮುಖ ಜಿಲ್ಲೆಯನ್ನಾಗಿ ಮಾಡುವ ನಿಟ್ಟಿನಲ್ಲಿ ಪನ್ನರಾಜ್ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

ಭಾರತೀಯ ಚಾರ್ಟರ್ಡ್ ಅಕೌಂಟಂಟ್ಸ್ ಸಂಸ್ಥೆಯ ಜಿಲ್ಲಾ ಅಧ್ಯಕ್ಷರಾಗಿ, ದಕ್ಷಿಣ ಭಾರತ ಪ್ರಾಂತೀಯ ಅಧ್ಯಕ್ಷರಾಗಿ ಸೇವೆಸಲ್ಲಿರುವ ತಮಗೆ ಈ ಸ್ಥಾನ ನೀಡಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಪನ್ನರಜ್ ಅವರು ಬರ7ವ ಒಂದು ವರ್ಷದಲ್ಲಿ ಈ ಲ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಲು ಶ್ರಮಿಸುವುದಾಗಿ ಹೇಳಿದ್ದಾರೆ.

## ಎಸ್‌ಎಸ್‌ಎಲ್‌ಸಿ ಪರೀಕ್ಷೆ 324 ಗೈರು

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

73 ಪರೀಕ್ಷಾ ಕೇಂದ್ರಗಳಲ್ಲಿ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ-1 ನಡೆಯುತ್ತಿದ್ದು ಸೋಮವಾರ ನಡೆದ ವಿಜ್ಞಾನ ವಿಷಯ ಪರೀಕ್ಷೆಗೆ 324 ವಿದ್ಯಾರ್ಥಿಗಳು ಗೈರಾಗಿದ್ದಾರೆ. ವಿಜ್ಞಾನ ವಿಷಯ ಪರೀಕ್ಷೆಗೆ 20,345 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಈ ಪೈಕಿ 20,021 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಅನಾಮಧೇಯ ಶವ; ವಾರಸುದಾರರ ಪತ್ತೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ನಗರದ ರಾಮಾ ಸರ್ಕಲ್‌ನಲ್ಲಿ ಇರುವ ವೀರಭದ್ರೇಶ್ವರ ಪೆಟ್ರೋಲ್ ಬಂಕ್ ಪಕ್ಕದಲ್ಲಿ ಸುಮಾರು 50 ವಯಸ್ಸಿನ ಅಪರಿಚಿತ ವ್ಯಕ್ತಿ ಗಂಡಸಿನ ಶವ ಪತ್ತೆಯಾಗಿದೆ. ಮೃತ ವ್ಯಕ್ತಿಯು ಸುಮಾರು 40-50 ವರ್ಷದವರಾಗಿದ್ದು, ಸುಮಾರು 5.5 ಎತ್ತರ, ಕಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು, ಕೋಲು ಮುಖ, ಕುರುಚಲು ಗಡ್ಡ-ಮೀಸೆ, ಕಪ್ಪು ಮತ್ತು ಬಿಳಿ ಬಣ್ಣದ ಗುಂಗುರು ತಲೆಕೂದಲು ಬಿಟ್ಟಿರುತ್ತಾನೆ. ತಿಳಿ ನೀಲಿ ಆಕಾಶ ಬಣ್ಣದ ತುಂಬು ತೋಳಿನ ಜರ್ಕಿನ್,ಕಾಫಿ ಮತ್ತು ಬೂದು ಬಣ್ಣದ ಫಾರ್ಮಲ್ ಪ್ಯಾಂಟ್ ಧರಿಸಿರುತ್ತಾನೆ.

ಈ ಬಗ್ಗೆ ಪಿ.ಐ ಪಟ್ಟಣ ಪೊಲೀಸ್ ಠಾಣೆಯಯಲ್ಲಿ ಪ್ರಕರಣ ದಾಖಲಾಗಿದೆ. ಈ ವ್ಯಕ್ತಿ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಪಿ.ಐ ಪಟ್ಟಣ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08394224033, 9480805745, ಡಿ.ಎಸ್.ಪಿ. ಹೊಸಪೇಟೆ ದೂ.ಸಂ: 08394224204,9480805720, ಎಸ್.ಪಿ. ವಿಜಯನಗರ ದೂ.ಸಂ: 9480805700 ಗೆ ಸಂಪರ್ಕಿಸಬಹುದು ಎಂದು ಪಟ್ಟಣ ಠಾಣೆ ಅಸಿಸ್ಟೆಂಟ್ ಸಬ್-ಇನ್ಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅನೇಕಮಹನೀಯರ ಜಯಂತಿ ಪೂರ್ವಭಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಏಪ್ರಿಲ್ 5 ರಂದು ಹಸಿರು ಕ್ರಾಂತಿ ಹರಿಕಾರ ಹಾಗೂ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಂ ರವರ 119ನೇ ಜಯಂತಿ ಮತ್ತು ಏಪ್ರಿಲ್ 14 ರಂದು ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರ 135ನೇ ಜಯಂತಿಯನ್ನು ಆಚರಿಸುವ ಸಲುವಾಗಿ ಮಾ. 26 ಮಧ್ಯಾಹ್ನ 4 ಗಂಟೆಗೆ ಜಿಲ್ಲಾಧಿಕಾರಿ ಕವಿತಾ ಎಸ್, ಮನ್ನಿಕೇರಿ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ. ಸಭೆಗೆ ಜಿಲ್ಲೆಯ ಎಲ್ಲ ಸಮುದಾಯದ ಸಂಘ ಸಂಸ್ಥೆ ಪದಾಧಿಕಾರಿಗಳು, ಮುಖಂಡರುಗಳು, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ವೈ.ಎ.ಕಾಳೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾ. 26 ಕ್ಕೆ ಆಯವ್ಯಯ ವಿಶೇಷ ಸಾಮಾನ್ಯ ಸಭೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಇದೇ ಮಾರ್ಚ್ 26 ರ ಬೆಳಗ್ಗೆ 11 ಗಂಟೆಗೆ ನಗರಸಭೆ ಅಧ್ಯಕ್ಷ ಎನ್. ರೂಪೇಶ್ ಕುಮಾರ್‌ರವರ ಅಧ್ಯಕ್ಷತೆಯಲ್ಲಿ 2026-27 ನೇ ಸಾಲಿನ ಅಂದಾಜು ಆಯವ್ಯಯ ಕುರಿತ ಸಾಮಾನ್ಯ ಸಭೆ ಆಯೋಜಿಸಲಾಗಿದ್ದು, ಎಲ್ಲಾ ಚುನಾಯಿತ ಸದಸ್ಯರು ಆಗಮಿಸುವಂತೆ ಪೌರಾಯುಕ್ತ ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಮೆರಿಕಾ ತನ್ನ ಲಾಭಕ್ಕಾಗಿ ಇತರ ರಾಷ್ಟ್ರಗಳ ಬಲಿ : ಕಂಬಳಿ ಟೀಕೆ




• ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು

ಸಾಮ್ರಾಜ್ಯಶಾಹಿಗಳಿಗೆ ಲಾಭವೇ ಪ್ರಧಾನವಾಗಿದೆ ಯಾವುದೇ ಕಾರಣಕ್ಕೂ ಅವರಿಗೆ ಭಾರತದಲ್ಲಿ ಇರಲು ಅವಕಾಶ ಕೊಡಬಾರದೆಂದು ಭಗತ್ ಸಿಂಗ್ ಅವರ ಧ್ಯೇಯವಾಗಿತ್ತು ಈಗಲೂ ಸಾಮ್ರಾಜ್ಯಶಾಹಿ ಅಮೇರಿಕಾ ಲಾಭಕ್ಕಾಗಿ ಸಹಸ್ರಾರು ಇವುಗಳನ್ನು ಬಲಿ ಪಡಿಯುತ್ತಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮುಖಂಡ ಬಾಶ್ಮಿಯ ಅಭಿಪ್ರಾಯ ಪಟ್ಟರು

ನಗರದ ಎಪಿಎಂಸಿ ಮುಂಭಾಗದಲ್ಲಿ ಭಗತ್ ಸಿಂಗ್ ಹುತಾತ್ಮ ದಿನಾಚರಣೆಯನ್ನು ಸಾಮ್ರಾಜ್ಯಶಾಹಿ ವಿರೋಧಿ ದಿನವನ್ನಾಗಿ ಹಮ್ಮಿಕೊಂಡಿದ್ದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು

ಬ್ರಿಟಿಷರು ಭಾರತದಿಂದ ಕಾಲ್ತೆ ಗೆಯಬೇಕಾದರೆ ಉಗ್ರ ಸ್ವರೂಪದ ಹೋರಾಟ ಅವಶ್ಯಕತೆ ಇದೆ ಎಂದು ಭಗತ್ ಸಿಂಗ್ ಭಾವಿಸಿದ್ದರು ಹೀಗಾಗಿ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದರೆಂದು ವಿವರಿಸಿದರು

ಸಿ ಪಿ ಐ ಜಿಲ್ಲಾ ಘಟಕದ ಕಾರ್ಯದರ್ಶಿ ಚಂದ್ರಶೇಖರ್ ಕ್ಯಾತ್ನಟ್ಟಿ ಅಮೆರಿಕ ಮತ್ತು ಇಸ್ರೇಲ್ ದೇಶಗಳು ಸೇರಿ ಇರಾನ್ ಮೇಲೆ ನಡೆಸುತ್ತಿರುವ ದಾಳಿಯಿಂದ ವಿಶ್ವದಾದ್ಯಂತ ಆಗುತ್ತಿರುವ ದುಷ್ಪರಿಣಾಮ ಕುರಿತು ತಿಳಿಸಿದರು

ಹಮಾಲರ ಸಂಘದ ಗೌರವ ಅಧ್ಯಕ್ಷ ವೆಂಕನಗೌಡ ಗದ್ರಟಗಿ ಕಟ್ಟಡ ನಿರ್ಮಾಣ ಸಂಘದ ಅಧ್ಯಕ್ಷ ಜಗದೀಶ ಕರ್ನಾಟಕ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಚಿಟ್ಟಿಬಾಬು ದಲಿತ ಸಂಘರ್ಷ ಸಮಿತಿಯ ಸಂಚಾಲಕ ಕೇಮರಿಯಪ್ಪ ಸುಕಾಲ್ ಪೇಟೆ ಚಳವಳಿ ಬೆಂಬಲಿಸಿ ಮಾತನಾಡಿದರು

ಹಮಾಲರ ಸಂಘದ ಮುಖಂಡರಾದ ಹನುಮಂತಪ್ಪ ಹಂಚಿನಾಳ ಪ್ರಕಾಶ್ ಅಮರೇಶ ನಾಯಕ ಮುಕ್ತುಮ್ ಸಾಬ ಸುಬಾನ್ಸಾಬ ಚಳುವಳಿಯಲ್ಲಿ ಭಾಗವಹಿಸಿದ್ದರು

## ದೇವರ ದಾಸಿಮಯ್ಯ ವಚನ ಸಾಹಿತ್ಯದ ಆದ್ಯ ಪ್ರವರ್ತಕ: ಚಂದ್ರಕಾಂತ ಪೂಜಾರಿ



• ಮಲ್ಲಮ್ಮ ನುಡಿ ವಾರ್ತೆ ಬೀದರ,

ದಾಸಿಮಯ್ಯನವರು ಕನ್ನಡದ ಮೊದಲ ವಚನಕಾರರಲ್ಲಿ ಒಬ್ಬರು ಇವರನ್ನು ವಚನ ಸಾಹಿತ್ಯದ 'ಆದ್ಯ ವಚನಕಾರ ಎಂದು ಕರೆಯಲಾಗುತ್ತದೆಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ ಹೇಳಿದರು.

ಅವರು ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಪೂಜ್ಯ ಡಾ.ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಆಯೋಜಿಸಿದ ದೇವರ ದಾಸಿಮಯ್ಯ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಂದಿನ ಕಾಲದ ಜನರಲ್ಲಿ ಇದ್ದ ಮೂಢನಂಬಿಕೆಗಳನ್ನು ಮತ್ತು ಮೇಲು-ಕೀಳು ಎಂಬ ಭೇದಭಾವವನ್ನು ಇವರು ತಮ್ಮ ಸರಳವಾದ ಮಾತುಗಳ ಮೂಲಕ ತಿದ್ದಿದರು. "ದೇವರಿಗೆ ಜಾತಿ ಇಲ್ಲ, ಭಕ್ತಿಯೇ ಮುಖ್ಯ" ಎಂದು ಸಾರಿದ ಇವರು, ಹೆಣ್ಣು-ಗಂಡು ಎಂಬ ವ್ಯತ್ಯಾಸ ಮಾಡದೆ ಎಲ್ಲರಿಗೂ ಸಮಾನ ಗೌರವ ಸಿಗಬೇಕು ಎಂದು ಹಂಬಲಿಸಿದ ಕ್ರಾಂತಿಕಾರಿ ಪುರುಷರಾಗಿದ್ದಾರೆ. ಬಸವಣ್ಣನವರಿಗಿಂತ ಮೊದಲೇ ವಚನ ಕ್ರಾಂತಿಗೆ ನಾಂದಿ ಹಾಡಿದ ದಾಸಿಮಯ್ಯನವರ ಕೊಡುಗೆ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಅಪಾರವಾದುದು. ವೃತ್ತಿಯಿಂದ ನೇಕಾರರಾಗಿದ್ದ ಇವರು,ಶ್ರಮಜೀವನದ ಮಹತ್ವವನ್ನು ಸಾರಿದವರು.ಅಜ್ಞಾನದ ಕತ್ತಲನ್ನು ಕಳೆದು ಜ್ಞಾನದ ಬೆಳಕನ್ನು ನೀಡುವ ಇವರ ಚಿಂತನೆಗಳು ಸಮಾಜದಲ್ಲಿ ಸಮಾನತೆ ಮತ್ತು ಭಕ್ತಿಯ ಮಾರ್ಗವನ್ನು ತೋರಿವೆ ಎಂದರು.ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಬಸವ ಸೇವಾ ಪ್ರತಿಷ್ಠಾದ ಅಧ್ಯಕ್ಷ ಡಾ.ಗಂಗಾಂಬಿಕ ಅಕ್ಕಾ, ಕಲಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರಿನಲ್ಲಿ ಜನಿಸಿದ ದೇವರ ದಾಸಿಮಯ್ಯನವರು 'ರಾಮನಾಥ' ಅಂಕಿತದೊಂದಿಗೆ ಸರಳ ಮತ್ತು ವೈಚಾರಿಕವಾಗಿ 176ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ಸಮಾನತೆಯ ತತ್ವ ಸಾರಿದ ದಾಸಿನಯ್ಯನವರು ಪ್ರೀತಿಯೇ ಸಂಪತ್ತು ಎಂದು ಬದುಕಿದ್ದವರು. ತಮ್ಮ ಬದುಕಿನುದ್ದಕ್ಕೂ ಬೇ-ಟೆಗಾರರು ಸೇರಿದಂತೆ ಅನೇಕರ ಮನಪರಿವರ್ತನೆ ಮಾಡಿದ್ದಾರೆ.ದೇವರ ದಾಸಿಮಯ್ಯನವರ ಪತ್ನಿ ದುಗ್ಗಳೆ ಕೂಡ ಮಹಾಸಾಧ್ವಿ ಮತ್ತು ಅನ್ಯೋನ್ಯ ದಾಂಪತ್ಯ ಜೀವನ ನಡೆಸುತ್ತಿದ್ದ ಶರಣೆ.ಎಲ್ಲರೂ ದಾಸಿಮಯ್ಯ ಅವರ ವಚನಗಳನ್ನು ಪಠಣ ಮಾಡಬೇಕು ಹಾಗೂ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕೆಂದರು.

ವೇದಿಕೆ ಕಾರ್ಯಕ್ರಮ ಮುಂಚಿತವಾಗಿ ದೇವರ ದಾಸಿಮಯ್ಯ ಭಾವಚಿತ್ರ ಮೆರವಣಿಗೆ ನಗರದ ಗಣೇಶ್ ಮೈದಾನದಿಂದ ಪ್ರಾರಂಭವಾಗಿ ಹರಳಯ್ಯ ವೃತ್ತ, ಶಿವಾಜಿ ವೃತ್ತ, ಭಗತ್ ಸಿಂಗ್ ವೃತ್ತ, ಬಸವವೇಶ್ವರ ವೃತ್ತ, ಅಂಬೇಡ್ಕರ್ ವೃತ್ತ, ರೋಟರಿ ವೃತ್ತ ಮಾರ್ಗದಿಂದ ಸಾಗಿ ಪೂಜ್ಯ ಡಾ.ಚನ್ನಬಸವ ಪಟ್ಟದೇವರ ರಂಗಮಂದಿಕ್ಕೆ ತಲುಪಿತು.

ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ., ಪಿಯುಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದು ಪಾಸಾದ ವಿದ್ಯಾರ್ಥಿಗಳಿಗೆ,ನಿವೃತ್ತ ಸರ್ಕಾರಿ ನೌಕರರಿಗೆ ಹಾಗೂ ಸಮಾಜಕ್ಕೆ ಕೊಡುಗೆ ನೀಡಿದವರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಡಳಿತ ಕಚೇರಿಯ ಸಹಾಯಕ ನಿರ್ದೇಶಕ ಸೋಮಶೇಖರ್ ಮಡಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜಶೇಖರ ಒಟಗೆ, ಸಮಾಜದ ಪ್ರಮುಖರಾದ ರಾಮಕೃಷ್ಣ ಸಾಳೆ, ಪ್ರಶಾಂತ್ ಸೇಂದ್ರೆ, ಮಾಧವ ಚೌಡೆಕರ್, ಅಶೋಕ್ ಎಲ್ಲಿ, ನಾಗಪ್ಪ ಜಂಬಗಿ, ಸೋಮಶೇಖರ್ ಅಮಲಾಪುರ, ಕೋಟೆ ವಿಶ್ವನಾಥ್, ಅನುರಾಧ ಚಂದಾ ಸೇರಿದಂತೆ ನೇಕಾರ ಸಮಾಜ ಬಂಧುಗಳು ಉಪಸ್ಥಿತರಿದ್ದರು.

## ಮಹಿಳಾ ನೌಕರರ ಆರೋಗ್ಯ ಸಶಕ್ತತೆ ಆಡಳಿತದ ಅಡಿಪಾಯ: ಜಿಲ್ಲಾಧಿಕಾರಿ



ವಿಜಯನಗರ (ಹೊಸಪೇಟೆ)


ಮಹಿಳಾ ನೌಕರರು ಕಚೇರಿ ಕೆಲಸ ಮತ್ತು ಮನೆಯ ಜವಾಬ್ದಾರಿಗಳೆರಡನ್ನೂ ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಆದರೆ ಕಚೇರಿ ಕೆಲಸದ ಒತ್ತಡದ ಓಟದಲ್ಲಿ ತಮ್ಮ ಆರೋಗ್ಯದ ಕಡೆಗೆ ಗಮನಹರಿಸುತ್ತಿಲ್ಲ. ಆರೋಗ್ಯವಂತ ನೌಕರರಿಂದ ಮಾತ್ರ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲು ಸಾಧ್ಯ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಇನ್ನರ್ ವ್ಹೀಲ್ ಕ್ಲಬ್ ಆಫ್ ಹೊಸಪೇಟೆ ಹಾಗೂ ಆಯುಷ್ ಇಲಾಖೆ ಸಹಯೋಗದೊಂದಿಗೆ ಸೋಮವಾರ ರೋಟರಿ ಆಸ್ಪತ್ರೆಯಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ನ ಮಹಿಳಾ ಸಿಬ್ಬಂದಿಗಳಿಗೆ ಆಯೋಜಿಸಲಾಗಿದ್ದ ಮಹಿಳಾ ನೌಕರರಿಗೆ ವಿಶೇಷ ವೈದ್ಯಕೀಯ ತಪಾಸಣೆ ಶಿಬಿರ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯವಂತರಾಗಿರಲು ಮಹಿಳಾ ನೌಕರರು ಕನಿಷ್ಠ ಆರು ತಿಂಗಳಿಗೊಮ್ಮೆ ಸಮಗ್ರ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದ ಅವರು, ಕೆಲಸದ ಒತ್ತಡವು ದೈಹಿಕ ಕಾಯಿಲೆಗಳಿಗಿಂತ ಮಾನಸಿಕ ನೆಮ್ಮದಿಯನ್ನು ಹಾಳು ಮಾಡುತ್ತದೆ. ಆದ್ದರಿಂದ ಪ್ರತಿಯೊಬ್ಬ ಮಹಿಳಾ ನೌಕರರು ದಿನದ ಅರ್ಧ ಗಂಟೆಯನ್ನಾದರೂ ಯೋಗ, ಧ್ಯಾನಕ್ಕೆ ಮೀಸಲಿಡಬೇಕು. ಇದರಿಂದ ರಕ್ತದೊತ್ತಡ ಮತ್ತು ಮಧುಮೇಹದಂತಹ ಕಾಯಿಲೆ ನಿಯಂತ್ರಿಸಬಹುದು. ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತಿರುವ ಕ್ಯಾನ್ಸರ್ ಹಾಗೂ ಇತರ ಸ್ತ್ರೀಸಂಬಂಧಿ ಕಾಯಿಲೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕು. ಆರೋಗ್ಯದಲ್ಲಿ ಏನಾದರೂ ಏರುಪೇರು ಉಂಟಾದಲ್ಲಿ ಯಾವುದೇ ಮುಜುಗರವಿಲ್ಲದೇ ತಜ್ಞವೈದ್ಯರಲ್ಲಿ ಸಮಾಲೋಚನೆ ನಡೆಸಬೇಕು. ಆರಂಭಿಕ ಹಂತದಲ್ಲಿಯೇ ಕಾಯಿಲೆ ಪತ್ತೆಯಾದರೆ ಅದಕ್ಕೆ ತಕ್ಕ ಪರಿಹಾರ ಕಂಡುಕೊಳ್ಳಲು ಸಹಕಾರಿಯಾಗಲಿದೆ. ಪ್ರತಿಯೊಬ್ಬರೂ ಇಂತಹ ವೈದ್ಯಕೀಯ ತಪಾಸಣಾ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಇನ್ನರ್ ವ್ಹೀಲ್ ಕ್ಲಬ್ ಆಫ್ ಹೊಸಪೇಟೆ ಸಂಸ್ಥೆಯ ಅದ್ಯಕ್ಷೆ ನೈಮಿಷಾ, ಕಾರ್ಯದರ್ಶಿ ಡಾ. ಆರತಿ ರಾಜಪೂರ್, ಆಯುಷ್ ಇಲಾಖೆಯ ವೈದ್ಯಾಧಿಕಾರಿ ಡಾ. ಮುನಿವಾಸುದೇವ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿಗಳು ಇದ್ದರು.

## ತಾಲೂಕಾಡಳಿತದಿಂದ ದೇವರ ದಾಸಿಮಯ್ಯ ಜಯಂತ್ಯೋತ್ಸವ ಆಚರಣೆ




• ಮಲ್ಲಮ್ಮ ನುಡಿ ವಾರ್ತೆ,ಕಂಪ್ಲಿ

ನಗರದ ತಾಲೂಕು ಕಛೇರಿಯಲ್ಲಿ ತಾಲೂಕಾಡಳಿತ ಹಾಗೂ ಪದ್ಮಶಾಲಿ, ಸ್ವಕುಳಶಾಲಿ, ಕುರುಹಿನಶೆಟ್ಟಿ, ತೊಗಟವೀರ, ದೇವಾಂಗ ಮತ್ತು ನೇಕಾರ ಸಮುದಾಯಗಳ ಒಕ್ಕೂಟದ ವತಿಯಿಂದ ನಡೆದ ದೇವರ ದಾಸಿಮಯ್ಯ ಜಯಂತ್ಯೋತ್ಸವವನ್ನು ಕಂಪ್ಲಿ ತಾಲೂಕು ದಂಡಾಧಿಕಾರಿಗಳಾದ ಮಂಜುನಾಯಕ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ದೇವರ ದಾಸಿಮಯ್ಯನವರು ಉತ್ತಮ ನಡತೆ, ನೀತಿ, ನ್ಯಾಯ, ಧರ್ಮ ಹಾಗೂ ಜೀವನದ ಮೂಲ ಉದ್ದೇಶವನ್ನು ತಮ್ಮ ವಚನಗಳಲ್ಲಿ ಉಲ್ಲೇಸುತ್ತಾ ನೇಯ್ಗೆ ಕಾಯಕದ ಮೂಲಕ ಶಿವನನ್ನು ಒಲಿಸಿಕೊಂಡು ದೇವರ ದಾಸಿಮಯ್ಯನೆಂದು ಪ್ರಖ್ಯಾತಿಯಾಗಿದ್ದಾರೆ.

ಅವರಂತೆ ಸಮಾಜ ಹಿತಚಿಂತನೆಯ ಮಾರ್ಗದಲ್ಲಿ ನಮ್ಮೆಲ್ಲರಿಗೆ ಆದರ್ಶರಾಗಿರುವ ಸಂತರು, ದಾರ್ಶನಿಕರು, ಶರಣರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಜೀವನವನ್ನು ನಡೆಸೋಣವೆಂದು ತಿಳಿಸಿದರು.

ಪದ್ಮಶಾಲಿ, ಸ್ವಕುಳಶಾಲಿ, ಕುರುಹಿನಶೆಟ್ಟಿ, ತೊಗಟವೀರ, ದೇವಾಂಗ ಮತ್ತು ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಬಿ.ಸತ್ಯನಾರಾಯಣ ಅವರು ಮಾತನಾಡಿ ಚೈತ್ರಶುದ್ಧ ಪಂಚಮಿಯಂದು ಯಾದಗಿರಿ ಜಿಲ್ಲೆಯ ಮುದನೂರು ಗ್ರಾಮದಲ್ಲಿ ಜನಿಸಿದ ದೇವರ ದಾಸಿಮಯ್ಯ ಅವರು ಭಗವಂತನ ಅನುಕರಣೆಯೊಂದಿಗೆ ಶಿವ ಪರಮಾತ್ಮನನ್ನು ಒಲಿಸಿಕೊಂಡಿದ್ದಾರೆ.

176ಕ್ಕೂ ಅಧಿಕ ವಚನಗಳನ್ನು ಬರೆದಿರುವ ಅವರ ಅಂಕಿತನಾಮ ರಾಮನಾಥ ಎಂಬುದಾಗಿದೆ. ನೇಯ್ಗೆ ವೃತ್ತಿಯ ಮೂಲಕ ಹಲವು ಜೀವನದ ಸಾರಾಂಶವನ್ನು ತಿಳಿಸಿದ ಇವರು ನಮ್ಮ ನೇಯ್ಗೆ ಸಮುದಾಯಗಳ ಆರಾಧ್ಯದೇವ ಪುರುಷರಾಗಿದ್ದಾರೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಂಪ್ಲಿ ತಾಲೂಕು ಆಡಳಿತ ಸಿಬ್ಬಂದಿಗಳು ಹಾಗೂ ದೇವರ ದಾಸಿಮಯ್ಯ ಸಮಾಜದ ಹಿರಿಯ ಮುಖಂಡರು ಹಾಗೂ ಯುವಕರು ಈ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ರಮೇಶಗೌಡ ಪಾಟೀಲ್‌ಗೆ ಶ್ರದ್ಧಾಂಜಲಿ





• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಘವ ಮೆಮೋರಿಯಲ್ ಅಸೋಸಿಯೇಷನ್, ಬಳ್ಳಾರಿ ಜಿಲ್ಲಾ ವಾಣಿಜ್ಯ ಕೈಗಾರಿಕ ಸಂಸ್ಥೆ, ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಸಂಯುಕ್ತಾ ಶ್ರಯದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಹಿರಿಯ ರಂಗಭೂಮಿ ಕಲಾವಿದ ದಿ. ರಮೇಶ ಗೌಡ ಪಾಟೀಲ್ ರವರ ಶ್ರದ್ಧಾಂಜಲಿ ಕಾರ್ಯಕ್ರಮ ನಿನ್ನೆ ರಾಘವ ಕಲಾ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿತ್ತು. ವೇದಿಕೆಯಲ್ಲಿ ರಾಘವ ಮೆಮೋರಿಯಲ್ ಅಸೋಸಿಯೇಷನ್ ಗೌರವಧ್ಯಕ್ಷರಾದ ಕೆ ಚನ್ನಪ್ಪ, ಅಧ್ಯಕ್ಷರಾದ ಕೆ ಕೋಟೆಶ್ವರ ರಾವ್, ಗೌರವ ಕಾರ್ಯದರ್ಶಿ ಶೇ.ಎನ್ ಪ್ರಕಾಶ್, ಬಳ್ಳಾರಿ ಜಿಲ್ಲಾ ವಾಣಿಜ್ಯ ಕೈಗಾರಿಕ ಸಂಸ್ಥೆ ಅಧ್ಯಕ್ಷರಾದ ಎ ಮಂಜುನಾಥ, ಗೌರವ ಕಾರ್ಯದರ್ಶಿ ಕೆ.ಸುರೇಶ ಬಾಬು, ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಕಣೇಕಲ್ ಮಹಾಂತೇಶ, ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷರಾದ ಯಲ್ಲನಗೌಡ ಶಂಕರಬಂಡೆ, ಕಾರ್ಯದರ್ಶಿ ಮುದ್ದಟನೂರು ತಿಪ್ಪೆಸ್ವಾಮಿ, ದಿ. ರಮೇಶ ಗೌಡ ಪಾಟೀಲ್ ಮಕ್ಕಳಾದ ರಾಜಶೇಖರ ಪಾಟೀಲ್, ರಾಮನಗೌಡ ಪಾಟೀಲ್, ಮಗಳಾದ ಶ್ರೀಮತಿ ದಂಡಿ ಶ್ರೀದೇವಿ ಉಪಸ್ಥಿತಿರಿದ್ದರು.

ಪ್ರಾರಂಭದಲ್ಲಿ ಶ್ರೀಮತಿ ಅದೋನಿ ವೀಣಾ ಮತ್ತು ಎಮ್ಮಿಗನೂರು ಜಡೇಶ ಇವರಿಂದ ರಂಗಗೀತೆಗಳು ಹಾಡಿದರು. ಯೋಗಿಶ್ ತಬಲ ಹೆಚ್ ತಿಪ್ಪೆಸ್ವಾಮಿ ಕೀಬೋರ್ಡ್ ಸಾಥ್ ನೀಡಿದರು. ರಮೇಶ ಗೌಡ ಪಾಟೀಲ್ ಅವರ ಬಗ್ಗೆ ವೇದಿಕೆ ಗಣ್ಯರು, ಅಣ್ಣಾಜಿ ಕೃಷ್ಣರೆಡ್ಡಿ, ಸಿದ್ದರಾಮ ಕಲ್ಮಠ, ಸಿ.ಎ. ಚೌದರಿ, ಡಾ.ದೇವಣ್ಣ, ಎನ್ ಬಸವರಾಜ, ಬದನೆಹಾಳ್ ಭೀಮಣ್ಣ ಅವರ ಸಾದನೆಗಳು ಸ್ಮರಿಸಿದರು. ಕಾರ್ಯಕ್ರಮ ನಿರೂಪಣೆ ವೀರೇಶ ದಳವಾಯಿ ನಿರ್ವಹಿಸಿದರು.

ದಂಡಿವಿಶ್ವನಾಥ, ಬಾಣಪುರ ರಮೇಶಗೌಡ, ಪಿ ಧನಂಜಯ, ಪಿ.ಎಂ ನಟರಾಜ್, ಟಿ ವಿರುಪಾಕ್ಷಿ ಗೌಡ,ವಿ ರಾಮ ಚಂದ್ರ, ಕೆ.ಕೃಷ್ಣ ದೊಡ್ಡನಗೌಡ, ಕಪ್ಪುಗಲ್ಲು ಪ್ರಭುದೇವ, ಪಿ.ಶ್ರೀನಿವಾಸಲು, ರಮಣಪ್ಪ ಭಜಂತ್ರಿ ಹಾಗೂ ಕಲಾವಿದರು, ಕಲಾಭಿಮಾನಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

## ದೇವರ ದಾಸಿಮಯ್ಯ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಸಮೀಪದ ಕೊಡೇಕಲ್ ಗ್ರಾಮದ ಶ್ರೀ ಬಸವ ಜ್ಯೋತಿ ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಬಸವ ಪ್ರಭು ಪದವಿ ಮಹಾವಿದ್ಯಾಲಯದಲ್ಲಿ ಸೋಮವಾರ 11ನೇ ಶತಮಾನದ ಆದ್ಯ ವಚನಕಾರ ಹಾಗೂ ನೇಕಾರ ಸಮುದಾಯದ ಆರಾಧ್ಯ ಪುರುಷರಾದ ದೇವರ ದಾಸಿಮಯ್ಯನವರ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ದಾಸಿಮಯ್ಯನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಅವರ ಆದರ್ಶಗಳನ್ನು ಸ್ಮರಿಸಲಾಯಿತು.

ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ಶಶಿಕುಮಾರ ಜಾದವ ಮಾತನಾಡಿ, "ದಾಸಿಮಯ್ಯನವರು 'ರಾಮನಾಥ' ಅಂಕಿತನಾಮದಲ್ಲಿ ವಚನಗಳನ್ನು ರಚಿಸಿ, ಸಮಾನತೆ ಮತ್ತು ಕಾಯಕದ ಮಹತ್ವವನ್ನು ಸಾರಿದ ಮಹಾನ್ ಚಿಂತಕರು. ಬಸವಣ್ಣನವರಿಗಿಂತ ಮುಂಚೆಯೇ ವಚನ ಸಾಹಿತ್ಯಕ್ಕೆ ಅಡಿಪಾಯ ಹಾಕಿದ ಪ್ರಮುಖ ಆದ್ಯ ವಚನಕಾರರಲ್ಲಿ ಇವರಿಗೆ ವಿಶೇಷ ಸ್ಥಾನವಿದೆ," ಎಂದು ಹೇಳಿದರು.

ಜೆ.ಟಿ.ಒ ಸಂತೋಷ ಕೆಂಡದ ಮಾತನಾಡಿ, "ನಮ್ಮ ಭಾಗದ ಹತ್ತಿರದ ಮುದನೂರು ಗ್ರಾಮದವರಾದ ದೇವರ ದಾಸಿಮಯ್ಯನವರು ಶ್ರೇಷ್ಠ ವಚನಕಾರರಾಗಿದ್ದು, ಅವರ ಜೀವನ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ," ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಸೇರಿ ಪೂಜೆ ಸಲ್ಲಿಸಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದರು.

# ಅಡ್ಡಿ ಅತಂಕಗಳ ನಡುವೆ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷೆಯಾಗಿ ಮಂಜುಳ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಕಳೆದ ಮೂರು ದಶಕಗಳಿಗೂ ಹೆಚ್ಚು ಕಾಲ ಪಕ್ಷದಲ್ಲಿ ಶ್ರಮಿಸುತ್ತಾ ಬಂದಿರುವ ನೇಕಾರ ಸಮುದಾಯದ ಎಂ.ಎಸ್.ಮಂಜುಳ ಮತ್ತೆ ಬಳ್ಳಾರಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯನ್ನಾಗಿ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ನ ಅಧ್ಯಕ್ಷೆ ಸೌಮ್ಯಾರೆಡ್ಡಿ ನೇಮಕ ಮಾಡಿದ್ದಾರೆ.

ತಮಗೆ ನೀಡಿರುವ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುತ್ತಾ, ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕೆಪಿಸಿಸಿ, ಹಾಗೂ ಪಕ್ಷದ ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ಮತ್ತು ಸ್ಥಳೀಯ ನಾಯಕರ ಸಹಯೋಗದಲ್ಲಿ ಮಹಿಳೆಯರನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ದೇಶದ ಆಡಳಿತದ ಮುಖ್ಯವಾಹಿನಿಗೆ ತರುವ ಹಾಗೂ ಮಹಿಳಾ ಕಾಂಗ್ರೆಸ್ ಸಂಘಟನೆಯನ್ನು ಬಲಪಡಿಸುವ ಮೂಲಕ ಪಕ್ಷದ ಬಲವರ್ಧನೆಗಾಗಿ ಕಾರ್ಯೋನ್ಮುಖರಾಗಬೇಕೆಂದು ಸೌಮ್ಯರೆಡ್ಡಿ ಸೂಚಿಸಿದ್ದಾರೆ.

ಅಡ್ಡಿ ಆತಂಕ:

ಒಂದು ಬಾರಿ ಅಧ್ಯಕ್ಷೆಯಾಗಿದ್ದ ಮಂಜುಳ ಅವರನ್ನು ಈ ಬಾರಿ ಬದಲು ಮಾಡಿ, ಮಾಜಿ ಮೇಯರ್ ರಾಜೇಶ್ವರಿ, ಪಾಲಿಕೆ ಸದಸ್ಯೆ, ಸ್ಥಾಯಿ ಸಮಿತಿ ಅಧ್ಯಕ್ಷೆ ಕವಿತಾ ಹೊನ್ನಪ್ಪ ಮತ್ತು ಈ ಹಿಂದೆ ಅಧ್ಯಕ್ಷೆಯಾಗಿದ್ದ ಪದ್ಮಾ ಇವರಲ್ಲಿ ಒಬ್ಬರನ್ನು ಮಾಡಲು ಪ್ರಭಾವಿ ಮುಖಂಡರೊಬ್ಬರು ಭಾರಿ ಪ್ರಯತ್ನ ಮಾಡಿದ್ದರು. ಅದರಲ್ಲೂ ಕವಿತಾ ಹೊನ್ನಪ್ಪ ಅವರ ಹೆಸರು ಮುಂಚೂಣಿಯಲ್ಲಿತ್ತು.ಆದರೆ ತಾನು ಪಕ್ಷದ ಬೆಳವಣಿಗೆ ಮಾಡಿರುವ ಕೆಲಸವನ್ನು ತಿಳಿಸಿ.

ಛಲಬಿಡದೆ ತನ್ನ ಸ್ಥಾನವನ್ನು ಮತ್ತೊಮ್ಮೆ ಭದ್ರಪಡೊಸಿಕೊಂಡಿದ್ದಾರೆ ಮಂಜುಳಾ ಅವರು. ನನಗನ ಮೇಲೆ ಅನೇಕ ಪಿತೂರಿಗಳು ನಡೆದವು. ಕೆಲವರು ನನ್ನು ವಿರುದ್ಧ ಮಾಡಿದ ತಂತ್ರ ಫಲಿಸಲಿಲ್ಲ. ಪಕ್ಷದ ನಾಯಕರಿಗೆ ನನ್ನ ಪಕ್ಷ ನಿಷ್ಟೆ ಗೊತ್ತಿದೆ.

ಅದಕ್ಕಾಗಿ ಮುಂದುವರೆಸಿದ್ದಾರೆ. ಪಕ್ಷವೇ ನನ್ನ ಉಸಿರು. ನಮಗೂ ಸರ್ಕಾರದಲ್ಲಿ ನಾಮ ನಿರ್ದೇಶನದ ಹುದ್ದೆ ನೀಡಬೇಕಿದೆ ಎಂದು ತಿಳಿಸಿದ್ದಾರೆ.

ಪಕ್ಷದ ಹಿರಿಯರಾದ ನಾಸೀರ್ ಹುಸೇನ್, ನಾಗೇಂದ್ರ, ಹುಮಾಯೂನ್ ಖಾನ್ ಮೊದ ಲಾದವರ ಸಹಕಾರವನ್ನು ಸ್ಮರಿಸಿದ್ದಾರೆ.

# ತುಂಗಭದ್ರೇಯ ಹೂಳನ್ನು ತೆಗೆಯುವುದು ಎಂದು?

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ತುಂಗಭದ್ರ ಜಲಾಶಯದಲ್ಲಿನ ಹೂಳನ್ನು ತೆಗೆಯುವ ಕಾರ್ಯ ಆಗಬೇಕು ಎಂದು ತುಂಗಭದ್ರ ರೈತ ಸಂಘ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ. ಸಂಘದ ಅಧ್ಯಕ್ಷ ದರೂರು ಪುರುಷೋತ್ತಮಗೌಡ. ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಅವರು. ತುಂಗಭದ್ರ ಜಲಾಶಯದಿಂದ ನೀರನ್ನು ಪಡೆಯುವ ಕಾರ್ಖಾನೆಗಳು, ಬೆಳೆಗೆ ನೀರು ಪಡೆಯುವ ರೈತರನ್ನು ತೊಡಗಿಸಿಕೊಂಡು ಹೂಳನ್ನು ತೆಗೆಯಲು ಸರ್ಕಾರ ಮುಂದಾಗಬೇಕು ಎಂದರು.

ನಮ್ಮ ಜಲಾಶಯದಿಂದ ಹರಿದ ನೀರನ್ನು ಆಂದ್ರಪ್ರದೇಶ ಸರ್ಕಾರ ಶ್ರೀಶೈಲಂ ಜಲಾಶಯದಲ್ಲಿ ಸಂಗ್ರಹಿಸಿ 400ಕಿ.ಲೋ.ಮೀಟರ್ ದೂರದವರಗೆ ನೀರು ತರುತ್ತಿದೆ. ಆದರೆ ನಮ್ಮ ಕರ್ನಾಟಕ ಸರ್ಕಾರ ಹೂಳನ್ನು ತೆಗೆಯಲು ಆಸಕ್ತಿ ತೋರುತ್ತಿಲ್ಲ. ನೀರಾವರಿ ತಜ್ಞರ ಸಭೆ ಕರೆಯಿರಿ. ಹೂಳುನ್ನು ತೆಗೆಯುವುದು ಹೇಗೆ ಎಂದು ಹೇಳಲಿದೆ. ಈ ಬಗ್ಗೆ ಸ್ಪಷ್ಟ ಜ್ಞಾನ ಇಲ್ಲದ ಶಾಸಕರು ಹೂಳು ತೆಗೆಯಲು ಆಗಲ್ಲ ಎಂದು ಹೇಳಿ ಕೈ ತೊಳೆದುಕೊಳ್ಳುತ್ತಿದ್ದಾರೆಂದು ಆರೋಪಿಸಿದರು.

ನೀರಾವರಿ ತಜ್ಞರ ಜೊತೆ ಸೇರಿ ಸಾರ್ವಜನಿಕರ ದೇಣಿಗೆಯಿಂದ ಸಂಗ್ರಹಿಸಿದ್ದ 30 ಲಕ್ಷರೂ ವೆಚ್ಚದಲ್ಲಿ 2017 ರಲ್ಲಿ ಹೂಳು ತೆಗೆದಂತೆ. ಮತ್ತೆ ಬರುವ ಮೇ ತಿಂಗಳಲ್ಲಿ ಹೂಳಿನ ಜಾತ್ರೆಯನ್ನು ಮೂರು ರಾಜ್ಯಗಳ ರೈತರನ್ನು ತೊಡಗೊಸಿಕೊಂಡು ನಡೆಸಲು ಉದ್ದೇಶಿಸಿದೆ. ಈ ಬಗ್ಗೆ ಪ್ರತಿ ಗ್ರಾಮಗಳ ರೈತರ ಜೊತೆ ಚರ್ಚಿಸಿ ಸಿದ್ದತೆ ಮಾಡಲಿದೆಂದು ಹೇಳಿದರು. ಜಲಾಶಯದಿಂದ ಹೂಳನ್ನು ರೈತರು ತಮ್ಮ ಜಮೀನುಗಳಿಗೆ ತೆ-ಗೆದುಕೊಂಡು ಹೋಗಬಹುದು. ತುಂಗಭದ್ರ ಮಂಡಳಿಯಿಂದ ಇದಕ್ಕೆ ಅನುಮತಿ ಕೋರಲಿದೆ. ಅವರು ನೀಡದಿದ್ದರೆ. ಕೇಂದ್ರ ನೀರಾವರಿ ಆಯೋಗದಿಂದ ಪಡೆಯಲಿದೆಂದರು.

ನವಿಲೆ ಸಮಾನಾಂತರ ಜಲಾಶಯದ ಬಗ್ಗೆ ಹೇಳುತ್ತ ಎರೆಡು ದಶಕ ಕಳೆಯಲಾಯ್ತು. ಈ ವರೆಗೆ ಏನೂ ಆಗಿಲ್ಲ. ಬರೀ ಕಣ್ಣೀರು ಒರೆಸುವ ತಂತ್ರವಾಗಿದೆ ಇದೆ.

ತುಂಗಭದ್ರ ಗೇಟುಗಳನ್ನು ಬದಲು ಮಾಡುತ್ತಿದೆ. ಇದರ ಜೊತೆಗೆ ಹಳೆಯದಾದ ಗೇಟುಗಳ ಚೈನ್ ಗಳನ್ನು ಸಹ ಬದಲು ಮಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಮುಖಂಡರುಗಳಾದ ಶ್ರೀಧರಗಡ್ಡೆ ವೀರನಗೌಡ, ಜಾಲಿಹಾಳ್ ಶ್ರೀಧರ್, ಮಲ್ಲಾರೆಡ್ಡಿ, ವೀರಭದ್ರ ನಾಯಕ, ದರೂರು ವೀರೇಶ ಮೊದಲಾದವರು ಇದ್ದರು.

# ಪುಸ್ತಕ ಬಿಡುಗಡೆ, ಸಮಾರಂಭ ಕವಿಗೂಷ್ಠಿ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ನಗರದ ಸಂಡೂರು ರಸ್ತೆಯಲ್ಲಿರುವ ಸರ್ಕಾರಿ ನೌಕರ ಭವನದಲ್ಲಿ ಅಂತರಾಷ್ಟೀಯ ಮಹಿಳಾ ದಿನಾಚರಣೆ ಹಾಗೂ ನೂರ್ ಜಹಾನ್ ರವರ ಅರವತ್ತನೆಯ ಜನ್ಮ ದಿನಾಚರಣೆಯ ಅಂಗವಾಗಿ ಆಶಾ ಪ್ರಕಾಶನ ಸಿದ್ದಲಿಂಗಪ್ಪ ಚೌಕಿ ಇವರ ವತಿಯಿಂದ ಪುಸ್ತಕ ಬಿಡುಗಡೆ ಹಾಗೂ ಕವಿಗೋಷ್ಠಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಪದ್ಮಶ್ರೀ ಮಂಜಮ್ಮ ಜೋಗತಿಯವರು ಮಾಡಿದರು.ಪುಸ್ತಕ ಬಿಡುಗಡೆಯನ್ನು ಬಳ್ಳಾರಿ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಡಾ,ನಿಷ್ಠಿ ರುದ್ರಪ್ಪನವರು ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಿದರು.ಕಲ್ಪನ ಕಾದಂಬರಿಯ ಪರಿಚಯವನ್ನು ಗಂಗಾವತಿಯ ಸಾಹಿತಿ ಡಾ,ಮುಂತಾಜ್ ಬೇಗಂರವರು ಮಾಡಿದರು. ಅನುಬಂಧ ಕಥಾಸಂಕಲನದ ಪರಿಚಯವನ್ನು ಹಗರಿಬೊಮ್ಮನ ಹಳ್ಳಿಯ ಸಾಹಿತಿ ಸುಧಾ ಚಿದಾನಂದ ಗೌಡ ರವರು ಮಾಡಿದರು. ಕಾರ್ಯಕ್ರಮದ ಅದ್ಯಕ್ಷತೆಯನ್ನು ಬಳ್ಳಾರಿಯ ಹಿರಿಯ ಸಾಹಿತಿ ಎನ್, ಡಿ, ವೆಂಕಮ್ಮರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಚಂದ್ರಶೇಖರಯ್ಯ ರೋಣದ ಮಠ, ಕೂಡ್ಲಿಗಿಯ ಸಾಹಿತಿ ಶೆಕ್ಷಾವಲಿ ಮಣಿಗಾರ್, ಯತ್ನಳ್ಳಿ ಮಲ್ಲಯ್ಯ, ಚಲನಚಿತ್ರ ನಿರ್ದೇಶಕ ಜೋಗಿ ತಾಯಪ್ಪ, ಮರಿಯಮ್ಮನಹಳ್ಳಿಯ ರಂಗಕಲಾವಿದೆ ನಾಗರತ್ನಮ್ಮ, ಪೀರ್ ಬಾಷಾ ಮತ್ತಿತರರು ಆಗಮಿಸಿದ್ದರು.

ನಿರೂಪಣೆ ಎನ್, ನಾಗರಾಜ್ ಮಾಡಿದರು,ಸ್ವಾಗತ ಎರ್ರಿಸ್ವಾಮಿ ಮಾಡಿದರು. ಪ್ರಸ್ತಾವಿಕವಾಗಿ ನೂರ್ ಜಹಾನ್ ಮಾತನಾಡಿದರು. ಪ್ರಾರ್ಥನೆ ವಾಲ್ಯಾನಾಯಕ್ ಮಾಡಿದರು.ವಂದನಾರ್ಪಣೆ ಉಮಾಮಹೇಶ್ ಮಾಡಿದರು.

ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಸೌಭಾಗ್ಯಲಕ್ಷ್ಮಿ ವಹಿಸಿದ್ದರು.ಅತಿಥಿಗಳಾಗಿ ವೆಂಕಟೇಶ್ ಬಡಿಗೇರ್, ಹಾಲ್ಯಾನಾಯಕ್, ಕೆ, ಉದೇದಪ್ಪ ಆಗಮಿಸಿದ್ದರು. ಈ ವೇಳೆ ಸುಮಾರು ಇಪ್ಪತ್ತು ಜನ ಕವಿಗಳು ತಮ್ಮ ಕವನ ವಾಚನ ಮಾಡಿದರು ಹಾಗೂ ಸಾಹಿತ್ಯಪ್ರಿಯರು ಇನ್ನಿತರರು ಉಪಸ್ಥಿತರಿದ್ದರು,

# ನಂದಿ ಕೂಗು ಅನ್ನದಾತನದ್ದು, ರೈತರಿಂದಲೇ ಮಹಾ ಚಳವಳಿ: ಶಿವಕುಮಾರ ಸ್ವಾಮೀಜಿ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ನಂದಿಯ ಕೂಗು ಅನ್ನದಾತನದ್ದು. ಈ ಮಹಾ ಚಳುವಳಿ ರೈತರಿಂದಲೇ ಸಾಧ್ಯ, ಇತರರಿಂದ ಸಾಧ್ಯವಿಲ್ಲ," ಎಂದು ಕರಭಂಟನಾಳದ ಶ್ರೀ ಶಿವಕುಮಾರ ಸ್ವಾಮೀಜಿಗಳು ಹೇಳಿದರು.

ಶುಕ್ರವಾರ ಯಡೂರು ಶ್ರೀ ವೀರಭದ್ರೇಶ್ವರ ದೇವಸ್ಥಾನದಿಂದ ಶ್ರೀಶೈಲ ಮಲ್ಲಯ್ಯನ ಸನ್ನಿಧಿವರೆಗೆ 10 ದಿನಗಳ ಕಾಲ ನಡೆದ ನಂದಿ ಸೇನೆ ರಥಯಾತ್ರೆ ಪುನಃ ಆಗಮಿಸಿದ ಹಿನ್ನೆಲೆಯಲ್ಲಿ ಖೋಜಾಪುರ ಗ್ರಾಮದಲ್ಲಿ ಜೋಡಿ ನಂದಿಗಳ ಪ್ರತಿಷ್ಠಾಪನೆ ನಡೆಯಿತು. ಈ ಸಂದರ್ಭದಲ್ಲಿ ಅವರು ಮಾತನಾಡಿದರು.

ಈ ಚಳುವಳಿಗೆ ದೇಶದ ಮಟ್ಟದಲ್ಲಿ ಬೆಂಬಲ ದೊರಕಿದ್ದು, ಉಪರಾಷ್ಟ್ರಪತಿಗಳಿಂದ ಚಾಲನೆ ಸಿಕ್ಕಿರುವುದು ವಿಶೇಷ ಎಂದು ಹೇಳಿದರು. ಬಸವಣ್ಣರು "ನಂದಿಯ ಪಾದದಲ್ಲಿ ಅಮೃತವಿದೆ" ಎಂದು ಹೇಳಿರುವುದನ್ನು ಉಲ್ಲೇಖಿಸಿ, ನಂದಿಯ ಆಧ್ಯಾತ್ಮಿಕ ಹಾಗೂ ಕೃಷಿ ಸಂಸ್ಕೃತಿಯ ಮಹತ್ವವನ್ನು ವಿವರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಸವರಾಜಸ್ವಾಮಿ ಸ್ಥಾವರಮಠ ಅವರು, ಖೋಜಾಪುರದಲ್ಲಿ ನಂದಿ ಸ್ಥಾಪನೆಯಾಗಿರುವುದು ಗ್ರಾಮಸ್ಥರ ಸೌಭಾಗ್ಯ. ಇದರಿಂದ ಆತ್ಮಶಕ್ತಿ ಹೆಚ್ಚುತ್ತದೆ ಎಂದು ಹೇಳಿದರು.

ಯುಗಾದಿ ಹಬ್ಬದ ಅಂಗವಾಗಿ ಭಕ್ತರಿಗೆ ಬೇವು-ಬೆಲ್ಲ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಮರಿಹುಚ್ಚೇಶ್ವರ ಮಹಾಸ್ವಾಮೀಜಿಗಳು ಆಶೀರ್ವಾದ ನೀಡಿ, ನಂದಿ ಪ್ರತಿಷ್ಠಾಪನೆ ಆಧ್ಯಾತ್ಮಿಕ ಮಹತ್ವ ಹೊಂದಿದ್ದು, ಖೋಜಾಪುರವನ್ನು ಪುಣ್ಯಸ್ಥಳವನ್ನಾಗಿ ಮಾಡಲಿದೆ ಎಂದು ಹೇಳಿದರು.

ಶಿವಕುಮಾರ ಬಂಡೊಳ್ಳಿ,ಗುರು ಹುಲಕಲ್ ಮತ್ತು ಬಸವರಾಜ ಬಿರಾದಾರ ಮಾತನಾಡಿ, ನಂದಿ ಶಕ್ತಿ ಉಳಿಸುವುದು ಮತ್ತು ಭೂಮಿ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಬಂಡೆಪ್ಪನಳ್ಳಿ ಶ್ರೀಗಳು ,ಸ್ಥಾವರಾಮಠ,ಸಂಗಯ್ಯಸ್ವಾಮಿ ಬಂಟನೂರ,ಬಸಯ್ಯಸ್ವಾಮಿ ನಾಗನೂರ,ದೇವರಡ್ಡಿ ಮುತ್ತ್ಯಾ ಸೇರಿದಂತೆ ಹುಣಸಗಿ ಪಟ್ಟಣದ ಮುಖಂಡರು ಇದ್ದರು

ದೇವಿಂದ್ರ ಬಡಿಗೇರ ನಿರೂಪಿಸಿದರು, ರವಿಕುಮಾರ ಬಂಟನೂರ ವಂದಿಸಿದರು.

# ಅನಾಮಧೇಯ ಶವ; ವಾರಸುದಾರರ ಪತ್ತೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ನಗರದ ಉಕ್ಕಡಕೇರಿ ಬಾವಿಕಟ್ಟಿ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ಸುಮಾರು 35 ವಯಸ್ಸಿನ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದೆ. ಮೃತ ವ್ಯಕ್ತಿಯು ಸುಮಾರು ಎತ್ತರ 5.8, ಸಾಧಾರಣ ಮೈಕಟ್ಟು, ತಲೆಯಲ್ಲಿ 2–3 ಇಂಚು ಉದ್ದದ ಕಪ್ಪು ಗುಂಗುರು ಕೂದಲು, ಚಿಗುರು ಗಡ್ಡ–ಮೀಸೆ ಬಿಟ್ಟಿರುತ್ತಾನೆ. ಬಿಳಿ ಬಣ್ಣದ ಕಟ್ ಬನಿಯನ್ ಮತ್ತು ನೀಲಿ ಹಾಗೂ ಕಪ್ಪು ಮಿಶ್ರಿತ ಚಡ್ಡಿ, ಕಪ್ಪು ಬಣ್ಣದ ಫಾರ್ಮಲ್ ಪ್ಯಾಂಟ್ ಧರಿಸಿದ್ದು, ಎಡಗೈಯಲ್ಲಿ ಇಂಗ್ಲೀಷ್‌ನಲ್ಲಿ ರಾಜು ಎಂದು ಹಾಗೂ ಬಲಗೈಯಲ್ಲಿ ಅಸ್ಪಷ್ಟವಾಗಿ ಕಾಣುವ ಅಚ್ಚೆ ಗುರುತು ಇದೆ.

ಈ ಬಗ್ಗೆ ಪಿ.ಐ ಪಟ್ಟಣ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08394224033, 9480805745, ಡಿ.ಎಸ್.ಪಿ. ಹೊಸಪೇಟೆ ದೂ.ಸಂ: 08394224204,9480805720, ಎಸ್.ಪಿ. ವಿಜಯನಗರ ದೂ.ಸಂ: 9480805700 ಗೆ ಸಂಪರ್ಕಿಸಬಹುದು ಎಂದು ಪಟ್ಟಣ ಠಾಣೆ ಅಸಿಸ್ಟೆಂಟ್ ಸಬ್–ಇನ್ಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇವರ ದಾಸಿಮಯ್ಯ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಪುರಸಭೆ ಕಾರ್ಯಲಯದಲ್ಲಿ ಸೋಮವಾರ ದೇವರ ದಾಸಿಮಯ್ಯ ಜಯಂತಿ ಆಚರಣೆ ಮಾಡಲಾಯಿತು.

ದೇವರ ದಾಸಿಮಯ್ಯನವರ ಭಾವ ಚಿತ್ರಕ್ಕೆ ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಬೋಗಾರ ಪುಷ್ಪಾರ್ಚನೆ ಮಾಡಿದರು. ಪುರಸಭೆ ಸಿಬ್ಬಂದಿ ಸಮೂದಾಯ ಸಂಘಟಕರು ಚೆನ್ನಮ್ಮ ದಳವಾಯಿ ಮಠ ಪೂಜೆ ಸಲ್ಲಿಸಿದರು.

ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ, ಸಿಬ್ಬಂದಿಗಳಾದ ಅಂತೋಣಿ, ನಿಸ್ಸಾರ ಅಹ್ಮದ, ಬಸವರಾಜ ಕೊಟ್ಟೂರು, ಜಿಲಾನಿ ಪಾಷ, ಬಾಬಾ, ಸಂಪತ್ತಕುಮಾರ, ಮುಖಂಡರು ಧರ್ಮನ ಗೌಡ, ಶಂಕ್ರಪ್ಪ ಜೀಡಿ, ವೆಂಕಟೇಶ ಶೆಟ್ಟಿ, ವೆಂಕಣ್ಣ ದೇಶಪಾಂಡೆ ಸೇರದಂತೆ ಇತರರಿದ್ದರು.

# ಪವಿತ್ರ ರಂಜಾನ್ ಹಬ್ಬ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣ ಸೇರಿದಂತೆ ವಿವಿಧ ಗ್ರಾಮೀಣ ಭಾಗಗಳಲ್ಲಿ ಮುಸ್ಲಿಂ ಸಮುದಾಯ ಬಾಂಧವರಿಂದ ಪವಿತ್ರ ರಂಜಾನ್ ಹಬ್ಬ ಆಚರಣೆ ಶನಿವಾರ ಮಾಡಿದರು.

ಶುಕ್ರವಾರ ಸಂಜೆ ಚಂದ್ರನ ದರ್ಶನದ ಬಳಿಕ ಶನಿವಾರ ರಂಜಾನ್ ಆಚರಣೆ ಮಾಡಿದರು. ಪಟ್ಟಣದ ಎರಡು ಈದ್ಗಾ ಹಾಗೂ ವಿವಿಧ ಬಡಾವಣೆಯ ಮಸೀದಿಗಳಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಮಾಡಿದರು. ಈದ್ಗ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಮೌಲಾನ್ ಶಾಮಿದ್ ಖಾಜಿ ಹಾಗೂ ಮೌಲಾನ್ ಜಮೀರ್ ಅಹಮದ್ ಕಾಜೀ ಕುರಾನ್ ಪಠಣ ಮಾಡಿಸಿ, ನಮಾಜು ಮಾಡಿಸಿದರು. ರೋಜಗಾರರು ಕಳೆದ ಒಂದು ತಿಂಗಳಿಂದ ಉಪವಾಸ ವೃತ ಕೈಗೊಂಡು, ತಮ್ಮ ತಮ್ಮ ಬಡಾವಣೆಯ ಮಸೀದಿಗಳಲ್ಲಿ ದಿನಕ್ಕೆ ಐದು ಹೊತ್ತು ನಮಾಜಿ ಸಲ್ಲಿಸಿ, ಉಪವಾಸ ವೃತದವರಿಗೆ ರೋಜಾ ಬಿಡಿಸಲು ದುಡಿದ ಹಣದಲ್ಲಿ ಹಣ್ಣು ಹಂಪಲು, ಅನ್ನ ಸಂತರ್ಪಣೆ, ನೆರವೇರಿಸಿದರು. ರಂಜಾನ್ ದಿನದಂದು ಪವಿತ್ರತೆಯಿಂದ ಈದ್ಗಗಳಿಗೆ ಆಗಮಿಸಿ ಸರ್ವ ಮುಸ್ಲಿಂ ಬಾಂಧವರು ದೇವರಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಇಷ್ಟಾರ್ಥ ಸಿದ್ದಿಗಾಗಿ ಭಗವಂತನಲ್ಲಿ ಮೊರೆ ಹೋದರು. ಹಬ್ಬದ ನಿಮಿತ್ಯ ಪಟ್ಟಣದ ಸಾರ್ವಜನಿಕರೊಂದಿಗೆ ಮುಸ್ಲಿಂರು ಪರಸ್ಪರ ಮಿಲನದ ಮೂಲಕ ರಂಜಾನ್ ಶುಭಾಶಯ ಹಂಚಿಕೊಂಡರು. ಬಡವರಿಗಾಗಿ ವಿವಿಧ ದಾನ, ಧರ್ಮದ ವಿವಿಧ ಧಾರ್ಮಿಕಾಚರಣೆ ಮಾಡಿದರು. ಕೆಲವು ಪುರುಷರು ಮಸೀದಿಯಲ್ಲಿ, ಮಹಿಳೆಯರು ಮತ್ತು ಮಕ್ಕಳು ಮನೆಯಲ್ಲೇ ಪ್ರಾರ್ಥನೆ ಮಾಡಿದರು.

ಮುದುಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರ್ ಗೌಡ ಪಾಟೀಲ್, ತಮ್ಮಣ್ಣ ಗುತ್ತೇದಾರ್, ಪುರಸಭೆ ಸದಸ್ಯ ಎಸ್ ಆರ್ ರಸೂಲಸಾಬ್, ರಜ್ಜಬಲಿ ಟಿಂಗ್ರಿ, ಸೈಯದ್ ಸಾಬ್ ಹಳೇಪೇಟೆ, ಗಯಸುದ್ದೀನ್, ಸಾಧಿಕ್ ಅಲಿ, ಖಾಲಿದ್ ಪಾನ್ ಶಾಪ್, ಮಸೂಮ್ ಷರೀಫ್, ಅಮೀರಬೇಗ್ ಉಸ್ತಾದ, ಗಫರ್ ಖಾನ್, ಕರವೇ ತಸ್ಲೀಮ್, ಮೆಹಬೂಬ್ ಕಡ್ಡಿಪುಡಿ, ಜಿಲಾನಿ ಪಾಷಾ, ಮನನ ಉಸ್ತಾದ, ನ್ಯಾಮತ ಖಾದ್ರಿ, ವಾಹಿದ್ ಕು-ರೇಶಿ, ನಿಸಾರ್ ಅಹಮದ್, ಕೃಷ್ಣ ಚಲವಾದಿ, ಸತೀಶ ಭೋವಿ, ಹುಸೇನ್ ಬಾಷಾ ಮುಜಾವರ್ ಕೈರವಾಡಗಿ, ದಾವಲ್ ಮಲಿಕ್ ಚಿಮಟಿ, ರಾಯಲ್ ರೆಹಮಾನಸಾಬ್, ಭಾರತ್ ರಹಿಮಾನಸಾಬ್, ಕಲಿಲ್, ಮೆಹಬೂಬ್ ಕೊಳ್ಳಿ, ರೆಡ್ ರೋಸ್ ರಹಿಮಾನ್ ಸಾಬ, ಮೌಲಾನಾ ಹಾಸೀಮ್, ಮೌಲಾನ ಮಹೆಬೂಬ್ ಅಲಿ, ಮೌಲಾನಾ ರಫೀ, ಮೌಲಾನಾ ಜಾಫರ್, ಮೌಲಾನಾ ವಸೀಮ್, ಎಸ್ ಎ ನಯೀಮ್ ಜುನೈದಿ, ಸೈಯದ್ ಅಬೀದ್ ಹುಸೇನಿ, ಮಹೆಬೂಬ್ ಭಾಗವಾನ, ಬುಡ್ನೆ ಸಾಬ್, ದಾವುದ್ ವಕೀಲ, ಜಾವೀದ್, ಸಾಬು ಹುಸೇನ್, ಜಮಾಲಿ ಸಾಬ್, ಅನೀಸ್ ಉಸ್ತಾದ್, ರಾಜ ಖುರೇಷಿ, ಹುಸೇನ್ ಅಲಿ, ಎಂ ಡಿ ರಫಿ ಖಾಜಿ, ಮಹೆಬೂಬ್ ಬಾರಿಗಿಡ, ಖಯೂಮ್ ಶಾ, ರಹೀಮ್ ಶಾ, ಮೌಹಿನುದ್ದೀನ್ ಭಂಡಾರಿ, ಪಾಷಾ ಕಡ್ಡಿಪುಡಿ, ಖದಿರ್ ಪಾನ್ ವಾಲೆ, ಮುನ್ನಾ, ರಫಿ ಭಾಗವಾನ್, ಖಾಸಿಂ ಎಲ್ಲಿಪಕ್, ನಿಸಾರ್ ಅಲಿ, ಜಿಲಾನಿ ಪಾಷ, ಮಾಬುಪಾಷಾ, ಫಾರೂಕ್ ಸಾಹೇಬ್, ರಸೂಲ್ ಎಂಟುಬಂಡಿ, ರಹೆಮಾನ್ ನದಾಫ್, ಖಾಸಿಂ ಡೋಯಿ, ಹಸನಲಿ ಷಾ ಬಂಡಾರಿ, ಮಹೇಬೂಬ್ ಹುಸೇನ್ ಅಲಂ ಬ್ರದರ್ ಸೇರಿದಂತೆ ಇತರರಿದ್ದರು.

# 8 ನೇ ವರ್ಷದ ಗುಡದೂರು ದೊಡ್ಡ ಬಸವಾರ್ಯರ ಪುರಾಣ ಪ್ರಾರಂಭ

ಮಲ್ಲಮ್ಮ ನುಡಿ ವಾರ್ತೆ ಕುರುಗೋಡು:



ಪಟ್ಟಣದ ಸಮೀಪದ ಮುಷ್ಠಗಟ್ಟೆ ರಸ್ತೆಯಲ್ಲಿರುವ ಐತಿಹಾಸಿಕ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಮಹಾಮಹಿಮ ಶ್ರೀ ಗುಡದೂರ ದೊಡ್ಡಬಸವಾರ್ಯರ ಪುರಾಣ ಪ್ರವಚನ ಕಾರ್ಯಕ್ರಮ ಇಂದಿನಿಂದ ಪ್ರಾರಂಭವಾಗುತ್ತದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ವತಿಯಿಂದ ತಿಳಿಸಿದ್ದಾರೆ.

ಹತ್ತು ದಿನಗಳ ಕಾಲ ನಡೆಯುವ ಪುರಾಣ ಕಾರ್ಯಕ್ರಮ.

ದಿ,23.03.2026ರಿಂದ ಪ್ರಾರಂಭವಾಗುವ ಪುರಾಣ ಇದೇ ಚೈತ್ರ ಶುದ್ಧ ಹುಣ್ಣಿಮೆಯಂದು ದಿ 02.03.2026ರಂದು ಸರ್ವ ಭಕ್ತರ ಸಮ್ಮುಖದಲ್ಲಿ ಮಂಗಲಗೊಳುವುದು ಪ್ರತಿ ವರ್ಷದಂತೆ ಈ ವರ್ಷವೂ ಆಗಮಿಸುವ ಭಕ್ತರಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ ಪ್ರತಿ ದಿನ ಮಠಾಧೀಶರು ಸಾನಿಧ್ಯ ಆಶೀರ್ವಚನ ನಡೆಯಲಿದ್ದು ಪುರಾಣ ಪ್ರವಚನ ಮೇಲು ಮಠದ ಶಡ್ಕಕ್ಷರಸ್ವಾಮಿ ಕುರುಗೋಡು , ಪುರಾಣ ಪಠಣ ಎಸ್ ಪ್ರಭುಲಿಂಗನಗೌಡ ಮುಷ್ಠಗಟ್ಟೆ, ತಬಲ ವಾದಕರು ಎಂ ಶೇಖರಯ್ಯ ಸ್ವಾಮಿ ಕುರುಗೋಡು ನಡೆಸಿಕೊಡಲಿದ್ದಾರೆ ಕಾರ್ಯಕ್ರಮಕ್ಕೆ ಸುತ್ತಮುತ್ತಲಿನ ಮುಷ್ಠಗಟ್ಟೆ ಕುರುಗೋಡು ಕಲ್ಲುಕಂಭ ಗೆಣಿಕೆಹಾಳು ಎಚ್ ವೀರಾಪುರ ಮಲ್ಲಿಕಾರ್ಜುನ ಸ್ವಾಮಿ ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೆಕೆಂದು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಎಸ್ ಭೀಮನಗೌಡ ತಿಳಿಸಿದರು.

# ಸಂಚಾಲಕ ಪದಾಧಿಕಾರಿಗಳ ಆಯ್ಕೆ



ಮಲ್ಲಮ್ಮ ನುಡಿವಾರ್ತೆ ಕುರುಗೋಡು:

ಇಲ್ಲಿಗೆ ಸಮೀಪದ ಬಾದನಹಟ್ಟಿ ಗ್ರಾಮದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ ಬಿ ಕೃಷ್ಣಪ್ಪ ಸ್ಥಾಪಿತ)ಕುರುಗೋಡು ತಾಲೂಕು ಸಂಚಾಲಕ ಶೇಖರ್ ಗುತ್ತಿಗನೂರ್ ಅವರ ಅಧ್ಯಕ್ಷತೆಯಲ್ಲಿ ಗ್ರಾಮ ಸಂಚಾಲಕ ಪದಾಧಿಕಾರಿಗಳ ಆಯ್ಕೆ ನಡೆಸಲಾಯಿತು. ನಂತರ ಮಾತನಾಡಿದ ಅವರು ಯುವಕರಿಗೆ ಸಂಘಟಿತವಾಗಿ ಬಲಿಷ್ಟವಾಗಿರಿ ಬಲಿಷ್ಠವಾಗಿಸಿರಿ ದಲಿತರ ಸಮಸ್ಯೆಗಳನ್ನು ಸಂಘಟಿತವಾಗಿ ಕಾನೂನಾತ್ಮಕವಾಗಿ ಬಗೆಹರಿಸಿಕೊಳ್ಳಿ ನಿಮ್ಮ ಬೆಂಬಲಕ್ಕೆ ನಮ್ಮ ಸಂಘಟನೆ ಯಾವಾಗಲೂ ಸಹಕಾರ ಇರುತ್ತದೆ. ಅಂಬೇಡ್ಕರ ಅವರ ಚಿಂತನೆಗಳನ್ನು ಮನೆ ಮನೆಗೆ ತಲುಪುವಂತೆ ತಿಳಿಸಿದರು.ನಂತರ ಪದಾಧಿಕಾರಿಗಳನ್ನು *ಗ್ರಾಮ ಸಂಚಾಲಕರನ್ನಾಗಿ ಹೆಚ್ ಹೊನ್ನೂರ ಖಜಾಂಚಿ ಓ ತಿಮ್ಮರಾಜ ಸಂಘಟನೆ ಸಂಚಾಲಕರು ಮಲ್ಲಿಕಾರ್ಜುನ್ ಮಹಾಂತೇಶ್ ಶೇಖಣ್ಣ ಸುದೀಪ್ ಮಣಿಕಂಠ ರಮೇಶ್ ಕಾರ್ಯಕಾರಿ ಸಮಿತಿ ಸದಸ್ಯರು ತಿಪ್ಪೇಸ್ವಾಮಿ ಶೇಖಣ್ಣ ಶಾಂತಕುಮಾರ್ ವಿಜಯ್ ಅವರನ್ನು ಆಯ್ಕೆ ಮಾಡಲಾಯಿತು ಈ ಸಂದರ್ಭದಲ್ಲಿ ತಾಲೂಕು ಸಂಘಟನಾ ಸಂಚಾಲಕರು ರುದ್ರಪ್ಪ ಕುರುಗೋಡು ಅಂಬರೀಶ್ ವದ್ದಟ್ಟಿ ಹುಲುಗಪ್ಪ ಮಲ್ಲಪ್ಪ ಹನುಮಂತಪ್ಪ ಬಾದನಹಟ್ಟಿ ಮೌಲಪ್ಪ ಗುತ್ತಿಗನೂರು ಲೋಕೇಶ್ ಬಸಾಪುರ ಉಪಸ್ಥಿತರು ಇದ್ದರು.

# ಕಾಳಿಕಾ ದೇವಿ ದೇವಸ್ಥಾನದಲ್ಲಿ ಯುಗಾದಿ ಪಂಚಮಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಐತಿಹಾಸಿಕ ಶ್ರೀ ಕಾಳಿಕಾ ದೇವಿ ದೇವಸ್ಥಾನದಲ್ಲಿ ವಿಶ್ವಕರ್ಮ ಸಮೂದಾಯ ಭಾಂದವರಿಂದ ಯುಗಾದಿ ಹಬ್ಬದ ಪಂಚಮಿ ದಿನ ಆಚರಣೆ ಸೋಮವಾರ ಮಾಡಲಾಯಿತು.

ವಿಶ್ವಕರ್ಮರ ಆರಾಧ್ಯ ದೇವಿ ಕಾಳಿಕಾ ದೇವಿ ದೇವಸ್ಥಾನದಲ್ಲಿ ವಿವಿಧ ದಾರ್ಮಿಕ ಪೂಜಾ ಕೈಂಕರ್ಯಗಳು ಜರುಗಿದವು. ದೇವಿಗೆ ವಿವಿಧ ಪುಷ್ಪಗಳಿಂದ ಅಲಂಕಾರ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ಪೂಜೆ ನೇರವೇರಿಸಲಾಯಿತು. ದೇವಿಗೆ ಭಕ್ತರಿಂದ ಉಡಿ ತುಂಬುವ ಕಾರ್ಯ ಜರುಗಿತು. ಭಕರು ತಮ್ಮ ಇಷ್ಟಾರ್ಥ ಸಿದ್ದಿಗಾಗಿ ದೇವಿಯಲ್ಲಿ ಪ್ರಾರ್ಥನೆ ಗೈದರು. ಅರ್ಚಕ ಕಾಳಪ್ಪ ಬಡಿಗೇರ ದೇವಸ್ಥಾನಕ್ಕೆ ಆಗಮಿಸಿದ ಭಕ್ತಧಿಗಳಿಗೆ ಪ್ರಸಾದ ರೂಪದಲ್ಲಿ ಬೇವು, ಬೆಲ್ಲ, ಗೋಧಿ ನಿಧಿ ನೀಡಿದರು.

ಮುಖಂಡರಾದ ಬಸವರಾಜ ವ್ಯಾಕರನಾಳ, ಚಂದ್ರಪ್ಪ ಕೆ.ವಿ, ಮೌನೇಶ ಕನ್ನಾಳ, ಶಿರಸಂಗಿಯಮ್ಮ, ಬಸವರಾಜ ಬಡಿಗೇರ, ಸುಮಿತ್ರ ಬಡಿಗೇರ, ದೇವರಾಜ, ಮೌನೇಶ ಬಡಿಗೇರ ಸೇರಿದಂತೆ ಸಮುದಾಯದ ಮಹಿಳೆಯರಿದ್ದರು.

# ಬಿಜೆಪಿಗೆ ಐತಿಹಾಸಿಕ ಗೆಲುವು: ಜೋಶಿ



• **ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ**

ಬಾಗಲಕೋಟೆಉಪಚುನಾವಣೆಯಲ್ಲಿ ಭಾರತೀಯಜನತಾಪಕ್ಷಕ್ಕೆಐತಿಹಾಸಿಕ ಗೆಲುವು ದೊರೆಯಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಸೋಮವಾರ ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ನಾಮಪತ್ರಸಲ್ಲಿಕೆಯ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಮೆರವಣಿಗೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವರು, ಹಿಂದೂ ವಿರೋಧಿಯಾಗಿರುವ ರಾಜ್ಯ ಸರ್ಕಾರವನ್ನು ಕಿತ್ತೊಗೆಯಲು ಮತದಾರರು ಸಿದ್ಧರಾಗಿದ್ದು ಖಂಡಿತವಾಗಿಯೂ ಬಿಜೆಪಿಯನ್ನು ಗೆಲ್ಲಿಸುತ್ತಾರೆ ಎಂದರು.

2023 ರ ಚುನಾವಣೆಯಲ್ಲಿ ಪಕ್ಷದ ನಾಯಕರಲ್ಲಿನ ಒಗ್ಗಟ್ಟಿನ ಕೊರತೆಯಿಂದಾಗಿಬಿಜೆಪಿಗೆಸೋಲಾಗಿದೆ. ಬಾಗಲಕೋಟೆ ಜಿಲ್ಲೆ ಬಿಜೆಪಿಯ ಗಂಡು ಮೆಟ್ಟಿನ ಸ್ಥಳ ಹೀಗಾಗಿ ನಾವು ಒಗ್ಗಟ್ಟಿನಿಂದ ಹೋದರೆ ಇಡೀ ಜಿಲ್ಲೆ ಬಿಜೆಪಿಯವಾಗಲಿದ್ದು, ಈಗ ನಡೆಯುವ ಉಪಚುನಾವಣೆಯಲ್ಲಿ ಬಾಗಲಕೋಟೆಯಲ್ಲಿ ಮಗ, ಡಾವಣಗೆರೆಯಲ್ಲಿ ಮೊಮ್ಮಗ ಮನೆಗೆ ಹೋಗುತ್ತಾರೆ ಎಂದ ಪ್ರಲ್ಹಾದ ಜೋಶಿ, ವೀರಣ್ಣ ಚರಂತಿಮಠ 25 ಸಾವಿರ ಮತಗಳ ಅಂತರದಿಂದ ಐತಿಹಾಸಿಕ ಗೆಲುವು ಪಡೆಯುತ್ತಾರೆ ಎಂದು ಹೇಳಿದರು.

ಬಿಜೆಪಿರಾಜ್ಯಾಧ್ಯಕ್ಷಬಿ.ವೈ.ವಿಜಯೇಂದ್ರ ಮಾತನಾಡಿ, ಬಾಗಲಕೋಟೆ ಹಾಗೂ ಡಾವಣಗೆರೆ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲಿದ್ದು, ಈ ಉಪಚುನಾವಣೆಯ ಫಲಿತಾಂಶ 2028 ರ ಸಾರ್ವತ್ರಿಕ ಚುನಾವಣೆಯ ದಿಕ್ಸೂಚಿಯಾಗಲಿದೆ ಎಂದು ಹೇಳಿದರು.

ಮಾಜಿ ಸಚಿವ ಮುರುಗೇಶ ನಿರಾಣಿ ಮಾತನಾಡಿ, 2023 ರ ಚುನಾವಣೆಯಲ್ಲಿ ನಾವುಗಳು ಒಗ್ಗಟ್ಟಿನ ಕೊರತೆಯಿಂದಾಗಿ ಸೋಲು ಅನುಭವಿಸಿದ್ದು, ಅಂತಹ ತಪ್ಪು ಈಗ ಮಾಡುವುದಿಲ್ಲ. ಎಲ್ಲ ನಾಯಕರು ಒಗ್ಗಟ್ಟಿನಿಂದ ಕೆಲಸ ಮಾಡಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ಜಿಲ್ಲೆಯಲ್ಲಿ ಬಿಜೆಪಿಯ ಶಕ್ತಿಯನ್ನು ತೋರಿಸುತ್ತೇವೆ ಎಂದರು.

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ, ಸಂಸದ ಪಿ.ಸಿ.ಗದ್ದಿಗೌಡರ, ಮಾಜಿ ಸಚಿವ, ಸಂಸದ ಗೋವಿಂದ ಕಾರಜೋಳ, ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಮಾಜಿ ಸಚಿವರಾದ ಶ್ರೀರಾಮಲು, ಎನ್. ಮಹೇಶ, ವೆಂಕಟರಾವ್ ನಾಡಗೌಡ, ಅರವಿಂದ ಲಿಂಬಾವಳಿ ಮಾತನಾಡಿ, ವೀರಣ್ಣ ಚರಂತಿಮಠ ಅಭಿವೃದ್ಧಿಯ ಹರಿಕಾರ, ಬಾಗಲಕೋಟೆ ಕ್ಷೇತ್ರದ ಅಭಿವೃದ್ಧಿಗಾಗಿ ಮತದಾರರು ಅವರನ್ನು ಬೆಂಬಲಿಸಿ ಗೆಲ್ಲಿಸಬೇಕು. ಆ ಮೂಲಕ ಬಿಜೆಪಿಗೆ ಶಕ್ತಿ ತುಂಬಬೇಕು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ, ಮಾಜಿ ಶಾಸಕರುಗಳಾದ ದೊಡ್ಡನಗೌಡ ಪಾಟೀಲ, ಎಸ್.ಕೆ.ಬೆಳ್ಳುಬ್ಬಿ, ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ಅರುಣ ಶಹಾಪೂರ, ಹನಮಂತ ನಿರಾಣಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಅಶೋಕ ಲಿಂಬಾವಳಿ ಮತ್ತಿತರರು ಇದ್ದರು.

ಇದಕ್ಕೂ ಮೊದಲು ಮಧ್ಯಾಹ್ನ 12 ಗಂಟೆಗೆ ಕಣವಿ ವೀರಭದ್ರೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಟು ಪಶು ಆಸ್ಪತ್ರೆ, ಟೆಂಗಿನಮಠ ರಸ್ತೆ, ಅಡತ ಬಜಾರ, ಪೋಲಿಸ್ ಚೌಕಿ, ಸ್ಟೇಷನ್ ರಸ್ತೆ ಮಾರ್ಗವಾಗಿ ಬಸವೇಶ್ವರ ಸರ್ಕಲ್ ವರೆಗೆ ಭವ್ಯ ಮೆರವಣಿಗೆ ನಡೆಯಿತು. ಅಪಾರ ಸಂಖ್ಯೆಯ ಕಾರ್ಯಕರ್ತರು, ಮಹಿಳೆಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

# ಬಂಜಾರ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿ, ಪ್ರಜ್ಞಾವಂತರಾಗಿ ಮಾಡಿ: ಸುರೇಶ್ ಬಳೂಟಗಿ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಬಂಜಾರ ಸಮುದಾಯದ ಯುವಕರು ಪ್ರತಿಯೊಂದು ಕ್ಷೇತ್ರದಲ್ಲೂ ಮುನ್ನಡೆ ಸಾಧಿಸಿದಾಗ ಮಾತ್ರ ನಮ್ಮ ಹಿರಿಯರು ಕಂಡ ಕನಸು ನನಸಾಗಲು ಸಾಧ್ಯ ಎಂದು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಹೇಳಿದರು. ಕುಕನೂರು ತಾಲೂಕಿನ ಹೊನ್ನುಣಸಿ ತಾಂಡಾದಲ್ಲಿ ನಡೆದ ಸದ್ಗುರುಶ್ರೀ ಸೇವಾಲಾಲ ಮಹಾರಾಜರ ಭೋಗ ಕಾರ್ಯಕ್ರಮ ನೆರವೇರಿಸಿ ಮಾತನಾಡಿದ ಅವರು ನಮ್ಮ ಸಮುದಾಯದ ಜನರು ತಮ್ಮ ಮಕ್ಕಳನ್ನು ಒಳ್ಳೆಯ ಶಿಕ್ಷಣ ನೀಡಿ, ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡಿ ಸಮಾಜದಲ್ಲಿ ಉನ್ನತ ಸ್ಥಾನ ಮಾನ ಪಡೆದುಕೊಳ್ಳುವಂತೆ ಬೆಳೆಸಬೇಕು.

ನಮಗೆ ಸಿಕ್ಕಿರುವ ಮೀಸಲಾತಿ ಕಸಿದುಕೊಳ್ಳುವ ಷಡ್ಯಂತ್ರ ನಡೆ–ಯುತ್ತಿದ್ದು, ಅದನ್ನು ಉಳಿಸಲು ನಮ್ಮ ಸಮಾಜ ಪಕ್ಷಾತೀತವಾಗಿ ಒಗ್ಗಟ್ಟಾಗಿ ಹೊರಡಬೇಕು. ಮೂಢನಂಬಿಕೆ, ದುಶ್ಚಟ, ವರದಕ್ಷಿಣೆ ಇಂಥ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆ ಮಾಡಿ ಸದೃಢ ಸಮಾಜ ಕಟ್ಟುವ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು. ಗೋರ ಸಿಕವಾಡಿ ಫುಲ್ ಟೈಮರ್ (ಪೂರ್ಣಾವಧಿ ಕಾರ್ಯಕರ್ತ ) ಉಮೇಶ ರಾಠೋಡ ಮಾತನಾಡಿ ನಮ್ಮ ಬಂಜಾರ ಸಮಾಜ ಸುಮಾರು 7000 ವರ್ಷಗಳ ಭವ್ಯ ಇತಿಹಾಸ ಹೊಂದಿದ್ದು, ಶ್ರೀಮಂತ ಸಂಸ್ಕೃತಿ, ಭಾಷೆ, ಆಚಾರ ವಿಚಾರ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಮರೆಯದೇ ಅವುಗಳನ್ನು ಉಳಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಈ ಸಂಧರ್ಭದಲ್ಲಿ ಗೋರ ಸೇನಾ ಮುಖಂಡರಾದ ವಿಶ್ವನಾಥ ರತನ್, ರಾಘವೇಂದ್ರ ಬಳಗೇರಿ, ತಾಂಡಾದ ನಾಯಕರಾದ ನಿಂಗಪ್ಪ ಚವ್ಹಾಣ, ಈರಣ್ಣ ಚವ್ಹಾಣ, ಯಮನೂರ ರಾಠೋಡ, ಚಂದ್ರುಚವ್ಹಾಣ, ಹಾಗೂ ಮಹಿಳೆಯರು, ಯುವಕರು ಹಾಜರಿದ್ದರು.

# ಭಗತ್ ಸಿಂಗ್, ರಾಜಗುರು ಸುಖದೇವ್ ಹುತಾತ್ಮರ ದಿನಾಚರಣೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಭಾರತಪ್ರಜಾಸತ್ತಾತ್ಮಕಯುವಜನ ಫೆಡರೇಶನ್. ಡಿವೈಎ□□□ಜಿಲ್ಲಾ ಸಮಿತಿ ವತಿಯಿಂದ ನಗರದ ತಮ್ಮ ಕಚೇರಿಯಲ್ಲಿ ಕ್ರಾಂತಿಕಾರಿ ಭಗತ್ ಸಿಂಗ್ ರಾಜಗುರು ಸುಖದೇವ್ ಅವರ ಹುತಾತ್ಮರ ದಿನಾಚರಣೆ ಆಚರಿಸಲಾಯಿತು ಕ್ರಾಂತಿಕಾರಿಗಳ ಭಾವಚಿತ್ರಕ್ಕೆ ಡಿ.ವೈ.ಎಫ್.ಐ. ಸಂಘಟನೆಯ ಪದಾಧಿಕಾರಿಗಳು ಪುಷ್ಪ ನಮನಗಳನ್ನು ಅರ್ಪಿಸಿ ಭಕ್ತಿ ಪೂರ್ವಕವಾಗಿ ಗೌರವ ನಮನವನ್ನು ಸಲ್ಲಿಸಿದರು ಈ.ಸಂದರ್ಭದಲ್ಲಿ ಡಿ.ವೈ.ಎಫ್.ಐ ಸಂಘಟನೆಯ ಜಿಲ್ಲಾ ಅಧ್ಯಕ್ಷರು ಯು.ಎರ್ರಿಸ್ವಾಮಿ ಮಾತನಾಡಿ

ಇಂದು ಮಾರ್ಚ್ 23.ಭಾರತದ ಇತಿಹಾಸದಲ್ಲಿ ಕಪ್ಪು ದಿನವಾದರೂ, ನಮ್ಮ ವೀರರ ತ್ಯಾಗವನ್ನು ನೆನೆಯುವ ಶ್ರೇಷ್ಠ ದಿನ.1931ರ ಇದೇ ದಿನ, ಬ್ರಿಟಿಷರ ಅನ್ಯಾಯದ ವಿರುದ್ಧ ಹೋರಾಡಿದ ಭಗತ್ ಸಿಂಗ್, ಸುಖ್ದೇವ್ ಮತ್ತು ರಾಜ್ಗುರು ಅವರು ನಗುತ್ತಲೇ ನೇಣುಗಂಬಕ್ಕೇರಿದರು.

ತ್ಯಾಗ ಮತ್ತು ಕ್ರಾಂತಿ: ಕೇವಲ 23 ವರ್ಷದ ಭಗತ್ ಸಿಂಗ್, ಬಾಂಬ್ ಎಸೆದದ್ದು ಬ್ರಿಟಿಷರನ್ನು ಕೊಲ್ಲಲು ಅಲ್ಲ, ಬದಲಿಗೆ ಬ್ರಿಟಿಷರ ಕಿವುಡು ಆಡಳಿತಕ್ಕೆ ತಮ್ಮ ವಿಚಾರಗಳನ್ನು ತಲುಪಿಸಲು.ವ್ಯಕ್ತಿಗಳನ್ನು ಕೊಲ್ಲಬಹುದು, ಆದರೆ ವಿಚಾರಗಳನ್ನಲ್ಲ ಎಂದು ಅವರು ನಂಬಿದ್ದರು.ದೇಶಪ್ರೇಮ: ಕ್ರಾಂತಿಯ ಖಡ್ಗವು ಪ್ರಖರ ವಿಚಾರಧಾರೆಗಳಿಂದ ಹರಿತಗೊಂಡಿದೆ ಎಂದು ಭಗತ್ ಸಿಂಗ್ ಹೇಳಿದ್ದರು. ಅವರ ದೇಶಭಕ್ತಿಯು ನಮಗೆ ಸದಾ ಸ್ಫೂರ್ತಿದಾಯಕ.

ಮುಖ್ಯಸಂದೇಶ: ಹುತಾತ್ಮರ ತ್ಯಾಗ ವ್ಯರ್ಥವಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ದೇಶದ ಒಳಿತಿಗಾಗಿ ಶ್ರಮಿಸುವುದು, ಅನ್ಯಾಯದ ವಿರುದ್ಧ ಧ್ವನಿ ಎತ್ತುವುದು ಮತ್ತು ಜವಾಬ್ದಾರಿಯುತ ನಾಗರಿಕರಾಗುವುದು, ನಾವಿಂದು ಅವರಿಗೆ ಸಲ್ಲಿಸುವ ನಿಜವಾದ ಗೌರವ. ಬ್ರಿಟಿಷರ ದಬ್ಬಾಳಿಕೆ ದೌರ್ಜನ್ಯದ ವಿರುದ್ಧ ದೇಶವನ್ನು ದಾಸ್ಯದ ಸಂಕೋಲೆಯಿಂದ ಬಿಡಿಸಬೇಕು ಎಂಬ ಕನಸು ಕಂಡವರು... ಬ್ರಿಟಿಷರ ವಿರುದ್ಧ ಸಿಂಹಧ್ವನಿ ಮೊಳಗಿಸಿದ್ದ ವೀರರು... ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಪ್ರಾಣವನ್ನೇ ತೆತ್ತವರು... ಇವರ ಚಿಂತನೆ, ಆದರ್ಶ, ಹೋರಾಟದ ಕಿಚ್ಚು, ದೇಶ ಪ್ರೇಮ ಸದಾ ನಮಗೆ ದಾರಿ ದೀಪ. ಮಾರ್ಚ್ 23 ನಮಗೆಲ್ಲಾ ಅತ್ಯಂತ ನೋವಿನ ದಿನ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು, ಬ್ರಿಟಿಷರ ವಿರುದ್ಧ ಹೋರಾಟದ ಕಹಳೆ ಮೊಳಗಿಸಿದ್ದ ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್, ಸುಖ್ದೇವ್ ಮತ್ತು ಶಿವರಾಮ್ ರಾಜ್ಗುರು ಹುತಾತ್ಮರಾದ ದಿನ.

1931ರ ಮಾರ್ಚ್ 23ರಂದು ಲಾಹೋರ್ನ ಸೆಂಟ್ರಲ್ ಜೈಲಿನಲ್ಲಿ ಭಗತ್ ಸಿಂಗ್, ಸುಖ್ದೇವ್ ಮತ್ತು ಶಿವರಾಮ್ ರಾಜ್ಗುರು ಅವರನ್ನು ಬ್ರಿಟಿಷರು ಗಲ್ಲಿಗೇರಿಸಿದ್ದರು. ಆಗ ಭಗತ್ ಸಿಂಗ್ ವಯಸ್ಸು ಬರೀ 23...! ಭಾರತ ಮಾತೆಯನ್ನು ಸ್ವಾತಂತ್ರ್ಯಗೊಳಿಸಬೇಕೆಂಬ ಹೋರಾಟ ತೀವ್ರಗೊಂಡಿದ್ದ ಸಂದರ್ಭದಲ್ಲಿ ಈ ಮೂವರು ಕ್ರಾಂತಿಕಾರಿಗಳು.

ಮುಂಚೂಣಿಯಲ್ಲಿ ನಿಂತು ದೇಶ ಪ್ರೇಮದ ಕಿಚ್ಚು ಹೊತ್ತಿಸಿದ್ದರು. ಇವರ ಹೋರಾಟದ ಮನೋಭಾವ ಬ್ರಿಟಿಷ್ ಆಡಳಿತಕ್ಕೂ ಬಿಸಿ ಮುಟ್ಟಿಸಿತ್ತು. ಸಣ್ಣ ಪ್ರಾಯದಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ್ದ ಇವರು ದೇಶ ದಾಸ್ಯದ ಸಂಕೋಲೆಯಿಂದ ಬಂಧ ಮುಕ್ತವಾಗಬೇಕೆಂದು ಕನಸು ಕಂಡಿದ್ದರು. ತಮ್ಮ ಜೀವನದ ಪ್ರತಿಕ್ಷಣವನ್ನೂ ಇವರು ದೇಶಕ್ಕಾಗಿ ಮುಡಿಪಾಗಿಟ್ಟಿದ್ದರು. ಇವರ ಪ್ರಖರ ವಿಚಾರಧಾರೆಗಳು ಅಂದು ಹಲವರಿಗೆ ಸ್ಫೂರ್ತಿ ತುಂಬಿತ್ತು. ಜನರಲ್ಲಿ ಸ್ವಾತಂತ್ರ್ಯದ ಚಿಂತನೆಯನ್ನು ಬಡಿದೆಬ್ಬಿಸಿತ್ತು. ಇವರ ಕ್ರಾಂತಿಕಾರಿ ಹೋರಾಟ ಚಿಂತನೆಯ ಮೂಲಕ ಎಲ್ಲರ ಹೃದಯ ಗೆದ್ದಿದ್ದರು.

ಮಾರ್ಚ್ 23 ರಂದು ಕ್ರಾಂತಿ–ಕಾರಿ ಭಗತ್ ಸಿಂಗ್ ಹುತಾತ್ಮ ದಿನವು.ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ 23ನೇ ವಯಸ್ಸಿನಲ್ಲಿಯೇ ಪ್ರಾಣ ತ್ಯಾಗ ಮಾಡಿದ ಭಗತ್ ಸಿಂಗ್, ಸುಖ್ದೇವ್ ಮತ್ತು ರಾಜ್ಗುರು ಅವರ ಕ್ರಾಂತಿಕಾರಿ ಹೋರಾಟ ಹಾಗೂ ತ್ಯಾಗವನ್ನು ಸ್ಮರಿಸುವ ದಿನವಾಗಿದೆ. ಈ ವೀರರ ದೇಶಭಕ್ತಿ, ಸಾಹಸ ಮತ್ತು ವಿಚಾರಧಾರೆಗಳು ಇಂದಿನ ಯುವ ಪೀಳಿಗೆಗೆ ಸದಾ ಪ್ರೇರಣೆಯಾಗಿವೆ.

ಈಗಿನ ಯುವಕರು ಅವರ ಚಿಂತನೆ ಆದರ್ಶ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಲು

ಕರೆ ನೀಡಿದಿರು

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರು ಬೈಲ ಹನುಮಪ್ಪ ಜಿಲ್ಲಾ ಖಜಾಂಚಿ ಬಿಪಿ. ನವೀನ್ ಜಿಲ್ಲಾ ಕ್ರೀಡಾ ಅಧ್ಯಕ್ಷರು ಜಿ ಎನ್. ಎರ್ರಿಸ್ವಾಮಿ ಬಳ್ಳಾರಿ ತಾ ಅಧ್ಯಕ್ಷರು ಎ ತಿಪ್ಪೇರುದ್ರ ಕಾರ್ಯದರ್ಶಿ ಹೆಚ್. ಎರ್ರಿಸ್ವಾಮಿ ಕೊಳಗಲ್ಲು ಮಸ್ತನ್ ಸಾಬ್ ಕೆ. ಶಿವಾನಂದ ಕಾರೆಕಲ್ಲು ಶಿರಾಜ್ ಶೇಖರ್ ಮೊಮದ್ ಸೇರಿದಂತೆ ಇತರರು ಉಪಸ್ಥಿತರಿದ್ದರು

# ಶಿಬಿರ ಎಂದರೆ ಕಟಿಬದ್ದ ಸಂಘಟನೆಯ ಶಿಬಿರ: ಖೂಬಾ

• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ**



ಎಸ್.ಬಿ. ಸಿ.ಎಸ್,ಆರ್ಟ್ಸ್, ಎಸ್.ವಿ ಕಾಮರ್ಸ್ ಸೈನ್ಸ್ ಕಾಲೇಜ್ ಹಾಗೂ ಬೀದರ್ ವಿಶ್ವವಿದ್ಯಾಲಯ ವತಿಯಿಂದ ಗಡವಂತಿ ಗ್ರಾಮದ ಮುಗ್ಧ ಸಂಗಯ್ಯಗವಿ ಅವರಣದಲ್ಲಿ 2025–26 ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಹಿರಿಯ ಸಾಹಿತಿಗಳಾದ ಬಿ.ಎಸ್. ಖೂಬಾ ಅವರು ಸಸಿಗೆ ನೀರು ಹಾಕುವುದರ ಮುಖಾಂತರ ಕಾರ್ಯಕ್ರಮ ಉದ್ಘಾಟಿಸಿ, ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದ ಕಲ್ಪನೆ ಮತ್ತು ಸಾಕಾರ ಒಳ್ಳೆಯ ರೀತಿಯಲ್ಲಿ ಆಗುತ್ತಿದ್ದು, ಇದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಈ ರೀತಿಯ ಯೋಚನೆಗಳು, ಯೋಜನೆಗಳು ಕ್ರಮಬದ್ಧವಾಗಿ ಆಗುತ್ತಿರಬೇಕು. ಇದಕ್ಕೆ ನಮ್ಮ ಊರಿನ ಸಹಕಾರ ಇದ್ದೇ ಇರುತ್ತದೆ ಎಂದು ಅಭಿಪ್ರಾಯಪಟ್ಟರು. ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರ ಎಂದರೆ ಅದು ಒಂದು ಕಟಿಬದ್ಧ ಸಂಘಟನೆಯ ಶಿಬಿರ ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಹಳ್ಳಿಗಳ ಉದ್ಧಾರದಿಂದ ಮಾತ್ರ ದೇಶದ ಉದ್ಧಾರ ಸಾಧ್ಯ ಎಂದರು. ಬೇಧ–ಭಾವ ಮರೆತು ನಿಸ್ವಾರ್ಥದಿಂದ ಆತ್ಮ ತೃಪ್ತಿಗಾಗಿ ಕೆಲಸ ನಿರ್ವಹಿಸಬೇಕು ಎಂದರು. ಮುಖ್ಯ ಅತಿಥಿಗಳಾಗಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಮಂದಾಕಿನಿ ಬೇಹೆನಜಿ ಮಾತನಾಡಿ, ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರ ಉಳಿದರೆ ಮಾತ್ರ ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಅನಾರೋಗ್ಯಕರ ಪರಿಸ್ಥಿತಿಯಲ್ಲಿ ನಮ್ಮ ಮುಂದಿನ ಪೀಳಿಗೆ ಜೀವನ ನಡೆಸುವ ದುಸ್ಥಿತಿ ಎದುರಾಗುತ್ತದೆ ಎಂದು ತಿಳಿಸಿದರು. ಇಂದಿನ ಮಕ್ಕಳು ದೇಶದ ಮುಂದಿನ ಪ್ರಜೆಗಳು, ಆದ್ದರಿಂದ ವಿದ್ಯಾರ್ಥಿಗಳು ಕಲಿಕೆಯ ದಿನಗಳಲ್ಲಿ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿ ಕೊಂಡರೆ ಜೀವನ ಪೂರ್ತಿ ಆರೋಗ್ಯಕರವಾಗಿ ಬದುಕು ಸಾಗಿಸಬಹುದು. ಹಾಗೊಂದು ವೇಳೆ ದುಶ್ಚಟಗಳನ್ನು ಕಲಿತರೆ ಹಲವು ರೋಗಗಳಿಗೆ ತುತ್ತಾಗಿ ನರಳುವ ಪರಿಸ್ಥಿತಿ ಎದುರಾಗುತ್ತದೆ. ಇದಕ್ಕೆ ವಿದ್ಯಾರ್ಥಿಗಳು ಅವಕಾಶ ನೀಡಬಾರದು ಎಂದು ಮನವಿ ಮಾಡಿದರು. ಎನ್ ಎಸ್ ಎಸ್ ಅಧಿಕಾರಿ ಪ್ರವೀಣಕುಮಾರ ಕಲಬುರ್ಗಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳು ಒಳ್ಳೆಯ ಅಭ್ಯಾಸಗಳನ್ನು ಕಲಿತರೆ ಸಮಾಜದಲ್ಲಿ ಎಲ್ಲರೂ ಗೌರವಿಸುತ್ತಾರೆ, ದುರಭ್ಯಾಸಗಳನ್ನು ಕಲಿತರೆ ಸಮಾಜದಿಂದಲ್ಲೇ ದೂರವಿಟ್ಟು ನೋಡುವ ಸ್ಥಿತಿ ಎದುರಾಗುತ್ತದೆ. ಯುವ ಸಮುದಾಯ ಸಹವಾಸದಿಂದ ದಾರಿ ತಪ್ಪುತ್ತಿದ್ದಾರೆ ಎಂಬ ದೂರು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಒಳ್ಳೆಯ ಸ್ನೇಹಿತರನ್ನು ಆಯ್ಕೆ ಮಾಡಿ ಕೊಳ್ಳಬೇಕು ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ರವೀಂದ್ರನಾಥಪ್ಪ. ಕೆ ವಹಿಸಿದರು. ಪ್ರಮುಖರಾದ ಶ್ರೀಧರ್ ಪಸರ್ಗಿ ಓಂಕಾರ್ ತುಂಬಾ ಪಿಡಿಒ ಜಗದೇವಿ ಹಾಗೂ ಕಾಲೇಜಿನ ಸಿಬ್ಬಂದಿವರ್ಗ ಭಾಗವಹಿಸಿದರು ಈ ಕಾರ್ಯಕ್ರಮವನ್ನು ಭವಾನಿ ನಿರೂಪಿಸಿದರು ವೈಷ್ಣವಿ ವಂದಿಸಿದರು.

# ಪುಣ್ಯ ಸ್ಮರಣೆ ಅಂಗವಾಗಿ ಧಾರ್ಮಿಕ ಪ್ರವಚನ ಕಾರ್ಯಕ್ರಮ

ಮಲ್ಲಮ್ಮನುಡಿವಾರ್ತೆ ಕುಕನೂರ ತಾಲೂಕಿನ ಮಂಗಳೂರು ಗ್ರಾಮದ ಅರಳಲೇ ಹಿರೇಮಠದಲ್ಲಿ ಲಿಂಗೈಕ್ಯ ಷಡಕ್ಷಕ ಶಿವಾಚಾರ್ಯ ಮಹಾಸ್ವಾಮಿಗಳವರ 33 ಪುಣ್ಯ ಸ್ಮರಣೋತ್ಸವ ಹಾಗೂ ದಿನಂಕ 27/03/2026 ರಂದು ಲಘು ರಥೋತ್ಸವ ಕಾರ್ಯಕ್ರಮ ಮತ್ತು ದಿನಾಂಕ 23/03/2026 ರಿಂದ 26/03/2026 ರವರೆಗೆ ಶ್ರೀ ಮಂಗಳೇಶ್ವರ ಕಲ್ಯಾಣ ಮಂಟಪದ ಹತ್ತಿರ ಶ್ರೀ ಮ.ನಿ.ಪ್ರ ಅಭಿನವ ಚನ್ನಬಸವೇಶ್ವರ ಮಹಾಸ್ವಾಮಿಗಳ ಚನ್ನಬಸವೇಶ್ವರ ವಿರಕ್ತಮಠ ಹಿರೇಮಲ್ಲಕೇರಿ ಪೂಜ್ಯರಿಂದ ಐದು ದಿವಸಗಳ ಪರಿಯಂತರ ಧಾರ್ಮಿಕ ಪ್ರವಚನ ಕಾರ್ಯಕ್ರಮ ನೇರವೆರುವುದು.ಮತ್ತು ,ದೀಕ್ಷಾ ಕಾರ್ಯಕ್ರಮ, ಕರ್ತೃ ಗದ್ದಗೆ ಮಹಾ ರುದ್ರಾಭಿಷೇಕ,ಮಹಾ ಮಂಗಳಾರುತಿ ,ಹಾಗೂ ಶ್ರೀ ಮ.ನಿ.ಪ್ರ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳಿಂದ ನೂತನ ರಥೋತ್ಸವಕ್ಕೆ ಚಾಲನೆ,ನೀಡುವರು ಷ.ಬ್ರ ಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು, ಷ.ಬ್ರ ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು,ಚಳಗೇರಿ,ಶ್ರೀಮ.ನಿ.ಪ್ರ ಗಂಗಾಧರ ಮಹಾಸ್ವಾಮಿಗಳು ಅಡವಿ ಅಂಕಲಿ ಮಠ ಕೊತಬಾಳ,ಶ್ರೀ



ಮ.ನಿ.ಪ್ರ ಡಾ ಮಹಾದೇವ ಮಹಾಸ್ವಾಮಿಗಳು,ಅನ್ನದಾನೇಶ್ವರ ಶಾಖಾ ಮಠ ಕುಕನೂರ,ಶ್ರೀ ಮ.ನಿ.ಪ್ರ ಅಭಿನವ ಚನ್ನಬಸವೇಶ್ವರ ಮಹಾಸ್ವಾಮಿಗಳು ಚನ್ನಬಸವೇಶ್ವರ ವಿರಕ್ತಮಠ ಹಿರೇ ಮಲ್ಲನಕೇರಿ,ಶ್ರೀ ನೀಲಕಂಠ ಮಹಾಸ್ವಾಮಿಗಳು ಎಂ ಗುಡದೂರ ಪೂಜ್ಯರ ಅಮೃತ ಹಸ್ತದಿಂದ ಶ್ರೀ ಅರಳಲೇ ಹಿರೇಮಠದ ಕಾರ್ಯಕ್ರಮಗಳು ಜರಗುವವು, ಶ್ರೀ ಮಠದ ರಥೋತ್ಸವಕ್ಕೆ ಗ್ರಾಮದ ಹಾಗೂ ಸುತ್ತಮುತ್ತಲಿನ ಸಮಸ್ತ ಸದ್ಭಕ್ತರು ಆಗಮಿಸಿ ಶ್ರೀ ಗುರು ಕೃಪಗೆ ಪಾತ್ರ ರಾಗಬೇಕೇಂದು ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಅರಳಲೇ ಹಿರೇಮಠ, ಅರಳಲೇ ಹಿರೇಮಠದ ಜಾತ್ರಾ ಸಮಿತಿ ಯವರು ಪ್ರಕಣೆಯಲ್ಲಿ ತಿಳಿಸಿದ್ದಾರೆ.

## ಈಶ್ವರ ಖಂಡ್ರೆ ಅವರಿಗೆ ಅದ್ದೂರಿ ಸನ್ಮಾನ

# ಧರ್ಮದ ಉಳಿವಿಗೆ ವರ್ತಮಾನದ ಜೀವಂತಿಕೆಯೂ ಮುಖ್ಯ: ಈಶ್ವರ ಖಂಡ್ರೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾದ ಬೀದರ್ ಜಿಲ್ಲೆ ಅಭಿವೃದ್ಧಿಯಲ್ಲಿ ಶತಮಾನಗಳ ಶಾಪದಿಂದ ಹಿಂದುಳಿದಿದ್ದು, ಈ ಹಣೆಪಟ್ಟಿ ಕಳಚಲು ಎಲ್ಲರೂ ಕೈಜೋಡಿಸಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ ಖಂಡ್ರೆ ಕರೆ ನೀಡಿದ್ದಾರೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅವರು, ಇಂದು ತಮ್ಮ ತವರು ಜಿಲ್ಲೆ ಬೀದರ್ ನ ಫಾರ್ಮಸಿ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದರು.

ನಮ್ಮ ಜಿಲ್ಲೆಯ ಸಮಸ್ತ ಜನರ, ಸಮುದಾಯದ ಜನರ ಅದರಲ್ಲೂ ಯುವ ಪೀಳಿಗೆಯ ತಿಳಿವಳಿಕೆ ಮಟ್ಟವನ್ನು ಹೆಚ್ಚಿಸಬೇಕು. ಅವರಲ್ಲಿ ಕೌಶಲ್ಯ ಮೂಡಿಸಿ, ನೈಪುಣ್ಯತೆಯನ್ನು ಹೆಚ್ಚಿಸಿ, ಅವರನ್ನು ಉದ್ಯೋಗಕ್ಕೆ ಅರ್ಹರನ್ನಾಗಿ ಮಾಡಬೇಕು ಮತ್ತು ಅವರ ಆದಾಯ ಹೆಚ್ಚಿಸಬೇಕು. ವೃತ್ತಿಗಳ ಸಂಖ್ಯೆ ಬೆಳೆಸಬೇಕು. ದುಡಿಯುವ ಕೈಗೆ ಉದ್ಯೋಗ ಕೊಟ್ಟಾಗ ಪ್ರಗತಿ ಆಗುತ್ತದೆ ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವುದಾಗಿ ಹೇಳಿದ ಅವರು, ಜಿಲ್ಲೆಯ ಮೂಲಭೂತ ಸೌಲಭ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ 1000 ವಿದ್ಯಾರ್ಥಿನಿಯರ ಹಾಸ್ಟೆಲ್ ನಿರ್ಮಿಸುವ ಗುರಿ ಮಹಾಸಭಾಗಿದೆ. ಈ ನಿಟ್ಟಿನಲ್ಲಿ ಮಾಜಿ ಶಾಸಕ ಅಶೋಕ್ ಖೇಣಿ ಅವರು ಮಾಗಡಿ ರಸ್ತೆ ಬಳಿ 2 ಎಕರೆ ಜಮೀನು ನೀಡಲು ಒಪ್ಪಿದ್ದಾರೆ. ಅದನ್ನು ಪಡೆಯುವ ಪ್ರಯತ್ನ ಮಾಡಲಾಗುವುದು. ಹಾಸ್ಟೆಲ್ ನಿರ್ಮಿಸಲಾಗುವುದು. ಅದೇ ರೀತಿ ಪ್ರತಿ ಜಿಲ್ಲೆಯಲ್ಲೂ ವಿದ್ಯಾರ್ಥಿ ನಿಲಯ ನಿರ್ಮಿಸುವ ನಿಟ್ಟಿನಲ್ಲಿ ಚಿಂತಿಸಲಾಗುತ್ತಿದೆ ಎಂದರು.

ಎಲ್ಲ ಸಮುದಾಯದವರನ್ನೂ ಜೊತೆಯಲ್ಲಿ ತೆಗೆದುಕೊಂಡು ಭವ್ಯ ದಿವ್ಯ ಸಮಾಜ ನಿರ್ಮಾಣ ಹಾನಗಲ್ ಕುಮಾರೇಶ್ವರರ ಕಲ್ಪನೆಯಾಗಿತ್ತು. ಇದರ ಫಲವಾಗಿ ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ಜನ್ಮತಾಳಿತು ಎಂದು ಈಶ್ವರ ಬಿ ಖಂಡ್ರೆ ಹೇಳಿದರು.

ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿದ್ದರೂ, ನಮ್ಮ ಗುರುಪೀಠಾಧಿಪತಿಗಳಲ್ಲಿ ಯಾವುದೇ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇರಬಹುದು. ಅದೆಲ್ಲವನ್ನೂ ಬದಿಗಿಟ್ಟು, ಸಮಾಜದ ಒಳಿತಿಗಾಗಿ ಒಂದಾಗಿ ನಡೆಯುವ ಸಕಾಲ ಇದಾಗಿದೆ ಎಂದರು.

*ಧರ್ಮಕ್ಕೆ ವರ್ತಮಾನದ ಜೀವಂತಿಕೆಯೂ ಮುಖ್ಯ:

ನಾವು ಕೇವಲ ನಮ್ಮ ಹಿರಿಯ ಶ್ರೀಮಂತಿಕೆಯ ಬಗ್ಗೆ ಹೇಳಿದರೆ ಸಾಲದು, ನಮ್ಮ ಧರ್ಮ ಉಳಿಯಬೇಕು, ಬೆಳೆಯಬೇಕು ಎನ್ನುವುದಾದರೆ ಎಲ್ಲರೂ ವಿಘಟನೆ ಬಿಟ್ಟು, ಸಂಘಟನೆಯತ್ತ ಮುಖ ಮಾಡಬೇಕಾಗಿದೆ. ಒಂದು ಧರ್ಮಕ್ಕೆ



ಒಂದು ಸಮಾಜಕ್ಕೆ ಐತಿಹಾಸಿಕ ಶ್ರೀಮಂತಿಕೆ ಮಾತ್ರ ಮುಖ್ಯವಲ್ಲ. ವರ್ತಮಾನದ ಜೀವಂತಿಕೆಯೂ ಅತ್ಯಂತ ಮುಖ್ಯ ಎಂದು ಅವರು ಪ್ರತಿಪಾದಿಸಿದರು.

ಯುವಜನರಲ್ಲಿ ಉತ್ಸಾಹ ಮೂಡಿಸಿ, ಭವಿಷ್ಯದ ಪೀಳಿಗೆಯ ಸರ್ವತೋಮುಖ ಏಳಿಗೆಗಾಗಿ ನಾವೆಲ್ಲರೂ ಸೇರಿ ಯೋಜನೆ ರೂಪಿಸಬೇಕಾಗಿದೆ. ಅದಕ್ಕಾಗಿ ಮಹಾಸಭಾ ಹಲವಾರು ಯೋಜನೆ ಹಾಕಿಕೊಂಡಿದೆ. ಇದಕ್ಕೆ ನೀವ ಸಲಹೆ, ಸರಕಾರ ನೀಡಬೇಕು ಎಂದರು.ಅಭಿನಂದನಾ ಸ್ವಾಗತ ಸಮಿತಿಯ ಅಧ್ಯಕ್ಷರು ಆಗಿರುವ ಬೂಡಾ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅಭಿನಂದನಾ ನುಡಿ ಮಾತನಾಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬೀದರ್ ನ ಆಶಾಕಿರಣ ಈಶ್ವರ ಖಂಡ್ರೆ ಅವರ ಕೈಯನ್ನು ನಾವೆಲ್ಲರೂ ಬಲಪಡಿಸಬೇಕು. ಈಶ್ವರ ಖಂಡ್ರೆ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮ್ಮ ಜಿಲ್ಲೆಗೇ ಹೆಮ್ಮೆ ತಂದಿದೆ ಎಂದರು.

ಸಿದ್ಧಾರೂಢ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮಾತನಾಡಿ, ಈಶ್ವರ ಖಂಡ್ರೆ ಅವರಿಗೆ ಭೀಮಣ್ಣ ಖಂಡ್ರೆ ಅವರಿಂದ ದಿವ್ಯ ಶಕ್ತಿ ಲಭಿಸಿದೆ. ಸಮಾಜದ ಒಳಿತಿಗಾಗಿ ಸದಾ ಶ್ರಮಿಸುತ್ತಿರುವ ಈಶ್ವರ ಖಂಡ್ರೆ ಅವರಲ್ಲಿ ಸಂತರ ಕರುಣೆ, ಯೋಧನ ಶೌರ್ಯ, ದಾನಿಯ ದಯಾಗುಣವಿದೆ. ಅವರು ತಮ್ಮ ಗುಣದಿಂದಲೇ ಗೌರವ ಪಡೆದಿದ್ದಾರೆ. ಹೀಗಾಗಿಯೇ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ಆಗಮಿಸಿದ್ದಾರೆ ಎಂದರು.

ಹಾರಕೂಡ ಶ್ರೀಮಠದ ಪೂಜ್ಯ ಡಾ.ಚನ್ನವೀರ ಶಿವಾಚಾರ್ಯರು ಮಾತನಾಡಿ, ಅಹಂ ಇಲ್ಲದ, ಧೈರ್ಯಶಾಲಿಗಳಾದ ಮತ್ತು ಸಮಯೋಚಿತವಾಗಿ ನುಡಿವ ಹಾಗೂ ದಾನ ಮಾಡುವ ಪ್ರವೃತ್ತಿ ಮೈಗೂಡಿಸಿಕೊಂಡಿರುವ ಈಶ್ವರ ಖಂಡ್ರೆ ತಮ್ಮ ಚತುರ್ಗುಣದಿಂದಲೇ ಜನಮೆಚ್ಚಿದ ನಾಯಕರಾಗಿದ್ದು, ಅವರು ಇನ್ನೂ ಉನ್ನತ ಹುದ್ದೆ ಅಲಂಕರಿಸಲಿ ಎಂದು ಅವರು, ಸದ್ಗುಣ ಸಂಪನ್ನರಾದ ಅವರು ಶತಾಯುಷಿಗಳಾಗಿ ಬಾಳಲಿ, ಈ ನಾಡು ಬೆಳಗಲಿ ಎಂದರು.

ಇಡೀ ಬೀದರ್ ನಗರದ ಇತಿಹಾಸದಲ್ಲಿಯೇ ಬಸವ ತತ್ವದವರು, ಪಂಚಾಚಾರ್ಯ ಪರಂಪರೆಯವರು, ವಿರಕ್ತರು ಎಲ್ಲರೂ ಒಂದೇ ವೇದಿಕೆಯಲ್ಲಿ ಸೇರಿದ್ದಾರೆ. ರೇಣುಕಾಚಾರ್ಯರಿಗೆ, ಬಸವಣ್ಣನವರಿಗೆ ಹಾಗೂ ಹಾನಗಲ್ಲ ಕುಮಾರೇಶ್ವರರ ಭಾವಚಿತ್ರಕ್ಕೆ ಇಂದು ಪುಷ್ಪ ನಮನ ಸಲ್ಲಿಸಿದ ಏಕೈಕ ಕಾರ್ಯಕ್ರಮ ಇದಾಗಿದೆ


ಚನ್ನಬಸವ ಪಟ್ಟದ್ದೇವರು ನಮ್ಮೆಲ್ಲರ ಹೃದಯದಲ್ಲಿದ್ದಾರೆ. ಅವರಿಗೂ ಸೇರಿದಂತೆ ನಮಗೆಲ್ಲರಿಗೂ ಆಧ್ಯಾತ್ಮಿಕ ಶಕ್ತಿಯನ್ನು ತುಂಬಿದವರು ಕುಮಾರೇಶ್ವರರು. ಚನ್ನಬಸವ ಪಟ್ಟದ್ದೇವರ ಪರಮ ಭಕ್ತರಾದ ಈಶ್ವರ ಖಂಡ್ರೆಯವರು ಸಮಾಜಕ್ಕಾಗಿ ಶ್ರಮಿಸುತ್ತಿದ್ದಾರೆ ಎಂದರು.

ಮಾಜಿ ಶಾಸಕ ಅಶೋಕ್ ಖೇಣಿ ಮಾತನಾಡಿ, ಈಶ್ವರ ಖಂಡ್ರೆ ಅವರ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ದೊಡ್ಡ ಶಕ್ತಿಯಾಗಲಿದೆ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ನನ್ನ ವತಿಯಿಂದ ಅಖಿಲ ಭಾರತ ವೀರಶೈವ ಮಹಾಸಭಾಗೆ ಬೃಹತ್ ಕಟ್ಟಡಕ್ಕಾಗಿ ಎರಡು ಎಕರೆ ಭೂದಾನ ಮಾಡಿದ್ದೇನೆ. ಅದು ಈಶ್ವರ್ ಖಂಡ್ರೆ ಅವರಿಗೆ ತೋರಿಸಿದ್ದು ಆಗಿದೆ. ಪ್ರತಿ ಜಿಲ್ಲೆಯಲ್ಲಿ ವೀರಶೈವ ಹಾಸ್ಟೆಲ್ ಗಳನ್ನು ಕಟ್ಟಬೇಕೆಂದು ಖೇಣಿ ಕರೆ ನೀಡಿದರು. ಮಾಜಿ ಸಚಿವ ರಾಜಶೇಖರ. ಬಿ ಪಾಟೀಲ್ ಮಾತನಾಡಿ, ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷತೆ ಅತಿ ದೊಡ್ಡ ಹೊಣೆಯಾಗಿದ್ದು, ಈ ಜವಾಬ್ದಾರಿ ಚಿಕ್ಕ ವಯಸ್ಸಿನಲ್ಲೇ ಈಶ್ವರ ಖಂಡ್ರೆ ಅವರಿಗೆ ಲಭಿಸಿದೆ. ಭಾಲ್ಕಿ ಕ್ಷೇತ್ರದಿಂದ 4 ಬಾರಿ ಶಾಸಕರಾಗಿ, 2 ಬಾರಿ ಸಚಿವರಾಗಿ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶ ಈಶ್ವರ ಖಂಡ್ರೆ ಅವರಿಗೆ ಲಭಿಸಿದೆ. ಅವರು ಈಗ ಸಭಾ ಅಧ್ಯಕ್ಷರಾಗಿ ಬೀದರ್ ನಿಂದ ಚಾಮರಾಜನಗರದವರೆಗೆ ಸಂಘಟನೆಯನ್ನು ಬಲಪಡಿಸಬೇಕು ವೀರಶೈವ ಮತ್ತು ಲಿಂಗಾಯತರು ಒಂದೇ ನಾಣ್ಯದ ಎರಡು ಮುಖ ಇದ್ದಂತೆ. ನಾವು ಜೊತೆಯಾಗಿ ಸಾಗಿದಾಗ ಅಭಿವೃದ್ಧಿ ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ರಾಜಶೇಖರ ಶಿವಾಚಾರ್ಯ ಬೆಮಳಖೇಡ, ಶ್ರೀ ವಿರೂಪಾಕ್ಷ ಶಿವಾಚಾರ್ಯ ಹುಡಗಿ, ಶ್ರೀ ಜಯಶಾಂತಲಿಂಗ ಶಿವಾಚಾರ್ಯ ಹಿರನಾಗಾಂವ, ಶ್ರೀ ಹಾನಗಿಲಿಂಗೇಶ್ವರ ಶಿವಾಚಾರ್ಯ ಹಲಬರ್ಗಾ, ಶ್ರೀ ಪ್ರಣಾವನಂದ ಸ್ವಾಮೀಜಿ ಮುಚಳಂಬ, ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ತ್ರಿಪುರಾಂತ, ಶ್ರೀ ಶಾಂತವೀರ ಶಿವಾಚಾರ್ಯ, ಶ್ರೀ ಪ್ರಭುದೇವ ಸ್ವಾಮೀಜಿ ಲಿಂಗಾಯತ ಮಹಾಮಠ, ಶ್ರೀ ಗಂಗಾಧರ ಶಿವಾಚಾರ್ಯ ಲಾಡಗೇರಿ ನೇತೃತ್ವ ವಹಿಸಿದ್ದರು. ವಿಧಾನ ಪರಿಷತ್ ಶಾಸಕರುಗಳಾದ ಚಂದ್ರಕಾಂತ್ ಪಾಟೀಲ್, ಭೀಮರಾವ್ ಪಾಟೀಲ್, ಮುಖಂಡರಾದ ಸೂರ್ಯಕಾಂತ ನಾಗಮಾರಪಳ್ಳಿ, ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ನಿಜಗುಣಾನಂದ ಸ್ವಾಮೀಜಿ, ಬೇಲ್ದಾಳೆ ಶರಣರು, ಪೂಜ್ಯ ರಾಜೇಶ್ವರ ಶಿವಾಚಾರ್ಯರು ಸೇರಿದಂತೆ ಮತ್ತಿತರರು ಮಾತನಾಡಿಸರು.

ಕಾರ್ಯಕ್ರಮದಲ್ಲಿ ಡಾ.ಗುರಮ್ಮ ಸಿದ್ದಾ–ರೆಡ್ಡಿ, ರಾಜೇಶ್ರೀ ಸ್ವಾಮಿ, ಬಸವರಾಜ ದೇಶಮುಖ, ಗುರುನಾಥ ಕೊಳ್ಳೂರ, ಜಯರಾಜ ಖಂಡ್ರೆ, ಸೋಮಶೇಖರ ಪಾಟೀಲಗಾದಗಿ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಎರಡು ಗೂಡ್ಸ್ ಅಟೋಗಳ ನಡುವೆ ಅಪಘಾತ



**ಕೊಪ್ಪಳ:** ಜಿಲ್ಲೆಯ ಗಂಗಾವತಿ ತಾಲೂಕಿನ ಮಹಿಬೂಬ ನಗರದ ನಿವಾಸಿಗಳು ಅಪ್ಪಿ ಆಟೋದಿಂದ ಕೊಪ್ಪಳಕ್ಕೆ ಹೋಗುತ್ತಿರುವಾಗ ಚಿಕ್ಕಬೇಣಕಲ್ ಹತ್ತಿರ ಆಗಿರುವಂತ ಘಟನೆ.

ಕೊಪ್ಪಳಕ್ಕೆ ದೇವರಿಗೋಸ್ಕರ ಹೋಗುತ್ತಿರುವಾಗ ಒಂದೇ ಕುಟುಂಬದ ಎರಡುಗಳು ನಾನು ಮೊದಲು ನೀನು ಮೊದಲು ಎಂದುಕೊಂಡು ರೇಸ್ ಹಚ್ಚಿದ ಕಾರಣ ಈ ಘಟನೆ ಸಂಭವಿಸಿದೆ ಎನ್ನಲಾಗಿದೆ.

**ಸ್ಥಳೀಯ ಯುವಕರ ಸಾಹಸ:** ಆಂಬುಲೆನ್ಸ್ ಮುಂದೆ ಹೋಗುತ್ತಿರುವಾಗ ದಾರಿ ಬಿಡಿಸುತ್ತಾ ಬೈಕ್ ಮೇಲೆ ತೆರಳಿ ಜೀವ ಕಾಪಾಡುವಲ್ಲಿ ಮುಂದಾದ ಯುವಕರು. ಓರ್ವ ಮಹಿಳೆ ಮೃತಪಟ್ಟಿದ್ದಾಳೆ ಎನ್ನಲಾಗುವುದು ಉಳಿದ ಗಾಯಾಳಿಗಳಿಗೆ ಚಿಕಿತ್ಸೆ ಮುಂದುವರೆದಿದೆ.

# ಬಸವ ದರ್ಶನದ ಕರಪತ್ರ ಬಿಡುಗಡೆ



**ಭಾಲ್ಕಿ:** ಹಿರೇಮಠ ಸಂಸ್ಥಾನ ಭಾಲ್ಕಿಯಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ ಹಾಗೂ ಡಾ.ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ ಮತ್ತು ವಚನ ಜಾತ್ರೆ–2026 ಹಾಗೂ ನಾಡೋಜ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ಯ ಏಪ್ರಿಲ್ 01 ರಿಂದ 20 ರವರೆಗೆ ಪ್ರತಿದಿನ ಸಾಯಂಕಾಲ 6–00 ಗಂಟೆಗೆ ಶ್ರೀ ಸಿದ್ಧೇಶ್ವರ ಮಠ, ಹಂದಿಗುಂದದ ಪರಮಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಗಳು, ಅವರಿಂದ ನಡೆಯಲಿರುವ ಬಸವ ದರ್ಶನ ಪ್ರವಚನದ ಕರಪತ್ರ ಬಿಡುಗಡೆಗೊಳಿಸಲಾಯಿತು. ಸಾನಿಧ್ಯ ವಹಿಸಿದ ಪೂಜ್ಯರು, ಪೂಜ್ಯರ ಸ್ಮರಣೋತ್ಸವ ಹಾಗೂ ನಮ್ಮ ಅಮೃತ ಮಹೋತ್ಸವ ನೆಪ ಮಾತ್ರ. ಆದರೆ ಆ ಒಂದು ನೆಪದಲ್ಲಿ ಬಸವತತ್ವ ಪ್ರಸಾರ ಮಾಡುವುದೇ ನಮ್ಮ ಮೂಲ ಉದ್ದೇಶವಾಗಿದೆ. ಅದಕ್ಕಾಗಿ ಈ ವರ್ಷ ಬಸವದರ್ಶನ ಪ್ರವಚನವನ್ನು ಏರ್ಪಡಿಸಲಾಗಿದೆ. ಅದಕ್ಕಾಗಿ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ತಾವೆಲ್ಲರೂ ಪ್ರಯತ್ನಸಬೇಕು. ಇಂದಿನ ದಿನಮಾನಗಳಲ್ಲಿ ಮನೆ ಮನೆ ಹೋಗಿ ಆಮಂತ್ರಣ ನೀಡುವ ಅನಿವಾರ್ಯತೆ ಉಂಟಾಗಿದೆ. ಧರ್ಮ ಕಾರ್ಯಕ್ಕಾಗಿ ದುಡಿದವರಿಗೆ ದೇವರ ಕರುಣೆ ಆಗುತ್ತದೆ. ಬಸವಗುರುವಿನ ಕರುಣೆ ಆಗಬೇಕಾದರೆ ನಾವು ಬಸವಕಾರ್ಯಕ್ಕೆ ದುಡಿಯುವುದನ್ನು ಕಲಿಯಬೇಕು. ಬಸವತತ್ವ ಪ್ರಸಾರದ ಕಳಕಳಿ ನಮ್ಮಲ್ಲಿ ಇರಬೇಕು. ನಮ್ಮ ಕೌಟುಂಬಿಕ ಕಾರ್ಯಕ್ಕಾಗಿ ನಾವು ಎಲ್ಲರಿಗೆ ಹೇಗೆ ಪ್ರೀತಿಯಿಂದ ಆಮಂತ್ರಿಸುತ್ತೇವೆ ಅದೇ ರೀತಿ ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಸಮಯ ನೀಡಿದರೆ ಈ ಕಾರ್ಯಕ್ರಮ ಯಶಸ್ವಿಯಾಗುತ್ತದೆ ಎಂದು ಆಶೀರ್ವಚನ ನೀಡಿದರು.

ಕರಪತ್ರ ಬಿಡುಗಡೆ ಕಲಬುರಗಿಯ ಹಿರಿಯ ಸಾಹಿತಿಗಳಾದ ಡಾ.ಕಲ್ಯಾಣರಾವ ಪಾಟೀಲ ಅವರು ಮಾಡಿದರು. ಪ್ರವಚನ ಸೇವಾ ಸಮಿತಿ ಅಧ್ಯಕ್ಷೆ ಪಂಕಜಾ ಶಿವು ಲೋಖಂಡೆ, ರೇಖಾ ಶಿವರಾಜ ಮಹಾಜನ, ರೇಖಾಬಾಯಿ ರಾಜಶೇಖರ ಅಷ್ಟೂರೆ, ನಿರ್ಮಲಾ ಚಂದ್ರಕಾಂತ ಪಾಟೀಲ, ಶಾರದಾಬಾಯಿ ಬಾಬುರಾವ ಹುಣಜೆ, ಸುನೀತಾ ಮಹಾದೇವಪ್ಪ ಮಮ್ಮಾ, ರುದ್ರಾಣಿ ವಿಲಾಸ ಬಕ್ಕಾ, ಸುವರ್ಣಾ ಓಂಕಾರ ಬಲ್ಲೂರೆ, ಪ್ರೇಮಲಾ ಶರಣಪ್ಪ ತೊಂಡಾರೆ, ವನೀತಾ ಶಿವಕುಮಾರ ಪಾಟೀಲ, ಬಸಮ್ಮತಾಯಿ, ಶಂಭುಲಿಂಗ ಕಾಮಣ್ಣ, ನಾಗಶೆಟ್ಟೆಪ್ಪ ಲಂಜವಾಡೆ, ಗುಂಡಪ್ಪ ಸಂಗಮಕರ, ಶಾಂತಯ್ಯ ಸ್ವಾಮಿ, ರಾಜು ಜುಬರೆ, ಮಲ್ಲಿಕಾರ್ಜುನ ಹುಣಜೆ ಮುಂತಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಮಲ್ಲಮ್ಮ ಆರ್.ಪಾಟೀಲ ಅವರಿಗೆ ಕರ್ನಾಟಕ ಸರಕಾರದ ಕಿತ್ತೂರು ರಾಣಿ ಪ್ರಶಸ್ತಿ ಘೋಷಣೆ ಆದ ಪ್ರಯುಕ್ತ ಪೂಜ್ಯ–ರಿಂದ ಸನ್ಮಾನಿಸಲಾಯಿತು. ದೀಪಕ ಠಮಕೆ ನಿರೂಪಸಿದರು.

# ಕಾಂಗ್ರೆಸ್ ದ್ರೋಹದ ವಿವರ ಕೊಟ್ಟ ಗೌಡರು


• **ಮಲ್ಲಮ್ಮ ನುಡಿ ವಾರ್ತೆ ನವದೆಹಲಿ**

ನಮ್ಮ ಜತೆ ಪ್ರೀತಿ ಹೊಂದಿದ್ದರು, ಮೋದಿ ಅವರ ಜತೆ ಮದುವೆಯಾದರು ಎಂದು ತಮ್ಮ ಬಗ್ಗೆ ಟೀಕೆ ಮಾಡಿದ್ದ ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ರಾಜ್ಯಸಭೆಯಲ್ಲಿಯೇ ಸೋಮವಾರ ತಿರುಗೇಟು ನೀಡಿದರು.

ಈ ಬಗ್ಗೆ ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿದ ದೇವೇಗೌಡರು, ನಾನು ಸದನದಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ಖರ್ಗೆ ಅವರು ಈ ವಿಷಯ ಪ್ರಸ್ತಾಪಿಸಿ ಮಾತನಾಡಿದ್ದಾರೆ. ಅವರು ನಾನೇನೂ ಅವರಿಗೆ, ಅವರ ಪಕ್ಷಕ್ಕೆ ದ್ರೋಹ ಬಗೆದಿದ್ದೇನೆ ಎಂದು ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ, ನಿಜವಾಗಿಯೂ ಕಾಂಗ್ರೆಸ್ ಪಕ್ಷದಿಂದ ದ್ರೋಹ ಆಗಿರುವುದು ನಮಗೆ, ನಮ್ಮ ಪಕ್ಷಕ್ಕೆ ಎಂದು ಎಂದು ಹರಿಹಾಯ್ದರು.

ಕಾಂಗ್ರೆಸ್ ಪಕ್ಷವು ನಮ್ಮ ಪಕ್ಷಕ್ಕೆ ಒಂದಲ್ಲ, ಎರಡಲ್ಲ.. ಅನೇಕ ಬಾರಿ ದ್ರೋಹ ಮಾಡಿದೆ. ಅದರ ಬಗ್ಗೆ ನಾನು ಸಾಕ್ಷಿ ಸಹಿತವಾಗಿ ಮಾತನಾಡಬಲ್ಲೆ. ಅದೆಲ್ಲವನ್ನು ಮರೆಮಾಚಲು ಖರ್ಗೆ ಅವರು ನನ್ನ ವಿಷಯ ಎಳೆದು ತಂದಿದ್ದಾರೆ. ಅದಕ್ಕೆ ನಾನು ಉತ್ತರ ನೀಡಬೇಕಿದೆ ಎಂದು ದೇವೇಗೌಡರು ಹೇಳಿದರು.

ಈ ಸಂದರ್ಭದಲ್ಲಿ ತಮ್ಮ ಕಾಲದ ಕರ್ನಾಟಕ ರಾಜ್ಯದ ರಾಜಕಾರಣವನ್ನು ಮೆಲುಕು ಹಾಕಿದ ಮಾಜಿ



ಪ್ರಧಾನಿಗಳು; ನಿಜಲಿಂಗಪ್ಪ, ದೇವರಾಜ ಅರಸು, ಬಂಗಾರಪ್ಪ ಅವರಿಗೆ ಏನಾಯಿತು ಎಂಬುದು ಮಲ್ಲಿಕಾರ್ಜುನ ಖರ್ಗೆ ಅವರಿಗೂ ಗೊತ್ತಿದೆ. ಅವರು ಹೇಗೆ ಅಧಿಕಾರ ಕಳೆದುಕೊಂಡರು ಎಂಬುದನ್ನು ಖರ್ಗೆ ಅವರು ಹೇಳಬೇಕಾಗುತ್ತದೆ. ಅವರೆಲ್ಲರೂ ಅಧಿಕಾರ ಕಳೆದುಕೊಂಡಿದ್ದಕ್ಕೆ ನಾವು ಸಾಕ್ಷಿಗಳಾಗಿದ್ದೆವು ಎಂದು ಟೀಕಾ ಪ್ರಹಾರ ನಡೆಸಿದರು.

ಮಲ್ಲಿಕಾರ್ಜುನ ಖರ್ಗೆ ಒಳ್ಳೆಯ ವ್ಯಕ್ತಿ. ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ನೋಡಬೇಕೆಂದು ನಾವೆಲ್ಲರೂ ಆಶಿಸಿದ್ದೆವು. ಆದರೆ, ಅವರ ಸ್ವಂತ ಪಕ್ಷವೇ ಅವರನ್ನು ಸಿಎಂ ಆಗಲು ಬಿಡಲಿಲ್ಲ ಎಂಬ ಸಂಗತಿಯನ್ನು ಮಾಜಿ ಪ್ರಧಾನಿಗಳು ಈ ಸಂದರ್ಭದಲ್ಲಿ ಉಲ್ಲೇಖಿಸಿದರು.

ನಿಜ ಹೇಳಬೇಕು ಎಂದರೆ, ನನ್ನ ಮತ್ತು ನರೇಂದ್ರ ಮೋದಿ ಅವರ ನಡುವಿನ ಮೈತ್ರಿ ಕಳೆದ ಲೋಕಸಭೆ ಚುನಾವಣೆಯಲ್ಲಿ ಶುರುವಾಗಿದ್ದಲ್ಲ. 2014ರಲ್ಲಿಯೇ ಆರಂಭವಾಯಿತು. ನಾನು ಅವತ್ತಿನ ಲೋಕಸಭೆ ಚುನಾವಣೆಯಲ್ಲಿ ಮೋದಿ ಅವರ ವಿರುದ್ಧ ಪ್ರಚಾರ ನಡೆಸಿದ್ದೆ. ಅವರ ಬಗ್ಗೆ ಅತ್ಯಂತ ಕಟುವಾಗಿ ಮಾತನಾಡಿದ್ದೆ. ಅವರು ಅಧಿಕಾರಕ್ಕೆ ಬಂದರೆ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಘೋಷಣೆ ಮಾಡಿದ್ದೆ. ಬಳಿಕ ಅವರು ಗೆದ್ದ ನಂತರ ನಾನು ನಿಜವಾಗಿಯೂ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ಕೊಡಲು ಮುಂದಾದೆ. ಆದರೆ, ಮೋದಿ ಅವರು ಹಾಗೆ ಮಾಡಬೇಡಿ ಎಂದು ತಡೆದರು. ನಾನು ಅವತ್ತಿನ ಅವರ ನಡಳಿವಳಿಕೆಯಿಂದ ಪ್ರಭಾವಿತನಾದೆ ಎಂದು ದೇವೇಗೌಡರು ಹೇಳಿದರು.

ಆ ಘಟನೆ ನಡೆದ ನಂತರ ನಾನು ಅವರ ಮೈತ್ರಿಯಲ್ಲಿ ಇದ್ದೇನೆ. ರಾಷ್ಟಕ್ಕೆ ನರೇಂದ್ರ ಮೋದಿ ಅವರು ಸದೃಢ ನಾಯಕತ್ವ ನೀಡಿದ್ದಾರೆ. ಜನರು ಕೂಡ ಅವರ ಮೇಲೆ ಅಪರಿಮಿತ ವಿಶ್ವಾಸ ಇರಿಸಿ ಸತತವಾಗಿ ಆಯ್ಕೆ ಮಾಡುತ್ತಾ ಬರುತ್ತಿದ್ದಾರೆ. ಇದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ ಎಂದು ಮಾಜಿ ಪ್ರಧಾನಿಗಳು ಒತ್ತಿ ಹೇಳಿದರು.

2018ರಲ್ಲಿ ಕಾಂಗ್ರೆಸ್ ಪಕ್ಷದ ಜತೆ ನಮ್ಮ ಪಕ್ಷ ಮೈತ್ರಿ ಹೊಂದಿದ್ದ ಕಾರಣಕ್ಕೆ ಹೆಚ್.ಡಿ. ಕುಮಾರಸ್ವಾಮಿ ಅವರು ಕರ್ನಾಟಕದ ಸಿಎಂ ಆಗದಂತೆ ತಡೆಯಿತು. ಆಗ ಮತ್ತೆ ಮನೆ ಬಾಗಿಲಿಗೆ ಬಂದು ಮೈತ್ರಿ ಹಸ್ತ ಚಾಚಿದ ಕಾಂಗ್ರೆಸ್ ಕುಮಾರಸ್ವಾಮಿ ಅವರನ್ನು ಸಿಎಂ ಮಾಡುವಂತೆ ಒತ್ತಡ ಹೇರಿತು. ಮತ್ತೆ ಒಂದೇ ವರ್ಷದಲ್ಲಿ ಕಾಂಗ್ರೆಸ್ ನಮಗೆ ದ್ರೋಹ ಬಗೆಯಿತು. ಈ ಎಲ್ಲಾ ವಿವರಗಳು ಖರ್ಗೆ ಅವರಿಗೆ ಗೊತ್ತಿವೆ ಎಂದು ದೇವೇಗೌಡರು ಹೇಳಿದರು.

ಈ ಸದನದಲ್ಲಿ ಖರ್ಗೆ ಅವರು ಮಾತನಾಡಿದ ಸಂದರ್ಭದಲ್ಲಿ ನಾನು ಹಾಜರು ಇರಲಿಲ್ಲ. ಯುಗಾದಿ ಹಬ್ಬ ದಕ್ಷಿಣ ಭಾರತದಲ್ಲಿಯೇ ದೊಡ್ಡ ಹಬ್ಬ, ಹೀಗಾಗಿ ನಾನು ಬೆಂಗಳೂರಿಗೆ ಹೋಗಬೇಕಿತ್ತು. ಆ ಸಂದರ್ಭದಲ್ಲಿ ಖರ್ಗೆ ಅವರು ನಮ್ಮ ಮತ್ತು ಮೋದಿ ಅವರ ನಡುವಿನ ಮೈತ್ರಿ ಬಗ್ಗೆ ಮಾತಾಡಿದ್ದಾರೆ. ಅದಕ್ಕೆ ನಾನು ಉತ್ತರ ಕೊಡಬೇಕಿತ್ತು ಎಂದು ಅವರು ಹೇಳಿದರು.

1962ರಲ್ಲಿ ನಾನು ಕರ್ನಾಟಕ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಉದ್ದೇಶಿಸಿದ್ದೆ. ಕಾಂಗ್ರೆಸ್ ಪಕ್ಷ ನನಗೆ ಟಿಕೆಟ್ ಕೊಡುವುದಾಗಿ ಹೇಳಿತ್ತು. ನೀಲಂ ಸಂಜೀವರೆಡ್ಡಿ ಅವತ್ತಿನ ಎಐಸಿಸಿ ಅಧ್ಯಕ್ಷರಾಗಿದ್ದರು. ಆದರೆ, ನನಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿತು. ನನ್ನ ರಾಜಕೀಯದ ಅಂತ್ಯಕಾಲದಲ್ಲಿ ನಾನಿದ್ದೇನೆ. ಈಗಲೂ ನಾನು ರಾಜ್ಯಸಭೆ ಸದಸ್ಯನಾಗಿ ಇಲ್ಲಿ ಕೂತಿದ್ದೇನೆ. ಇನ್ನೊಂದು ತಿಂಗಳಲ್ಲಿ ಈ ಸದಸ್ಯತ್ವದ ಅವಧಿ ಮುಗಿಯುತ್ತದೆ. ಹೀಗಾಗಿ ನಾನು ಖರ್ಗೆ ಅವರು ಎತ್ತಿರುವ ಪ್ರಶ್ನೆಗೆ ಉತ್ತರ ಕೊಡಬೇಕಿದೆ ಎಂದು ಅವರು ಒತ್ತಿ ಹೇಳಿದರು.

# ಆಟೋ ಸ್ಟ್ಯಾಂಡ್ ಸ್ಥಾಪಿಸಲು ಒತ್ತಾಯ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**



ನಗರದ ಕೇಂದ್ರ ಬಸ್ ನಿಲ್ದಾಣದ ಮುಂಭಾಗದ ಪ್ರವೇಶ ದ್ವಾರ ಹಾಗೂ ಒಳಭಾಗದಲ್ಲಿ ಆಟೋ ರಿಕ್ಷಾಗಳು ಯಾವುದೇ ನಿಯೋಜಿತ ಸ್ಟ್ಯಾಂಡ್ ಇಲ್ಲದೆ ಅಡ್ಡಾದಿಡ್ಡಿಯಾಗಿ ನಿಲ್ಲಿಸುವುದು ಹಾಗೂ ಸಂಚರಿಸುವುದರಿಂದ ಸಾರ್ವಜನಿಕರು ಮತ್ತು ಪ್ರಯಾಣಿಕರಿಗೆ ಭಾರೀ ತೊಂದರೆ ಉಂಟಾಗುತ್ತಿದೆ. ಇದರ ಪರಿಣಾಮವಾಗಿ ಸಣ್ಣಪುಟ್ಟ ಅಪಘಾತಗಳು ಸಂಭವಿಸುವ ಜೊತೆಗೆ ಬಸ್ ಸಂಚಾರಕ್ಕೂ ಅಡಚಣೆ ಉಂಟಾಗುತ್ತಿದೆ.

ಈ ಹಿನ್ನೆಲೆದಲ್ಲಿ, ಜಿಲ್ಲಾ ಅಲ್ಪಸಂಖ್ಯಾತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಮುಜಾಹಿದ್ ಮರ್ಚೆಡ್ ಅವರು ಕೇಂದ್ರ ಬಸ್ ನಿಲ್ದಾಣದಲ್ಲಿ ಸೂಕ್ತ ಆಟೋ ಸ್ಟ್ಯಾಂಡ್ ವ್ಯವಸ್ಥೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಕೆ.ಕೆ.ಆರ್.ಟಿ.ಸಿ. ಕೇಂದ್ರ ಬಸ್ ನಿಲ್ದಾಣದ ಹಳೆಯ ಕ್ವಾಟರ್ಸ್ ಪ್ರದೇಶದಲ್ಲಿ ಈಗಾಗಲೇ ಇಂದಿರಾ ಕ್ಯಾಂಟಿನ್ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಾಣವಾಗಿದ್ದು, ಇನ್ನೂ ಬಹಳಷ್ಟು ಜಾಗ ಖಾಲಿ ಇದೆ. ಈ ಜಾಗವನ್ನು ಬಳಸಿಕೊಂಡು ಆಟೋ ರಿಕ್ಷಾಗಳಿಗೆ ಪ್ರತ್ಯೇಕ ಸ್ಟ್ಯಾಂಡ್ ಮತ್ತು ಸಾರ್ವಜನಿಕರ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿದರೆ, ಸಂಚಾರ ಸುಗಮವಾಗುವುದರ ಜೊತೆಗೆ ಅನಾಹುತಗಳನ್ನು ತಪ್ಪಿಸಲು ಸಹಾಯಕವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ತಕ್ಷಣ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಹಾನಗರ ಪಾಲಿಕೆ ಆಯುಕ್ತರು ಹಾಗೂ ಕೆಕೆಆರ್‌ಟಿಸಿ ಅಧಿಕಾರಿಗಳಿಗೆ ಪತ್ರ ಬರೆದಿರುವ ಮುಜಾಹಿದ್ ಮರ್ಚೆಡ್ ಅವರು, ಕ್ರಮ ಕೈಗೊಳ್ಳದಿದ್ದಲ್ಲಿ ಸಂಭವಿಸಬಹುದಾದ ಅನಾಹುತಗಳಿಗೆ ಯಾರು ಜವಾಬ್ದಾರರು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ದೇವರ ದಾಸಿಮಯ್ಯ ಜಯಂತಿ ಆಚರಣೆ



• **ಡಿ.ಕೆ. ದೇವಿಂದ್ರ, ಯಾದಗಿರಿ**

ನಗರದ ಡಿ ದೇವರಾಜ ಅರಸ್ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ (ಕನ್ನಡ ಮಾಧ್ಯಮ) ಯಾದಗಿರಿಯಲ್ಲಿಂದು ಕೈಯಲ್ಲಿ ನೂಲು ಹಿಡಿದು, ಬದುಕಿನ ಬಟ್ಟೆ ನೇಯ್ದವರು, ಅಂತರಂಗದ ಅರಿವಿನಿಂದ ಶಿವನ ಒಲಿದವರು, ವಚನಗಳ ಮೂಲಕ ಸಮಾಜವನ್ನು ಎಚ್ಚರಿಸಿದ ವಚನ ಬ್ರಹ್ಮ, ನೇಕಾರ ಸಂತ, ಮಹಾನ್ ಜ್ಞಾನಿ, ಕನ್ನಡ ಮೊದಲ/ಆದ್ಯ ವಚನಕಾರರಾದ ದೇವರ(ಜೇಡರ) ದಾಸಿಮಯ್ಯನವರ ಜಯಂತಿಯನ್ನು ಆಚರಿಸಲಾಯಿತು. ದೇವರ(ಜೇಡರ) ದಾಸಿಮಯ್ಯನವರ ಕೊಡುಗೆ ಈ ನಾಡಿಗೆ ಅಪಾರವಾದದ್ದು ಎಂದು ಮಲ್ಲಿಕಾರ್ಜುನ ಮೇಟಿ ಮಾತನಾಡಿದರು.

ಈ ಸಂದರ್ಭದಲ್ಲಿ ಡಿಡಿಯು ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಮಲ್ಲಿಕಾರ್ಜುನ ಮೇಟಿ, ಕನ್ನಡ ಮಾಧ್ಯಮ ಶಾಲೆಯ ಮುಖ್ಯಸ್ಥರಾದ ವೆಂಕಟೇಶ ಪೂಜಾರಿ, ಸಿಬಿಎ ವಿಭಾಗದ ಮುಖ್ಯಸ್ಥರಾದ ಬಬಿನ್ ರಾಜ್, ಐಸಿಎ ವಿಭಾಗದ ಮುಖ್ಯಸ್ಥರಾದ ರಾಜೇಶ್ ಕುಮಾರ್, ವೆಂಕಟೇಶ ಮಂಚಾಲ್, ರವಿ ಪವಾರ್, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಎಲ್‌ಪಿಜಿ ಸಿಲಿಂಡರ್ ಪೂರೈಸಲು ಜಿಲ್ಲಾಡಳಿತಕ್ಕೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಹೋಟೆಲ್ ಉದ್ಯಮವು ಎದುರಿಸುತ್ತಿರುವ ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಗಂಭೀರ ಸಮಸ್ಯೆಯನ್ನು ಪರಿಹರಿಸಲು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲಾ ಹೋಟಲ್ ಮತ್ತು ಬೇಕರಿ ಮಾಲೀಕರ ಅಸೋಸಿಯೇಷನ್ ಜಿಲ್ಲಾಡಳಿತಕ್ಕೆ ಸೋಮವಾರ ಮನವಿ ಸಲ್ಲಿಸಿದೆ.



ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ, ಕೆ.ಸಿ. ಸುರೇಶಬಾಬು ಅವರ ನೇತೃತ್ವದಲ್ಲಿ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷರಾದ ವಿಕ್ರಂಪೋಲ ಅವರ ತಂಡವು ಅಪರ ಜಿಲ್ಲಾಧಿಕಾರಿಗಳಾದ ಎನ್. ಮೊಹಮ್ಮದ್ ಜುಬೈರ್ ಅವರನ್ನು ಭೇಟಿ ಮಾಡಿ, ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಹೆಚ್ಚಿನ ಸಿಲೆಂಡರ್‌ಗಳನ್ನು ಪೂರೈಸಬೇಕು ಎಂದು ಅವರು ಮನವಿ ಮಾಡಿದರು. ಮಧ್ಯಪ್ರಾಚ್ಯ ದೇಶಗಳಲ್ಲಿಯ ಯುದ್ಧದ ವಾತಾವರಣದ ಕಾರಣ ಎಲ್‌ಪಿಜಿ ಸಿಲೆಂಡರಗಳ ಪೂರೈಕೆಯಲ್ಲಿ ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಧಕ್ಕೆ ಆಗುತ್ತಿದೆ. ಅಲ್ಲದೇ, ಈ ಉದ್ಯಮದಲ್ಲಿಯ ಉದ್ಯೋಗಿಗಳ ಬದುಕಿಗೆ ಕುತ್ತು ಬೀಳುತ್ತಿದೆ. ಕಾರಣ ಸರ್ಕಾರ ಸಿಲೆಂಡರ್‌ಗಳ ಪೂರೈಕೆಯಲ್ಲಿ ವಿಶೇಷ ಆಸಕ್ತಿ ತೋರಿಸಬೇಕು ಎಂದು ಕೋರಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾದ, ಡಾ. ಮರ್ಚೆಡ್ ಮಲ್ಲಿಕಾರ್ಜುನಗೌಡ ಸೇರಿ ಹೋಟೆಲ್ ಮತ್ತು ಬೇಕರಿ ಅಸೋಸಿಯೇಷನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಪಾರ ಜಿಲ್ಲಾಧಿಕಾರಿ, ಮೊಹಮ್ಮದ್ ಜುಬೈರ್. ಎನ್ ಅವರು, ಸಮಸ್ಯೆ ಪರಿಹಾರಕ್ಕೆ ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದರು.

# ಸೂಫಿಗಳ ಹೆಸರು ಹಲವಾರು, ಹಿಂದೂಸ್ತಾನದ ಪ್ರಥಮ ಸೂಫಿ ಯಾರು?



**ಧರ್ಮ–ಮರ್ಮ**

• **ಡಾ.ಎಂ.ಮಹ್ಮದ್ ಬಾಷ ಗೂಳ್ಯಂ**
ಪ್ರಧಾನ ಸಂಪಾದಕ, ಬೆಂಗಳೂರು

**ಕಳೆದ ಸಂಚಿಕೆಯಿಂದ...**

**ಸೂಫಿಗಳಿಗೆ ವಿಭಿನ್ನ ಹೆಸರು, ಮಜಲುಗಳು**

'ಸೂಫಿ'ಗಳಿಗೆ ವಿವಿಧ ದೇಶ–ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುವ ಪರಿಪಾಠಿವೆ. ಇತಿಹಾಸದ ವಿಭಿನ್ನ ಕಾಲಘಟ್ಟಗಳು ಕೂಡ ವಿಭಿನ್ನ ನಾಮಗಳನ್ನು ನೀಡಿವೆ. ಜುಇಯಾ (ಹಸಿದವರು), ಅಲ್‌ಫಿಕ್ರಿಯಾ (ಚಿಂತಕರು), ಸಯಾಹೀನ್ (ಅರಣ್ಯವಾಸಿ), ಶಕಫ್ತಿಯಾ (ಗುಹೆವಾಸಿ) ನೂರಿಯಾ (ಪ್ರಕಾಶ ಹೃದಯಿ), ದರವೇಶ್ (ತಿರುಕರು) ಅಹ್ಲೆ ತರೀಖತ್ (ಕರ್ಮವಾದಿ). ಅವ್‌ಲಿಯಾ–ಎ–ಕರಾಮ್ (ದೈವೀ ಪುರುಷರು) ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ಶೇಖ್ ಜೂಲ್‌ನೂನ್ ಮಿಸ್ತ್ರಿಯವರು ಸೂಫಿ ಮಜಲುಗಳ ಬಗ್ಗೆ ಪ್ರಥಮವಾಗಿ ಈಜಿಪ್ಟ್‌ನಲ್ಲಿ ಸಂಕ್ಷಿಪ್ತ ವಿವರಣೆ ನೀಡಿದ್ದರು. ಇದಕ್ಕಾಗಿ ಅವರನ್ನು ಕೆಲವು ಧಾರ್ಮಿಕ ಪಂಡಿತರು 'ಜಿಂದೀಕ್' (ಕಪಟ ಧರ್ಮೀಯ) ಅಂತ ಜರಿದರು. ಶೇಖ್‌ಅಬು ಹಮ್ಜಾ ಬಾಗ್ದಾದಿಯವರು ಬಾಗ್‌ದಾದ್‌ನಲ್ಲಿ ಸಫಾ, ಜಿಕ್ರ್ (ಸ್ಮರಣೆ), ಪರಮಪ್ರೇಮ, ಚಿತ್ತದ ಬಗ್ಗೆ ಮಾತನಾಡಿದ್ದರು. ಬಾಗ್ದಾದಿನಲ್ಲಿ ಶೇಖ್ ಸರಿ ಸಖಿಯವರು 'ತೌಹೀದ್‌ನ' (ಏಕದೇವರಾಧನೆ) ಸತ್ಯತೆ, ಸಂಕೇತಗಳ ಬಗ್ಗೆ ವಿವರಿಸಿದ್ದರು. ಫನಾ (ಐಕ್ಯ), ಬಖಾ (ನಿರಂತತೆ) ಬಗ್ಗೆ ಪ್ರಥಮವಾಗಿ ಶೇಖ್‌ಅಬು ಸಯೀದ್ ಅಲ್‌ಖಿಜಾರ್ ಅವರು ಸಂಬೋಧಿಸಿದ್ದರು. ತಸವ್ವೂಫ್‌ಅನ್ನು ಧರ್ಮದ ಭಾಗವಾಗಿ ಮೊದಲ ಸಲ ಶೇಖ್ ಜುನ್ನೈದಿ ಬಾಗ್ದಾದಿಯವರು ಸಮರ್ಥವಾದ ವಾದ ಮಂಡಿಸಿದ್ದರು. ಬದಲಾದ ಕಾಲಮಾನ, ಸಂಶೋಧನಾತ್ಮಕ ವಿಷಯಗಳು ಹೊರಬಂದಂತೆ ಸೂಫಿ ಮಜಲುಗಳ ಸಂಖ್ಯೆಯೂ ಬೆಳೆಯುತ್ತಲೇ ಇದೆ. ವಿಶಿಷ್ಟ ಸೂಫಿಖ್ಯಾತಿಯ ಹಾಗೂ 'ಅನಲ್‌ಹಕ್' (ಅಹಂ ಬ್ರಹ್ಮಾಸಿ) ಎಂದು ಪ್ರತಿಪಾದಿಸಿದ್ದ ಹುಸೈನ್ ಬಿನ್ ಮನ್ಸೂರ್ ಹಲ್ಲಾಜ್ ಅವರನ್ನು ಬರ್ಬರವಾಗಿ ಹಿಂಸಿಸಿ ಗಲ್ಲಿಗೇರಿಸಿದ್ದು ಕರ್ಮಠಗಳ ಕಾಠಿಣ್ಯಕ್ಕೆ ಸಾಕ್ಷಿ.

**ಸೂಫಿಸಂನ ನೆಲೆ, ಹಿಂದುಸ್ತಾನದ ಪ್ರಥಮ ಸೂಫಿ?**


ಸೂಫಿಗಳನ್ನು ದರವೇಶರು, ಫಕೀರರು, ವಲಿಗಳು, ಔಲಿಯಾ ಎಂದೆಲ್ಲ ಕರೆಯುವುದಿದೆ. ಈ ಸೂಫಿ ಸಂತರು ಅಥವಾ ಔಲಿಯಾಗಳು ಅಲ್ಲಾಹ್‌ನ ನಿಕಟ ಸ್ನೇಹಿತರೆಂಬುದು ಭಕ್ತರ ನಂಬುಗೆ.

ಭಾರತೀಯ ಸೂಫಿಸಂ ಬಗ್ಗೆ ತರ್ಕಬದ್ಧ ಅಧ್ಯಯನ ಮಾಡಿರುವ, ಪ್ರಸಿದ್ಧ ಮರಾಠಿ ವಿದ್ವಾಂಸ ಸೇತು ಮಾಧವರಾವ್ ಪಗಡಿ ಅವರ ಪ್ರಕಾರ; ಅಲೀ ಉಲ್ ಹುಜವೇರಿಯೇ ಹಿಂದೂಸ್ತಾನದ ಮೊದಲ ಸೂಫಿ (ಕ್ರಿ.ಶ. 1000–1063)ಆಗಿದ್ದಾನೆ. ಈತನ ಶಿಷ್ಯನೇ ಮಹಮ್ಮದ್ ಬಿನ್‌ಅಲ್‌ಹಸನ್‌ಅಲ್‌ಖುತಾಲೀ. ಹಿಂದೂಸ್ತಾನಕ್ಕೆ ಬಂದ ಈತ ನೆಲೆಸಿದ್ದು ಲಾಹೋರಿನಲ್ಲಿ. ಇವನು ತನ್ನ ಮರಣಾನಂತರ ದಾತಾ ಉರುಫ್ 'ಗಂಜ ಬಕ್ಷ' ಎಂಬ ಹೆಸರಿನಲ್ಲಿ ಪ್ರಸಿದ್ಧನಾಗಿದ್ದ.

ಈತ ಅನೇಕ ಕೃತಿಗಳನ್ನೂ ರಚಿಸಿರುವ ಮಾಹಿತಿ ಇದೆ. ಆದರೆ, ಉಪಲಬ್ದವಾಗಿರುವ ಕೃತಿಯೆಂದರೆ 'ಕಶಫುಲ್ ಮಹಜುಬ' ಸೂಫಿ ಪಂಥದ ಬಗ್ಗೆ ಸುಸಂಬದ್ಧವಾದ ರೀತಿಯಲ್ಲಿ ಬರೆದಿರುವ ಮೊದಲ ಫಾರಶೀ ಭಾಷೆಯ ಕೃತಿ. ಹಿಂದೂಸ್ತಾನದಲ್ಲಿ ರಚಿತವಾದ ಮೊದಲ ಸೂಫಿ ಕೃತಿ ಎಂಬ ಹೆಗ್ಗಳಿಕೆಯೂ ಇದಕ್ಕೆ ಇದೆ.

ಇನ್ನೊಂದು ವಾದದ ಪ್ರಕಾರ; ಭಾರತಕ್ಕೆ ಸೂಫಿ ಪಂಥದ ಆಗಮನ ಅಜ್ಮೇರಿನ ಖ್ವಾಜಾ ಮೊಯಿನುದ್ದೀನ್ ಚಿಶ್ತಿಯವರ ಮೂಲಕ ಆಯಿತು. ಇಲ್ಲಿಗೆ ಇವರು ಆಗಮಿಸಿದ್ದು ಹನ್ನೊಂದನೇ ಶತಮಾನದಲ್ಲಿ ಎನ್ನಲಾಗಿದೆ. ಇದಕ್ಕಿಂತಲೂ ಮೊದಲು ದಕ್ಷಿಣದ ಕರಾವಳಿ ಪ್ರದೇಶಗಳಲ್ಲಿ ಅರಬರ ಜೊತೆಗೆ ಸಂಪರ್ಕವಿದ್ದುದರಿಂದ ಇಲ್ಲಿಗೆ ಏಳನೇ ಶತಮಾನದ ಆದಿಯಲ್ಲಿ ಭೇಟಿ ನೀಡಿದ ಸಂತ ಮಾಲಿಕ್ ಇಬ್ನೆ ದೀನಾರ್ ಅವರನ್ನು ಸೂಫಿ ಪರಂಪರೆಗೆ ಸೇರಿಸುವ ಬಗ್ಗೆ ವಾದ ಇದೆ. ಇವರು ಮುಖ್ಯವಾಗಿ ಮಿಶನರಿಯಾಗಿ ಭಾರತಕ್ಕೆ ಭೇಟಿನೀಡಿದ್ದರು.

ಇವರ ಉದ್ದೇಶ ಇಸ್ಲಾಮ್ ಧರ್ಮದ ಪ್ರಚಾರವೇ ಆಗಿದ್ದರಿಂದ ಸೂಫಿ



**ಸೂಫಿ ಪಥದ ನಿಷ್ಪತ್ತಿ, ಶರಣ ವಚನ ಪರಂಪರೆ ಉಗಮ ವಿಕಾಸ**

ಪಂಥದ ಜೊತೆಗೆ ಇವರನ್ನು ತಳಕುಹಾಕುವುದು ಸರಿಯಲ್ಲವೆಂಬ ತರ್ಕ ಇದೆ. ವಿವಾದಾತ್ಮಕ ಸಂತ ಅಲ್ ಹಲ್ಲಾಜ್‌ಅವರು 9ನೇ ಶತಮಾನದಲ್ಲಿ ಭಾರತ, ಚೀನಾಕ್ಕೆ ಭೇಟಿ ನೀಡಿದ್ದಾರೆಂಬ ಉಲ್ಲೇಖಗಳಿವೆ. ಸೂಫಿ ಪಂಥ ತನ್ನ ಪೂರ್ಣ ಪ್ರಮಾಣದ ಚಟುವಟಿಕೆಯನ್ನು ಭಾರತದಲ್ಲಿ ಪ್ರಾರಂಭಿಸಿದ್ದು ಅಜ್ಮೇರಿನ ಖ್ವಾಜಾ ಮೊಯೀನುದ್ದೀನ್ ಚಿಶ್ತಿಯವರ ಆಗಮನದ ನಂತರ ಎನ್ನುವ ವಾದಕ್ಕೆ ಬಹುಜನರ ಸಹಮತ ಇದೆ. ಭಕ್ತಿ ಪಂಥ–ದಾಸ ಪರಂಪರೆಗಳು ಕೂಡ ಸೂಫಿಗಳ ಜೊತೆಗೆ ಪರಸ್ಪರ ಸಂಬಂಧವನ್ನು ಬೆಳೆಸಿಕೊಂಡದ್ದನ್ನು ಕಾಣಬಹುದು. ಭಾರತೀಯ ನೆಲದ ಸಂಸ್ಕೃತಿಗೆ ಸೂಫಿ ಪಂಥವು ಎರವಲಾಗಿ ಬಂದಿದ್ದರೂ, ಅದು ಹೊರಗಿನ ದ್ದಾಗಿರಲಿಲ್ಲ. ಭರತಖಂಡವು ಅನಾದಿ ಕಾಲದಿಂದಲೇ ಅಧ್ಯಾತ್ಮದ ನೆಲೆಯಾಗಿತ್ತು. ಅನುಭಾವಿ ಬದುಕು ಸಹಜವಾಗಿಯೇ ಇಲ್ಲಿನ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿತ್ತು. ಸೂಫಿ ಪಂಥವು ಭಾರತಕ್ಕೆ ಕಾಲಿಟ್ಟಾಗ ಇದು ಬೇರೆ ಅನಿಸಲಿಲ್ಲ. ಇಲ್ಲಿನ ನೆಲದಲ್ಲೇ ಹುಟ್ಟಿಬಂದದ್ದು ಎನಿಸಿತು. ಭರತ ಭೂಮಿಯ ಸಹಜ ಗುಣದೊಂದಿಗೆ ಬೆಳೆದು, ಬೆರೆತು ಪರಿಪೂರ್ಣತೆಯನ್ನು ಪಡೆದುಕೊಂಡಿತು ನಿಜ. ಆದರೆ ನಾಡಿನ ವಿಮರ್ಶಕರೂ, ಇತಿಹಾಸಕಾರರು ಕೂಡ ಸೂಫಿಸಂ ಅನ್ನು ಕನ್ನಡ ಸಂಸ್ಕೃತಿಯ ಎಳೆಯನ್ನಾಗಿ ನೋಡಿಲ್ಲ. ದೇಶೀಯ ಪರಂಪರೆಯ ಮಹತ್ವ ಸಾರಿದ್ದ ಡಿ.ಆರ್.ನಾಗರಾಜ್ ರೂಮಿಯ ಸೃಜನಶೀಲತೆಗೆ ಸೀಮಿತವಾದರೆ, ರಹಮತ್ ತರಿಕೆರೆಯವರು ತಮ್ಮ ಸಮರ್ಥ ಕ್ಷೇತ್ರ ಕಾರ್ಯ, ವಿಭಿನ್ನ ನಿರೂಪಣೆ, ಸಾಂಸ್ಕೃತಿಕ ಕಥನ, ತಾತ್ವಿಕ ಚಿಂತನೆಯ ಸೂಫಿತತ್ವಕ್ಕೆ ಮನ್ನಣೆ ನೀಡಿದ್ದು ಸ್ಮರಣೀಯ.

ಸೂಫಿ ಪಂಥ ಹುಟ್ಟಿದ್ದು ಯಾವಾಗ ಎನ್ನುವುದಕ್ಕೆ ಇರುವ ಉತ್ತರದಲ್ಲಿ ಭಿನ್ನಾಭಿ ಪ್ರಾಯಗಳೂ ಅನೇಕ. ಕೆಲವರು ಮೂಲ ಪುರುಷ ಆದಮ್ ನಬಿಯ ಜೊತೆಗೇ ಸೂಫಿ ಪಂಥ ಹುಟ್ಟಿಕೊಂಡಿತು ಎನ್ನುತ್ತಾರೆ. ಇಬ್ರಾಹಿಮ್, ದಾವೂದ್, ಮೂಸಾ, ಈಸಾ ಮುಂತಾದ ನಬಿಗಳ ಸಮಯದಲ್ಲೂ ಸೂಫಿ ಪಂಥವಿತ್ತೆಂಬುದು ಹಲವರ ವಾದ. ಸೂಫಿ ಪಂಥದ ಮೂಲ ಇಸ್ಲಾಮ್ ಧರ್ಮಕ್ಕಿಂತ ಪೂರ್ವ ಇತ್ತು. ಆದರೂ ಪೈಗಂಬರರು ಇಸ್ಲಾಮ್ ಧರ್ಮ ಬೋಧನೆಗೆ ತೊಡಗಿದ ಬಳಿಕ ಸೂಫಿ ಪಂಥ ಹೆಚ್ಚು ಕಮ್ಮಿ ಇಸ್ಲಾಮ್ ಜೊತೆಗೆ ಬೆರೆತದ್ದು, ಸೂಫಿ ಪಂಥಕ್ಕೆ ಒಂದು ಗಟ್ಟಿ ನೆಲೆ ಸಿಕ್ಕಿತು. ಮುಹಮ್ಮದ್ ಪೈಗಂಬರರು ಈ ಸೂಫಿ ಅನುಭಾವಿಗಳಿಗೆ ತುಂಬ ಗೌರವವನ್ನು ಕೊಟ್ಟು ವಿಶೇಷ ಸ್ಥಾನವನ್ನು ಕಲ್ಪಿಸಿರುವ ಬಗ್ಗೆ ದಾಖಲೆಗಳಿವೆ.

ಹೆಚ್ಚು ಕಮ್ಮಿ 7ನೇ ಶತಮಾನದ ಬಳಿಕ ಬೆಳಕಿಗೆ ಬಂದು, ಇಸ್ಲಾಮಿನ ಆಧ್ಯಾತ್ಮದ ಕೇಂದ್ರವಾದ ಸೂಫಿ ಪಂಥವು, ಇಸ್ಲಾಮ್ ಧರ್ಮದಿಂದ ಬೇರ್ಪಡಿಸುವುದು ಅಸಾಧ್ಯವೆಂಬಷ್ಟು ಈಗ ಬೆರೆತುಹೋಗಿದೆ ಎನ್ನುವ ವಾದಕ್ಕೆ ಬಹುಮನ್ನಣೆ ಇದೆ. ಸೂಫಿ ತನ್ನ ದೈವಿಕ ಆರಾಧನೆ (ಇಬಾದತ್)ಯಿಂದ, ತನ್ನ ಗುಣ ನಡವಳಿಕೆಗಳಿಂದ ಭೌತಿಕ ದೇಹವನ್ನು ತೊರೆದು ಆಧ್ಯಾತ್ಮಿಕ ದೇಹವನ್ನು ಪ್ರವೇಶಿಸುತ್ತಾನೆ. ಈ ಹಾದಿಯಲ್ಲಿ ಸೂಫಿಯು ವೈಯಕ್ತಿಕ ಅನನ್ಯತೆಯನ್ನು ಕಳೆದುಕೊಳ್ಳುತ್ತಾನೆ. ಸ್ವಯಂ ಸಿದ್ಧಿಯನ್ನು ಸಾಧಿಸಿದ ಬಳಿಕ ಕಟ್ಟಕಡೆಯ ಸತ್ಯವೆಂಬ ಪರಮೋಚ್ಚ ಗುರಿಯನ್ನು ತಲಪುತ್ತಾನೆ. ಇದು ಸಾಧನೆ ಮಾತ್ರವಲ್ಲ, ಶಬ್ದಗಳಲ್ಲಿ ಕಟ್ಟಿಹಾಕಲು ಸಾಧ್ಯವಾಗದಂತಹ ಪರಮಾನಂದದ ಸಾಕಾರದ ಹಂತ, ಎಲ್ಲ ಆತ್ಮಗಳೂ ಹಪಹಪಿಸುವ ಪ್ರಶಾಂತ ಸ್ಥಿತಿ ಎನ್ನುವ ಜಿಜ್ಞಾಸೆಗೆ ಎಲ್ಲೆಡೆ ಮಾನ್ಯತೆ ಇದೆ.

ಪ್ರವಾದಿಗಳು ಬೇರೆಯವರೊಂದಿಗೆ 'ದಯೆ, ವಿನಯದಿಂದ ವರ್ತಿಸಿ' ಎಂದರೆ, ಬಸವಣ್ಣನವರು 'ಏನು ಬಂದಿರಿ, ಹದುಳುವಿದ್ದೀರೆ? ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ' ಎಂದು ಪ್ರಶ್ನಿಸುತ್ತಾರೆ. ಸಂಕ್ಷಿಪ್ತಗೊಳಿಸುವುದಾದರೆ, ಸಮಾಜ ಸುಧಾರಣೆಗೆ, ಸಮಾಜದಲ್ಲಿನ ಮೇಲು, ಕೀಳು ಕಿತ್ತೆಸೆಯಲು, ಸತ್ಯಪ್ರತಿಪಾದನೆಗೆ, ತತ್ತ್ವ ಬೋಧನೆಗೆ ನಿಷ್ಠುರವಾಗಿ ಇವರಿಬ್ಬರೂ ಹೋರಾಡಿದ್ದು ದಾಖಲಾರ್ಹ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)